ಸಂಪುಟ: 01 । ಸಂಚಿಕೆ: 166 । ಸೋಮವಾರ, ಜನವರಿ 24, 2022 konkanavahini@gmail.com 08382-200146 ಕಾರವಾರ ಪುಟಗಳು -06

ರಿಯಲ್ ನ್ಯೂಸ್ ಮೀಡಿಯಾರವರ

# ಕೊಂಕಣವಾಹಿನಿ

₹4

ಇದು ಸತ್ಯದ ಅನಾವರಣ...!!

@konkanavahini @konkanavahini 6361721985 ಕೊಂಕಣವಾಹಿನಿ | RNINO:KARKAN27371 | ಪ್ರಧಾನ ಸಂಪಾದಕರು : ದೀಪಕಕುಮಾರ ಶೇಣ್ವಿ




## ರಾತ್ರಿಯಾದರೂ ನಡೆಯದ ರಾಷ್ಟ್ರಧ್ವಜಾವರೋಹಣ



**ಕೊಂಕಣವಾಹಿನಿ ನ್ಯೂಸ್**
**ಮುಂಡಗೋಡ:** ತಾಲೂಕಿನ ಹನುಮಾಪುರ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ರಾತ್ರಿ 8 ಗಂಟೆಯಾದರೂ ರಾಷ್ಟ್ರಧ್ವಜ ಇಳಿಸದೇ ಗ್ರಾಪಂ ಸಿಬ್ಬಂದಿ ಅಗೌರವ ತೋರಿರುವುದು ವಿವಾದಕ್ಕೆ ಕಾರಣವಾಗಿದೆ.

ಪ್ರತಿ ದಿನದ ಬೆಳಗ್ಗೆ ರಾಷ್ಟ್ರಧ್ವಜ ಏರಿಸಿ, ಸೂರ್ಯಾಸ್ತದ ವೇಳೆಗೆ ಇಳಿಸಬೇಕೆಂಬ ನಿಯಮವಿದೆ. ಆದರೆ, ರಾಷ್ಟ್ರಧ್ವಜವನ್ನು ಪ್ರತಿದಿನ ಇಳಿಸುವ ಬದಲು, ಕೆಲ ಸಿಬ್ಬಂದಿ ಬೆಳಗ್ಗೆ ಏರಿಸಿ ಹಾಗೆ ಬಿಡುತ್ತಾರೆಂಬ ದೂರುಗಳಿವೆ.


ಹನುಮಾಪುರ ಗ್ರಾಪಂನಲ್ಲಿ ಶನಿವಾರ ರಾತ್ರಿ 8 ಗಂಟೆಯಾದರೂ, ರಾಷ್ಟ್ರಧ್ವಜ ಇಳಿಸಿಲ್ಲ. ಈ ಬಗ್ಗೆ ಗ್ರಾಮಸ್ಥರು ಮೊಬೈಲ್‌ನಲ್ಲಿ ವಿಡಿಯೋ ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ಸಂದೇಶ ಕಳಿಸಿದ್ದಾರೆ. ನಿರ್ಲಕ್ಷ್ಯ ತೋರಿರುವ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ದಾಂಡೇಲಿಯಲ್ಲಿ ಭಾನುವಾರ 96 ಕೊರೊನಾ ಪ್ರಕರಣ ದೃಢ

**ಕೊಂಕಣವಾಹಿನಿ ನ್ಯೂಸ್**
**ದಾಂಡೇಲಿ:** ಅತ್ಯಂತ ವೇಗವಾಗಿ ಪ್ರಸರಣ ಗೊಳ್ಳುತ್ತಿರುವ ಕೊರೊನಾ ಮೂರನೇ ಅಲೆಯ ಸೋಂಕು ಭಾನುವಾರ ದಾಂಡೇಲಿಯ 98 ಜನರಲ್ಲಿ ದೃಢಪಟ್ಟಿದೆ.

ಇದರಲ್ಲಿ 38 ಪುರುಷರು ಮತ್ತು 58 ಮಹಿಳೆಯರು ಸೋಂಕಿಗೆ ತುತ್ತಾಗಿದ್ದಾರೆ, ಭಾನುವಾರದ ಪ್ರಕರಣಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ 457ಕ್ಕೆ ಏರಿಕೆಯಾಗಿದೆ. ಸೋಂಕಿತರನ್ನು ಹೋಂ ಕ್ವಾರಂಟೈನ್‌ನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಹಸೀಲ್ದಾರ್ ಕಾರ್ಯಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಮುಂಡಗೋಡ ತಾಲೂಕಿನಲ್ಲಿ ಕೊರೊನಾ ಮಹಾಸ್ಫೋಟ



**ಕೊಂಕಣ ವಾಹಿನಿ ನ್ಯೂಸ್**
**ಮುಂಡಗೋಡ:** ತಾಲೂಕಿನಲ್ಲಿ ಮತ್ತೆ ಭಾನುವಾರ ಕೊರೋನಾ ಮಹಾ ಸ್ಫೋಟಗೊಂಡಿದ್ದು 53 ಜನರಲ್ಲಿ ಸೋಂಕು ದೃಢಪಟ್ಟಿದೆ.


ಈ ಬಾರಿ ಬಹುತೇಕ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಪಾಸಿಟಿವ್ ಪ್ರಮಾಣ ಗಣನೀಯವಾಗಿ ಏರಿದೆ. ಅದರಲ್ಲೂ ಲೊಯೊಲಾ ಶಿಕ್ಷಣ ಕೇಂದ್ರದ ಪ್ರೌಢಶಾಲೆ, ಕಾಲೇಜು ವಿಭಾಗದ ಬರೋಬ್ಬರಿ 16 ವಿದ್ಯಾರ್ಥಿಗಳಲ್ಲಿ ಸೋಂಕು ದೃಢಪಟ್ಟಿದೆ.

ತಾಲೂಕಿನ ಬಡ್ಡಿಗೇರಿ ಪ್ರಾಥಮಿಕ ಶಾಲೆಯ ಮೂವರು ವಿದ್ಯಾರ್ಥಿಗಳಿಗೆ, ಮಳಗಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಐವರು, ಪಾಳಾ ಉರ್ದು ಶಾಲೆಯ ಇಬ್ಬರು, ಕಲಕೊಪ್ಪ ಕಿರಿಯ ಪ್ರಾಥಮಿಕ ಶಾಲೆಯ ಇಬ್ಬರು

5ನೇ ಪುಟಕ್ಕೆ

# ಭಾರತದಲ್ಲಿ ಸಮುದಾಯ ಪ್ರಸರಣ ಹಂತ ತಲುಪಿದ ಒಮಿಕ್ರಾನ್ ಸೋಂಕು!

## ವಿದೇಶಿ ಪ್ರವಾಸ ಮಾಡದವರಿಗೂ ಒಮಿಕ್ರಾನ್; ಎಸ್-ಜೀನ್ ಡ್ರಾಪ್‌ಔಟ್ ಸ್ಕ್ರೀನಿಂಗ್‌ಗಳಲ್ಲಿ ತಪ್ಪು ನೆಗೆಟಿವ್ ವರದಿ ಸಂಭವ



**ಕೊಂಕಣವಾಹಿನಿ ನ್ಯೂಸ್**
**ದೆಹಲಿ:** ಒಮಿಕ್ರಾನ್ ರೂಪಾಂತರದ ಹರಡುವಿಕೆ ಭಾರತದಲ್ಲಿ ಸಮುದಾಯ ಪ್ರಸರಣದ ಹಂತ ತಲುಪಿದೆ. ಅದರಲ್ಲೂ ವಿವಿಧ ಮೆಟ್ರೋ ನಗರಗಳಲ್ಲಿಯೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿದೆ. ಪ್ರತಿದಿನವೂ ಕೇಸ್‌ಗಳ ಸಂಖ್ಯೆ ವೇಗವಾಗಿ ಬೆಳೆಯುತ್ತಿದೆ ಎಂದು ಭಾರತೀಯ ಸಾರ್ಸ್–ಕೊವ್–1 ಜಿನೋಮಿಕ್ಸ್ ಕನ್ಸೋರ್ಟಿಯಂ (ಇನ್‌ಸಾಕೋಗ್) ತಿಳಿಸಿದೆ.

ಒಮಿಕ್ರಾನ್ ರೂಪಾಂತರದ ಸಾಂಕ್ರಾಮಿಕ ಉಪ–ರೂಪಾಂತರ ಬಿಎ .2 ಎಂಬ ವಂಶಾವಳಿ ಭಾರತದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಹೀಗಾಗಿ ಎಸ್ ಜೀನ್ ಡ್ರಾಪ್‌ಔಟ್ ಆಧಾರಿತ ಸ್ಕ್ರೀನಿಂಗ್ ಗಳು ಹೆಚ್ಚಿನ ತಪ್ಪು ನೆಗೆಟಿವ್ ವರದಿ ಕೊಡುವ ಸಾಧ್ಯತೆಯಿದೆ ಎಂದು ಹೇಳಿದೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಡಿಯಲ್ಲಿ ಬರುವ ಈ ಇನ್‌ಸಾಕೋಗ್ ಇಂದು ಲಘುಪ್ರಕಟಣೆ ಬಿಡುಗಡೆ ಮಾಡಿದ್ದು, ಸದ್ಯ ಬಹುತೇಕ ಒಮಿಕ್ರಾನ್ ಸೋಂಕಿತರಿಗೆ ಯಾವುದೇ ಲಕ್ಷಣಗಳು ಇಲ್ಲ ಅಥವಾ ಸೌಮ್ಯವಾದ ಲಕ್ಷಣಗಳಿವೆ. ಆದರೆ ನಿರ್ಲಕ್ಷಿಸುವಂತಿಲ್ಲ. ಕೊವಿಡ್ 19 ಮೂರನೇ ಅಲೆಯಲ್ಲೂ ಕೂಡ ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಮತ್ತು ಐಸಿಯು ಚಿಕಿತ್ಸೆ ಪಡೆಯುವವರ ಸಂಖ್ಯೆಯಲ್ಲಿ

5ನೇ ಪುಟಕ್ಕೆ

### ನಿನ್ನೆ 50 ಸಾವಿರಕ್ಕೂ ಅಧಿಕ ಸೋಂಕು ಪ್ರಕರಣ

ರಾಜ್ಯಾದ್ಯಂತ ಓಮಿಕ್ರಾನ್ ಭೀತಿ ನಡುವೆಯೇ ಕೊರೋನಾ ಮೂರನೆ ಅಲೆಯ ಆರ್ಭಟ ಮುಂದುವರೆದಿದ್ದು, ಕಳೆದ 24 ಗಂಟೆಗಳಲ್ಲಿ 50 ಸಾವಿರಕ್ಕೂ ಅಧಿಕ ಸೋಂಕು ಪ್ರಕರಣ ಪತ್ತೆಯಾಗಿದ್ದು, 19 ಸಾವು ವರದಿಯಾಗಿದೆ. ಈ ಕುರಿತಂತೆ ರಾಜ್ಯ ಆರೋಗ್ಯ ಸಚಿವ ಕೆ ಸುಧಾಕರ್ ಅವರು ಟ್ವೀಟ್ ಮಾಡಿ ಮಾಹಿತಿ ನೀಡಿದ್ದು, ರಾಜ್ಯ ದಲ್ಲಿ ಇಂದು 50,210 ಹೊಸ ಸೋಂಕು ಪ್ರಕರಣಗಳು ವರದಿಯಾಗಿದೆ. ಈ ಪೈಕಿ ರಾಜಧಾನಿ ಬೆಂಗಳೂರು ಒಂದರಲ್ಲೇ 26,299 ಹೊಸ ಸೋಂಕು ಪ್ರಕರಣಗಳು ವರದಿಯಾಗಿದೆ, ರವಿವಾರ ಪ್ರಕರಣ ವರದಿ ಬಳಿಕ ರಾಜ್ಯದಲ್ಲಿನ ಸೋಂಕು ಸಕಾರಾತ್ಮಕ ದರ 22.7 7ಕ್ಕೆ ಏರಿಕೆಯಾಗಿದೆ. ಅಂತೆಯೇ ಇಂದು ರಾಜ್ಯಾದ್ಯಂತ ಒಟ್ಟು 19 ಮಂದಿ ಸೋಂಕಿತರು ಸಾವನ್ನಪ್ಪಿದ್ದು, ಈ ಪೈಕಿ 8 ಮಂದಿ ಸೋಂಕಿತರು ಬೆಂಗಳೂರಿನಲ್ಲೇ ಮೃತಪಟ್ಟಿದ್ದಾರೆ. ರವಿವಾರ 22,842 ಮಂದಿ ಸೋಂಕಿತರು ಗುಣಮುಖರಾಗಿದ್ದು, ರಾಜ್ಯಾದ್ಯಂತ ಒಟ್ಟು 2,20,459 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ.

### ದೇಶಾದ್ಯಂತ ವ್ಯಾಪಿಸಿದ ವೈರಸ್

ರವಿವಾರ ದೇಶದಲ್ಲಿದಲ್ಲ 24ಗಂಟೆಯೊಳಗೆ 3,33,533 ಹೊಸ ಕರೋನ ವೈರಸ್ ಸೋಂಕಿತರು ಕಂಡುಬಂದಿದ್ದು, 525 ಮಂದಿ ಸಾವನ್ನಪ್ಪಿದ್ದಾರೆ. ಇದರೊಂದಿಗೆ ಭಾರತದಲ್ಲಿ ಒಟ್ಟು ಕೊರೊನಾ ಸೋಂಕಿತರ ಸಂಖ್ಯೆ 4 ಕೋಟಿ ಗಡಿಗೆ ತಲುಪಿದೆ, ಸಕ್ರಿಯ ಪ್ರಕರಣಗಳು 21,87,205 ಕ್ಕೆ ಏರಿಕೆಯಾಗಿದ್ದು, ಸಾವಿನ ಸಂಖ್ಯೆ 4,89,409 ಕ್ಕೆ ಏರಿದೆ .ಸಾವು ಮತ್ತು ಸಕ್ರಿಯ ಪ್ರಕರಣ ಹೆಚ್ಚಳ ದಾಖಲಾಗಿದೆ. ಮೊರನೇ ಅಲೆ ಮತ್ತಷ್ಟು ಏರಿಕೆ ಯಾಗಲಿದೆ ಆದರೆ ಮುಂದಿನ 30 ದಿನ ನಿರ್ಣಕವೆಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ

# ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ತಾತ್ಕಾಲಿಕ ಪರೀಕ್ಷಾ ವೇಳಾಪಟ್ಟಿಯೇ ಅಂತಿಮ?

## ಮಾರ್ಚ್ 28 ರಿಂದ ಏಪ್ರಿಲ್ 11ರವರೆಗೆ ಎಸ್‌ಎಸ್‌ಎಲ್‌ಸಿಪರೀಕ್ಷೆ



**ಕೊಂಕಣವಾಹಿನಿ ನ್ಯೂಸ್**
**ಬೆಂಗಳೂರು:** ಪರೀಕ್ಷಾ ವೇಳಾಪಟ್ಟಿ ಬದಲಾವಣೆಗೆ ಹೆಚ್ಚು ಮನವಿಗಳು ಬಂದಿಲ್ಲವಾದ ಕಾರಣ ಎಸ್ ಎಸ್ ಎಲ್ ಸಿ, ದ್ವಿತೀಯ ಪಿಯುಸಿ ತಾತ್ಕಾಲಿಕ ಪರೀಕ್ಷಾ ವೇಳಾಪಟ್ಟಿಯೇ ಅಂತಿಮವಾಗುವ ಸಾಧ್ಯತೆ ಇದೆ.

ಮಾರ್ಚ್ 28 ರಿಂದ ಏಪ್ರಿಲ್ 11ರವರೆಗೆ ಎಸ್‌ಎಸ್‌ಎಲ್‌ಸಿಪರೀಕ್ಷೆ ನಡೆದರೆ, ಏಪ್ರಿಲ್ 16 ರಿಂದ ಮೇ 4 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ ತಾತ್ಕಾಲಿಕ ವೇಳಾಪಟ್ಟಿಯಂತೆಯೇ ನಡೆಯುವ ಸಾಧ್ಯತೆ ಇದೆ. ಶಾಲೆಗಳಲ್ಲಿ ಈಗಾಗಲೇ ಶೇ.70ರಷ್ಟು ಪಠ್ಯ ಬೋಧಿಸಲಾಗಿದೆ. ಬಾಕಿ ಉಳಿದ ಶೇ.30ರಷ್ಟು ಪಠ್ಯ ಬೇಗ ಬೋಧಿಸಲು ಸೂಚನೆ ನೀಡಲಾಗಿದೆ.

ಕೊರೊನಾ ನಡುವೆ ಎಸ್‌ಎಸ್ ಎಲ್ ಸಿ, ಪಿಯುಸಿ ತರಗತಿಗಳು ನಡೆಯುತ್ತಿವೆ. ಅಂದುಕೊಂಡಂತೆ ಎಲ್ಲ ಪಠ್ಯಕ್ರಮ ಪೂರ್ಣಗೊಳಿಸಿದರೆ, ತಾತ್ಕಾಲಿಕ ವೇಳಾಪಟ್ಟಿಯನ್ನೇ ಅಂತಿಮ ಮಾಡುವ ಸಾಧ್ಯತೆ ಇದೆ. ಫೆಬ್ರವರಿ 1ರವರೆಗೆ ತಕರಾರು ಸಲ್ಲಿಸುವುದಕ್ಕೆ ಅವಕಾಶವಿದೆ. ಆದರೆ ಈವರೆಗೆ ಕೇವಲ 150 ಜನರಿಂದ ಮಾತ್ರ ಮನವಿಗಳು ಬಂದಿವೆ. ಪರೀಕ್ಷೆಯ ಕೊನೇ ಹಂತದಲ್ಲಿ ಸಣ್ಣ ಪುಟ್ಟ ಬದಲಾವಣೆಗಳು ಮಾತ್ರ ಇರುತ್ತದೆ. ಅದನ್ನು ಹೊರತುಪಡಿಸಿದರೆ ಯಾವುದೇ ಬದಲಾವಣೆ ಆಗಲ್ಲ. ಹೀಗಾಗಿ ತಾತ್ಕಾಲಿಕ ವೇಳಾಪಟ್ಟಿ ಬಹುತೇಕ ಫೈನಲ್ ಆಗುವ

5ನೇ ಪುಟಕ್ಕೆ

### ಪಿಯುಸಿ ಮುಖ್ಯ ಪರೀಕ್ಷೆ

ಪದವಿ ಪೂರ್ವ ಶಿಕ್ಷಣ ಇಲಾಖೆ 2021–22 ನೇ ಸಾಲಿನ ದ್ವಿತೀಯ ಪಿಯುಸಿಯ ತಾತ್ಕಾಲಿಕ ವೇಳಾಪಟ್ಟಿ ಬಿಡುಗಡೆ ಮಾಡಿದೆ. ಆ ಪ್ರಕಾರ ಏಪ್ರಿಲ್ 16ರಿಂದ ಮೇ 4ರವರೆಗೆ ಪಿಯು ವಾರ್ಷಿಕ ಪರೀಕ್ಷೆ ನಡೆಯಲಿದೆ. ಏಪ್ರಿಲ್ 14 ಗಣಿತ, ಏಪ್ರಿಲ್ 18 ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಏ.20ರಂದು ಇತಿಹಾಸ, ಭೌತಶಾಸ್ತ್ರ, ಏಪ್ರಿಲ್ 22

5ನೇ ಪುಟಕ್ಕೆ

### ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆ

ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಜ.6 ಸಂಜೆ ಪ್ರಕಟಿಸಿತ್ತು. ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ ಮಾರ್ಚ್ 28ರಿಂದ ಏಪ್ರಿಲ್ 11ರವರೆಗೆ ಪರೀಕ್ಷೆ ನಡೆಯಲಿದೆ. ಜನವರಿ 14ರೊಳಗೆ ಪೋಷಕರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಮಾರ್ಚ್ 28ರಂದು ಪ್ರಥಮ ಭಾಷೆ, ಮಾರ್ಚ್ 30ರಂದು ದ್ವಿತೀಯ ಭಾಷೆ, ಅರ್ಥಶಾಸ್ತ್ರ, ಕೋರ್

5ನೇ ಪುಟಕ್ಕೆ


### ಪೂರ್ವಸಿದ್ಧತಾ ಮತ್ತು ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿ

ಪದವಿ ಪೂರ್ವ ಶಿಕ್ಷಣ ಇಲಾಖೆಯು 2021–22ನೇ ಸಾಲಿನ ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ, ಪೂರ್ವ ಸಿದ್ಧತಾ ಮತ್ತು ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ವೇಳಾಪಟ್ಟಿಯನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಚೆಕ್ ಮಾಡಬಹುದು. 2021–22ನೇ ಸಾಲಿನ ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಪಠ್ಯಕ್ರಮದಲ್ಲಿ ಹಾಗೂ ಪ್ರಶ್ನೆ

5ನೇ ಪುಟಕ್ಕೆ

## ಸೋಡಿಗದ್ದೆ ಶ್ರೀ ಮಹಾಸತಿ ದೇವಿ ಹಾಲಹಬ್ಬ ಜಾತ್ರೆ ಆರಂಭ

### ಮಾಸ್ಕ್ ಧರಿಸಿದ ಭಕ್ತರಿಗಷ್ಟೆ ದೇವಸ್ಥಾನದ ಒಳಗೆ ದೇವರ ದರ್ಶನಕ್ಕೆ ಅವಕಾಶ



**ಕೊಂಕಣವಾಹಿನಿ ನ್ಯೂಸ್**
**ಭಟ್ಕಳ:** ಜಿಲ್ಲೆಯ ಪ್ರಸಿದ್ಧ ಸೋಡಿಗದ್ದೆ ಶ್ರೀ ಮಹಾಸತಿ ಅಮ್ಮನವರ ದೇವಸ್ಥಾನದ ಹಾಲಹಬ್ಬ ಜಾತ್ರಾ ಮಹೋತ್ಸವ ಸರಕಾರದ ಕೋವಿಡ್ ಮಾರ್ಗಸೂಚಿಯಂತೆ ಸರಳವಾಗಿ ಪ್ರಾರಂಭಗೊಂಡಿತು.

ಸತತ 9 ದಿನಗಳ ಕಾಲ ನಡೆಯುವ ಈ ಜಾತ್ರೆಗೆ ಉತ್ತರ ಕನ್ನಡ ಜಿಲ್ಲೆಯ ಭಕ್ತರಲ್ಲದೇ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭಕ್ತರು ಸಹ ಆಗಮಿಸಿ ಮಹಸತಿ ದೇವರಿಗೆ ಪೂಜೆ ಸಲ್ಲಿಸುವ ಪರಿಪಾಠವಿದ್ದು ವಿಶೇಷವಾಗಿ ಮಹಾಸತಿ ದೇವರಿಗೆ ಹೂವಿನ ಪೂಜೆ, ಕೆಂಡ ಸೇವೆ, ಗೊಂಬೆ ಸೇವೆ ಸೇರಿದಂತೆ ವಿವಿಧ ರೀತಿಯ ಹರಕೆಗಳನ್ನು ತೀರಿಸುತ್ತಾರೆ.

ಕೋವಿಡ್ ಕಾರಣ ತಾಲೂಕು ಆಡಳಿತ ಜನಸಂದಣಿ ಸೇರದಂತೆ ಮಾರ್ಗಸೂಚಿ ಹೊರಡಿಸಿ ಸಂಪ್ರದಾಯದಂತೆ ಸರಳವಾಗಿ ಜಾತ್ರೆ ಆಚರಿಸಲು ಅನುವು ಮಾಡಿಕೊಟ್ಟಿದೆ.

ಭಾನುವಾರ ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮವನ್ನು ನೆರವೇರಿಸಿ ಮಹಾಸತಿ ಪ್ರಥಮ ಪೂಜೆ ಸಲ್ಲಿಸಲಾಯಿತು. ಮಾಸ್ಕ್ ಧರಿಸಿದ ಭಕ್ತರಿಗಷ್ಟೆ ದೇವಸ್ಥಾನದ ಒಳಗೆ ದೇವರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ದೇವಸ್ಥಾನದ ಆವರಣದಲ್ಲಿ ಎಲ್ಲ ಜಾತ್ರಾ ಪೇಟೆಯ ಅಂಗಡಿಗಳಿಗೆ ನಿರ್ಬಂಧ ವಿಧಿಸಲಾಗಿತ್ತು.

ಬೆಳಗ್ಗೆಯಿಂದಲೇ ಸ್ಥಳೀಯರು ಸೇರಿದಂತೆ ವಿವಿಧೆಡೆಗಳಿಂದ ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಕೃತಾರ್ಥರಾದರು. ಜಾತ್ರೆ ಪೇಟೆ ನಿರ್ಬಂಧಿಸಿರುವುದರಿಂದ ಭಾನುವಾರ ಭಕ್ತರ ಸಂಖ್ಯೆ ವಿರಳವಾಗಿತ್ತು. ಶಾಸಕ ಸುನೀಲ್ ನಾಯ್ಕ, ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ, ದೇವಸ್ಥಾನಕ್ಕೆ ಆಗಮಿಸಿ ಶ್ರೀ ದೇವರ ದರ್ಶನ ಪಡೆದರು. ಆಡಳಿತ ಮಂಡಳಿಯ ಸದಸ್ಯರು ತಹಸೀಲ್ದಾರ್ ರವಿಚಂದ್ರ, ಪೊಲೀಸ್ ಸಿಬ್ಬಂದಿ ಭಕ್ತರಿಗೆ ಸರಳವಾಗಿ ದರ್ಶನಕ್ಕೆ ತೆರಳಲು ಅವಕಾಶ ಮಾಡಿಕೊಟ್ಟರು.

## ಪರೀಕ್ಷೆಗೆ ಒಳಪಡದ ವಿದ್ಯಾರ್ಥಿನಿಗೆ ಕೋವಿಡ್ ಪಾಸಿಟಿವ್ ವರದಿ!

### ಶಾಲೆಯಲ್ಲಿ ನಡೆಸಿದ ಪರೀಕ್ಷೆ ವರದಿ ನೀಡಿದ ಆರೋಗ್ಯ ಸಿಬ್ಬಂದಿ ಎಡವಟ್ಟು

**ಕೊಂಕಣವಾಹಿನಿ ನ್ಯೂಸ್**
**ಮುಂಡಗೋಡ:** ಶಾಲೆಗೆ ಹೋಗದಿದ್ದರೂ ವಿದ್ಯಾರ್ಥಿನಿಯ ಕೋವಿಡ್ ಪರೀಕ್ಷೆ ನಡೆದು ಪಾಸಿಟಿವ್ ವರದಿ ಬಂದು ಪಾಲಕರು ಹೌಹಾರಿದ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಹಳೂರಿನ ವಿದ್ಯಾರ್ಥಿನಿಯೊಬ್ಬಳು ಕರಗಿನಕೊಪ್ಪದ ಲೊಯೋಲ ಆಂಗ್ಲ ಮಾಧ್ಯಮ ಶಾಲೆಯಲ್ಲಿ 6ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಆಕೆ, ಜ.12ರಿಂದ 19ರವರೆಗೆ ಅನಾರೋಗ್ಯ ಇರುವುದರಿಂದ, ಶಾಲೆಗೆ ಹೋಗಿರಲಿಲ್ಲ.

ಆದರೆ, ಲೊಯೋಲ ಶಾಲೆಯಲ್ಲಿ

5ನೇ ಪುಟಕ್ಕೆ

### ವರದಿ ಯಾರದ್ದು?

ಶಾಲೆಗೆ ಹೋಗದ ಆರನೇ ತರಗತಿಯ ವಿದ್ಯಾರ್ಥಿನಿಯ ಕೋವಿಡ್ ಟೆಸ್ಟ್ ವರದಿ ಪಾಸಿಟಿವ್ ಬಂದಿರುವುದು ನಿಜಕ್ಕೂ ಯಾವ ವಿದ್ಯಾರ್ಥಿಯದ್ದು? ಎಂಬುದನ್ನು ಆರೋಗ್ಯ ಇಲಾಖೆ ಸ್ಪಷ್ಟಪಡಿಸಬೇಕಿದೆ. ನಿಜವಾಗಿ ಪಾಸಿಟಿವ್ ಇದ್ದ ವಿದ್ಯಾರ್ಥಿ ಗೊತ್ತಾಗದೇ, ಇಡಿ ಶಾಲೆಯಲ್ಲಿ ತಿರುಗಾಡಿದರೆ ಯಾರು ಹೊಣೆ ಎಂದು ಪಾಲಕರು ಪ್ರಶ್ನಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಪಾಲಕರು ಒತ್ತಾಯಿಸಿದ್ದಾರೆ.

5ನೇ ಪುಟಕ್ಕೆ

## ನೇತಾಜಿ ಪ್ರತಿಮೆಗೆ ಗೌರವ ಅರ್ಪಣೆ



**ಕೊಂಕಣವಾಹಿನಿ ನ್ಯೂಸ್**
**ಕಾರವಾರ:** ನಗರದ ಹೃದಯ ಭಾಗದಲ್ಲಿರುವ ನೇತಾಜಿ ಸುಭಾಷಚಂದ್ರ ಬೋಸ್ ಅವರ ಪ್ರತಿಮೆಗೆ ನೇತಾಜಿಯವರ ಜನ್ಮದಿನದಂದು ಗಣ್ಯರು ಗೌರವ ಸೂಚಿಸಿದರು.

ರವಿವಾರ ಮುಂಜಾನೆ ನಗರಸಭೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ, ನಗರಸಭಾ ಅಧ್ಯಕ್ಷ ನಿತಿನ ಪಿಕಳೆ, ಉಪಾಧ್ಯಕ್ಷ ಪ್ರಕಾಶ ನಾಯ್ಕ ಮುಂತಾದವರು ಭಾಗವಹಿಸಿ ಪುಷ್ಪನಮನ ಸಲ್ಲಿಸಿದರು. ನಗರಸಭಾ ಕಮಿಷನರ್ ಆರ್.ಪಿ. ನಾಯ್ಕ ಅವರೂ ಹಾಜರಿದ್ದರು.

ಈ ಬಗ್ಗೆ ಮಾತನಾಡಿದ ಗಣಪತಿ ಉಳ್ವೇಕರ ಅವರು ನೇತಾಜಿಯವರು ದೇಶಕ್ಕಾಗಿ ಮಾಡಿದ ಬಲಿದಾನ ಅತ್ಯಂತ ದೊಡ್ಡದು ಭಾರತವು ಅವರ ತ್ಯಾಗವನ್ನು ಎಂದಿಗೂ ಮರೆಯುವುದಿಲ್ಲ ಎಂದು ತಿಳಿಸಿದರು. ನಗರಸಭಾ ಸದಸ್ಯರು, ಸಿಬ್ಬಂದಿ ಹಾಗೂ ನಗರದ ಗಣ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## WANTED (ಬೇಕಾಗಿದ್ದಾರೆ)

A leading and unique Co-operative having 111 Branches across 9 Districts in Karnataka (Attractive Deposit plans- Loan Advancing- Value added services-Insurance) require talented candidates for following Branches Karwar - Kajubag - Kodibag - Nandangadda - Kadwad- Majali- Mallapur- Halga.

ಕರ್ನಾಟಕ ರಾಜ್ಯಾದ್ಯಂತ ಕಾರ್ಯಕ್ಷೇತ್ರ ಹೊಂದಿರುವ ರಾಜ್ಯದ 9 ಜಿಲ್ಲೆಗಳಲ್ಲಿ, ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಒಟ್ಟು 111 ಶಾಖೆಗಳನ್ನು ಹೊಂದಿದ್ದು, ಕಾರವಾರ- ಕಾಜುಬಾಗ- ಕೋಡಿಬಾಗ- ನಂದನಗದ್ದಾ- ಕಡವಾಡ- ಮಾಜಾಳಿ- ಮಲ್ಲಾಪುರ- ಹಳಗಾ ಶಾಖೆಗಳಿಗೆ ಈ ಕೆಳಗಿನ ಖಾಲಿ ಇರುವ ಹುದ್ದೆಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ.

| Designation | Qualification |
|---|---|
| Branch Manager/ Asst.Branch Manager / Senior Assistant/ Junior Assistant | MBA / M.com / B.com / BBA / BBM/ B.sc (With Computer Knowledge) |
| Internal Auditor | MBA / M.com / B.com / BBA / BBM/ B.sc (working experience under the Chartered Accountant/Tax Consultant/Accountant in Co-operative Field) |
| Field Officer | MBA / M.com / B.com / BBA / BBM/ B.sc (With Computer Knowledge ) |

Salary+ Good Increment, Bonus, Provident Fund & Gratuity are applicable

1. ಅಭ್ಯರ್ಥಿಯ ಅರ್ಹತೆ, ಸಾಮರ್ಥ್ಯ ಮತ್ತು ಅನುಭವದ ಆಧಾರದ ಮೇಲೆ ಉತ್ತಮ ಸಂಬಳ ನೀಡಲಾಗುವುದು
2) ವಯೋಮಿತಿ 21 ರಿಂದ 40 ವರ್ಷ

1) Preference will given to Challenging Savvy, Confident & Dynamic Candidates Only.
2) Age Limit- 21 to 40 years.

ಈ ಮೇಲಿನ ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಬಯೋಡೆಟಾ, 1 ಪಾಸ್ ಪೋರ್ಟ್ ಸೈಜ್ ಫೋಟೊದೊಂದಿಗೆ milagresrecruitment@gmail.com ಇ–ಮೇಲ್ ಮೂಲಕ ಅಥವಾ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ:–

ವ್ಯವಸ್ಥಾಪಕ ನಿರ್ದೇಶಕರು:

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ.,ಕಾರವಾರ
(ಆಕರ್ಷಕ ಠೇವು ಯೋಜನೆ–ಸಾಲ ನೀಡಿಕೆ –ಮೌಲ್ಯಾಧಾರಿತ ಸೇವೆ–ಇನ್ಸುರೆನ್ಸ್)

ಪ್ರಧಾನ ಕಚೇರಿ: ಕೇಶವ್ ಶೇಟ್ ರೋಡ್, 1ನೇ ಕ್ರಾಸ್ ಸೋನಾರ್‌ವಾಡ, ಕಾರವಾರ–581304 ಫೋ: 6366554818, 9538200103

## ಹೃತ್ಪೂರ್ವಕ ಧನ್ಯವಾದಗಳು



ಉತ್ತರ ಕನ್ನಡ ಜಿಲ್ಲೆಯ ಕಾರವಾರ–ಅಂಕೋಲಾ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಅನುದಾನವನ್ನು ತಂದು ಜನರ ಕಷ್ಟಗಳಿಗೆ ಸ್ಪಂದಿಸಿ, ಶ್ರಮಿಸುತ್ತಿರುವ ನಮ್ಮ ಹೆಮ್ಮೆಯ ಶಾಸಕಿ

**ಶ್ರೀಮತಿ ರೂಪಾಲಿ ಎಸ್. ನಾಯ್ಕ**

ಅವರಿಗೆ ಧನ್ಯವಾದಗಳು.

ಇವರು 2021–22ನೇ ಸಾಲಿನ ರಾಜ್ಯ ಹೆದ್ದಾರಿ ರಸ್ತೆ ಸುರಕ್ಷತಾ ಕಾಮಗಾರಿಗಳ ಅಡಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಅಮದಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯ ಹೈದರಘಾಟ ಕೂಡುವ ರಸ್ತೆಯಿಂದ ಅಷ್ಟ ಸಿದ್ಧಿವಿನಾಯಕ ಮತ್ತು ಗಾಯತ್ರಿ ದೇವಸ್ಥಾನಕ್ಕೆ ಸೇರುವ ರಸ್ತೆ ನಿರ್ಮಾಣಕ್ಕಾಗಿ 250.000 ಲಕ್ಷ ವೆಚ್ಚದ ಕಾಮಗಾರಿ ಭೂಮಿಪೂಜೆ ನೆರವೇರಿಸಿರುತ್ತಾರೆ. ಈ ರಸ್ತೆಯಿಂದ ಖೈರಮಕ್ಕಿ, ಬಾಳೆರಾಶಿ, ಗಾಂವಕಾರವಾಡ, ಉಂಬಳಮಕ್ಕಿ, ಎಡರಗದ್ದೆ, ಆಲಜಿಮಕ್ಕಿ, ತಾರಬೈಲ, ಬೊಮ್ಮಯ್ಯದೇವರಮಕ್ಕಿ, ಗೋಡ್ಸೆಗದ್ದೆ ಈ ಭಾಗದ ಜನರ ಹಲವಾರು ವರ್ಷಗಳ ಬೇಡಿಕೆಯು ಈಗ ಈಡೇರಿದೆ.

ಧನ್ಯವಾದ ಸಲ್ಲಿಸುವವರು

**ಮೋಹನ ಟಿ.**
ಧರ್ಮದರ್ಶಿಗಳು, ಅಷ್ಟ ಸಿದ್ಧಿವಿನಾಯಕ ದೇವಸ್ಥಾನ
ಹಾಗೂ ಈ ಭಾಗದ ಸಮಸ್ತ ನಾಗರೀಕರು

# ಕರವೇ ಗಜಸೇನೆ ಮಹಿಳಾ ಘಟಕ ಉದ್ಘಾಟನೆ



**ಕೊಂಕಣವಾಹಿನಿ ನ್ಯೂಸ್**
**ಹೊನ್ನಾವರ:** ಪಟ್ಟಣದ ರಾಯಲ್ ಕೇರಿಯ ಅಂಬೇಡ್ಕರ್ ಸಭಾಭವನದಲ್ಲಿ ಕರವೇ ಗಜ ಸೇನೆಯ ವತಿಯಿಂದ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಸಂಘಟನೆಯ ತಾಲೂಕು ಮಹಿಳಾ ಘಟಕ ಅಧಿಕೃತವಾಗಿ ಉದ್ಘಾಟನೆಗೊಂಡಿತು.

ಜಿಲ್ಲಾಧ್ಯಕ್ಷ ಉಮೇಶ್ ಹರಿಕಾಂತ ಹಾಗೂ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಶಿಲ್ಪಾ ನಾಯ್ಕ ಅವರ ಸಮ್ಮುಖದಲ್ಲಿ ತಾಲೂಕಿನ ಮಹಿಳಾ ಘಟಕದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಮಹಿಳಾ ಘಟಕದ ತಾಲೂಕ ಕಾರ್ಯದರ್ಶಿಯಾಗಿ ಶೈಲಾ ಸುರೇಶ್ ನಾಯ್ಕ, ಕಾರ್ಯದರ್ಶಿಯಾಗಿ ರತ್ನ ರವಿ ನಾಯ್ಕ, ಗೌರವಾಧ್ಯಕ್ಷರಾಗಿ ಮಾಲಿನಿ ವೆಂಕಟೇಶ್ ನಾಯ್ಕ ನೇಮಕಗೊಂಡರು. ಹಾಗೂ ಹಲವಾರು ಕಾರ್ಯಕರ್ತರು ಸೇರ್ಪಡೆಗೊಂಡರು.

ಸಭೆಯಲ್ಲಿ ಕರವೇ ಗಜಸೇನೆ ಜಿಲ್ಲಾ ಮಹಿಳಾ ಘಟಕದ ಕಾರ್ಯದರ್ಶಿ ರೋಹಿಣಿ ಕಾರಳ್ಳಿ, ತಾಲೂಕು ಅಧ್ಯಕ್ಷ ಗಣೇಶ ನಾಯ್ಕ, ಜಿಲ್ಲಾ ಕೋಶಾಧ್ಯಕ್ಷ ನೀಲಕಂಠ ನಾಯ್ಕ, ಜಿಲ್ಲಾ ಮಾಧ್ಯಮ ವಕ್ತಾರ ರಾಜೇಶ್ ನಾಯ್ಕ,ಜಿಲ್ಲಾ ಸಂಚಾಲಕ ಕೇಶವ ಗೌಡ, ಸಂದೀಪ ನಾಯ್ಕ, ಸಂತೋಷ ನಾಯ್ಕ, ಸೀತಾರಾಮ ನಾಯ್ಕ, ಮಾರುತಿ ನಾಯ್ಕ ಸೇರಿದಂತೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಇಂಡಿಯಾ ಗೇಟ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಹೊಲೋಗ್ರಾಮ್ ಪ್ರತಿಮೆ ಅನಾವರಣಗೊಳಿಸಿದ ಮೋದಿ

**ಕೊಂಕಣವಾಹಿನಿ ನ್ಯೂಸ್**
**ದೆಹಲಿ:** ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125 ನೇ ಜನ್ಮದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯ ಇಂಡಿಂ–ಯಾ ಗೇಟ್‌ನಲ್ಲಿ ನೇತಾಜಿ ಅವರ ಹೊಲೊಗ್ರಾಮ್ ಪ್ರತಿಮೆಯನ್ನು ಅನಾವರಣ ಗೊಳಿಸಿದರು. ಸ್ಥಳದಲ್ಲಿ ಗ್ರಾನೈಟ್ ಪ್ರತಿಮೆ ಯನ್ನು ಸ್ಥಾಪಿಸುವವರೆಗೆ ಹೊಲೋಗ್ರಾಮ್ ಪ್ರತಿಮೆ ಇಲ್ಲಿರಲಿದೆ.



ಅನಾವರಣ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಇದೊಂದು ಐತಿಹಾಸಿಕ ಸ್ಥಳ ಮತ್ತು ಐತಿಹಾಸಿಕ ಸಂದರ್ಭ. ನೇತಾಜಿ ಬ್ರಿಟಿಷರ ಮುಂದೆ ತಲೆಬಾಗಲು ನಿರಾಕರಿಸಿದರು. ಅವರ ಪ್ರತಿಮೆಯು ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡುತ್ತದೆ ಎಂದು ಹೇಳಿದರು. ಇದು ಕೇವಲ ಪ್ರತಿಮೆ ಮಾತ್ರವಲ್ಲ, ಭಾರತದ ಸ್ವಾತಂತ್ರ್ಯಕ್ಕಾಗಿ ಎಲ್ಲವನ್ನೂ ನೀಡಿದ ನೇತಾಜಿಗೆ ಸೂಕ್ತವಾದ ಗೌರವವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

# ಅಂಕೋಲಾ: ಕೋಳಿಅಂಕ ಅಡ್ಡೆ ಮೇಲೆ ದಾಳಿ; ಓರ್ವನ ಬಂಧನ

**ಕೊಂಕಣವಾಹಿನಿ ನ್ಯೂಸ್**
**ಅಂಕೋಲಾ** : ತಾಲೂಕಿನ ಬಿಳಿಹೊಂಯ್ಗಿ ಗ್ರಾಮದ ಉಪ್ಪಿನ ಆಗರದ ಖಾಲಿ ಜಾಗದಲ್ಲಿ ಕೋಳಿ ಅಂಕ ನಡೆಸಲಾಗುತ್ತಿದೆ ಎನ್ನುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಓರ್ವನನ್ನು ಬಂಧಿಸಿದ್ದು ಇನ್ನೋರ್ವ ಪರಾರಿಯಾಗಿದ್ದಾನೆ.

ಬಿಳಿಹೊಂಯ್ಗಿ ನಿವಾಸಿ ವಿಠ್ಠಲ ತೋಕು ಹರಿಕಂತ್ರ (63) ಬಂಧಿತ ಆರೋಪಿಯಾಗಿದ್ದು ಇನ್ನೋರ್ವ ಆರೋಪಿ ಮೇಲಿನ ಮಂಜುಗುಣಿ ಗ್ರಾಮದ ಮಂಜುನಾಥ ನಾರಾಯಣ ನಾಯ್ಕ ಪರಾರಿಯಾಗಿದ್ದಾನೆ.

ಬಂಧಿತರಿಂದ ಎರಡು ಬೈಕ್ ಹಾಗೂ ಆಟಕ್ಕೆ ಬಳಸುತ್ತಿದ್ದ 3 ಹುಂಜ, 4 ಕೋಳಿಕತ್ತಿ ಹಾಗೂ 900 ರೂ. ನಗದು ವಶಪಡಿಕೊಂಡಿದ್ದಾರೆ. ಪಿಎಸ್‌ಐ ಪ್ರವೀಣಕುಮಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.




# ಕಡಿಮೆ ಅವಧಿಯಲ್ಲಿ ಗಣರಾಜ್ಯೋತ್ಸವ ಪರೇಡ್‌ಗೆ 12 ರಾಜ್ಯಗಳ ಸ್ತಬ್ಧಚಿತ್ರಗಳ ಆಯ್ಕೆ

**ಕೊಂಕಣವಾಹಿನಿ ನ್ಯೂಸ್**
**ದೆಹಲಿ:** ದೆಹಲಿ ಕಂಟೋನ್ಮೆಂಟ್ ಪ್ರದೇಶದ ರಾಷ್ಟ್ರೀಯ ರಂಗಶಾಲಾ ಶಿಬಿರದಲ್ಲಿ ಗಣರಾಜ್ಯೋತ್ಸವದ ಪರೇಡ್‌ನ ಭಾಗವಾಗಿರುವ 21 ಸ್ತಬ್ಧಚಿತ್ರಗಳಿಗೆ ಅಂತಿಮ ಸ್ಪರ್ಶ ನೀಡಲಾಗುತ್ತಿದೆ. 12 ರಾಜ್ಯಗಳು ಮತ್ತು ಒಂಬತ್ತು ಸಚಿವಾಲಯಗಳು ಅಥವಾ ಸರ್ಕಾರಿ ಇಲಾಖೆಗಳ ಸ್ತಬ್ಧಚಿತ್ರಗಳು ಪರೇಡ್‌ನಲ್ಲಿ ಭಾಗವಹಿಸುತ್ತವೆ.

ಸೀಮಿತ ಸ್ಥಳ ಮತ್ತು ಸಮಯದ ಕಾರಣದಿಂದಾಗಿ 12 ರಾಜ್ಯಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ ಎಂದು ಶನಿವಾರ ಶಿಬಿರದಲ್ಲಿದ್ದ ರಕ್ಷಣಾ ಸಚಿವಾಲಯದ ಪಿಆರ್ ಒ ನಂಬಿಬೌ ಮರಿನ್ಮಾಯಿ ಹೇಳಿದ್ದಾರೆ. ಹಲವು ರಾಜ್ಯಗಳು ಈ ಬಗ್ಗೆ ದನಿಯೆತ್ತಿವೆ. ವಿಷಯವೆಂದರೆ ನಮಗೆ ಸೀಮಿತ ಸ್ಥಳ, ಸೀಮಿತ ಸಮಯವಿದೆ. ಕಲೆ, ಸಂಗೀತ, ಸಂಸ್ಕೃತಿ ಮತ್ತು ಇತರ ಪರಿಣತಿಯ ತಜ್ಞರ ಸಮಿತಿ ಇದೆ. ಸಮಿತಿಯು ಈ ವಿಷಯಗಳನ್ನು ಪರಿಶೀಲಿಸಿದೆ. ಸ್ತಬ್ಧಚಿತ್ರ ಪ್ರದರ್ಶಿಸಲು ನಾವು 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದೇವೆ.

ಆದರೆ ಸ್ಥಳ ಮತ್ತು ಸಮಯದ ಕಾರಣ, ನಾವು 12 ರಾಜ್ಯಗಳನ್ನು ಮಾತ್ರ ಆಯ್ಕೆ ಮಾಡಿದ್ದೇವೆ. ಬೇರೆ ಯಾವುದೇ ಕಾರಣವಿಲ್ಲ, ಎಂದು ಮರಿನ್ಮಾಯಿ ಹೇಳಿದರು. ಪರೇಡ್‌ಗೆ ಆಯ್ಕೆಯಾಗದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳದ ಮುಖ್ಯಮಂತ್ರಿಗಳು ಪ್ರಧಾನಿಗೆ ಪತ್ರ ಬರೆದಿದ್ದರು. 75 ವರ್ಷಗಳ ಸ್ವಾತಂತ್ರ್ಯವನ್ನು ಸ್ಮರಿಸುವ ಉದ್ದೇಶವನ್ನು ಹೊಂದಿರುವ ಆಜಾದಿ ಕಾ ಅಮೃತ್ ಮಹೋತ್ಸವ್ ಎಂಬುದು ಸ್ತಬ್ಧಚಿತ್ರದ ಪ್ರಮುಖ ವಿಷಯವಾಗಿದೆ.

ಸ್ತಬ್ಧಚಿತ್ರದ ಭಾಗವಾಗಿರುವ ಪ್ರದರ್ಶಕರಲ್ಲಿ ಹಲವಾರು ವಿದ್ಯಾರ್ಥಿಗಳು ಸೇರಿದ್ದಾರೆ ಮತ್ತು ರಾಷ್ಟ್ರೀಯ ರಂಗಶಾಲಾದಲ್ಲಿ ಕ್ಯಾಂಪಿಂಗ್ ಮಾಡಿದ್ದಾರೆ.

ಬೆಂಗಳೂರಿನ 20 ವರ್ಷದ ಅಂತಿಮ ವರ್ಷದ ಪದವಿ ವಿದ್ಯಾರ್ಥಿನಿ ಅದಿತಿ ಉರಾಲ್ ಅವರು ಕರ್ನಾಟಕ ರಾಜ್ಯದ ಸ್ತಬ್ಧಚಿತ್ರ ಭಾಗವಾಗಿರುವ 12 ಯಕ್ಷಗಾನ ಕಲಾವಿದರ



ಗುಂಪಿನಲ್ಲಿದ್ದಾರೆ. ತಂಡವು ಸ್ಥಳದಲ್ಲಿ ಕ್ಯಾಂಪ್ ಮಾಡುತ್ತಿದೆ ಮತ್ತು ಸುಮಾರು 10 ದಿನಗಳಿಂದ ಅಲ್ಲಿ ಅಭ್ಯಾಸ ನಡೆಸುತ್ತಿದೆ. ಅವರು ಮೊದಲ ಬಾರಿಗೆ ಪರೇಡ್‌ನಲ್ಲಿ ಪ್ರದರ್ಶನ ನೀಡಲು ಉತ್ಸುಕರಾಗಿದ್ದಾರೆ ಎಂದು ಅವರು ಹೇಳಿದರು. ಆಕೆಯ ತಂದೆ ಯಕ್ಷಗಾನ ಕಲಾವಿದರಾಗಿದ್ದು, ಸುಮಾರು 10 ವರ್ಷಗಳಿಂದ ಅಭ್ಯಾಸ ಮತ್ತು ಪ್ರದರ್ಶನ ನೀಡುತ್ತಿದ್ದಾರೆ. ಈ ವರ್ಷ ಪರೇಡ್‌ನಲ್ಲಿರುವ ಇನ್ನೊಬ್ಬ ಸಾಧಕಿ ನಿಶಾ ಖರಾಯತ್, ಪಿಥೋರಗಢದಲ್ಲಿ ಸಂಗೀತ ಕಲಿಯುತ್ತಿರುವ ಕಾಲೇಜು ವಿದ್ಯಾರ್ಥಿನಿ. ಉತ್ತರಾಖಂಡದ ಛಪೇಲಿ ನೃತ್ಯವನ್ನು ಪ್ರದರ್ಶಿಸುವ 16 ನರ್ತಕಿಯರಲ್ಲಿ ಹೆಚ್ಚಾಗಿ ವಿದ್ಯಾರ್ಥಿಗಳಿದ್ದಾರೆ.

ಅರುಣಾಚಲ ಪ್ರದೇಶದ ಟ್ಯಾಬ್ಲೋವು 16 ನರ್ತಕರು ತಪು ನೃತ್ಯವನ್ನು ಪ್ರದರ್ಶಿಸುತ್ತದೆ, ಅರುಣಾಚಲ ಪ್ರದೇಶದ ಪೂರ್ವ ಸಿಯಾಂಗ್ ಜಿಲ್ಲೆಯ ಡೇವಿಡ್ ದರಾಂಗ್, 33 ವರ್ಷ ವಯಸ್ಸಿನವರು ಇದನ್ನು ಯುದ್ಧ ನೃತ್ಯ ಎಂದು ಉಲ್ಲೇಖಿಸುತ್ತಾರೆ. ಮನೆಮನೆಗೆ ಹಬ್ಬ ಹರಿದಿನಗಳಲ್ಲಿ ಮಾಡುವ ನೃತ್ಯವಾಗಿರುವುದರಿಂದ ಅವರಿಗೆ ಸ್ವಲ್ಪ ತರಬೇತಿಯ ಅಗತ್ಯವಿತ್ತು ಎನ್ನುತ್ತಾರೆ ಅಂಗಡಿ ಮಾಲೀಕ ದಾರಂಗ್. ದರಾಂಗ್ ಮೊದಲ ಬಾರಿಗೆ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸುತ್ತಿದ್ದಾರೆ. ಇದು ಆಂಗ್ಲೋ–ಅಬೋರ್ ಯುದ್ಧವನ್ನು ಆಧರಿಸಿದ ಟ್ಯಾಬ್ಲೋನ ಭಾಗವಾಗಿದೆ.ಶನಿವಾರದಂದು ಕೆಲವು ಸ್ತಬ್ಧ ಚಿತ್ರಗಳಿಗೆ ಪೇಂಟ್ ಬಳಿಯಲಾಯಿತು. ಈ ಸ್ತಬ್ಧಚಿತ್ರಗಳನ್ನು ತಿಂಗಳುಗಳಿಂದ ಕಷ್ಟಪಟ್ಟು ಜೋಡಿಸಲಾಗಿದೆ. ಉದಾಹರಣೆಗೆ, ರಾಜ್ಯದ ಸಾಂಪ್ರದಾಯಿಕ ಕರಕುಶಲ ವಸ್ತುಗಳನ್ನು ಪ್ರದರ್ಶಿಸುವ ಕರ್ನಾಟಕದ ಟ್ಯಾಬ್ಲೋವನ್ನು ತಯಾರಿಸಲು 45 ದಿನಗಳು ಮತ್ತು 140 ಕೆಲಸಗಾರರು ತೆಗೆದುಕೊಂಡರು ಮತ್ತು ಮೂರು ಟ್ರಕ್‌ಲೋಡ್‌ಗಳಲ್ಲಿ ದೆಹಲಿಗೆ ತಂದು ಇಲ್ಲಿ ಜೋಡಿಸಲಾಯಿತು.ಪರೇಡ್‌ನ ಭಾಗವಾಗಿರುವ ಇತರ ರಾಜ್ಯಗಳು ಮೇಘಾಲಯವಾಗಿದ್ದು, ಮಹಿಳಾ ನೇತೃತ್ವದ ಸಹಕಾರಿ ಸಂಘಗಳು ಮತ್ತು ಸ್ವ–ಸಹಾಯ ಗುಂಪುಗಳಿಗೆ ಅವರ ಸ್ತಬ್ಧಚಿತ್ರವು ಗೌರವವನ್ನು ನೀಡುತ್ತದೆ. ಗುಜರಾತ್‌ನ ಸ್ತಬ್ಧಚಿತ್ರವು ರಾಜ್ಯದ ಬುಡಕಟ್ಟು ಕ್ರಾಂತಿಕಾರಿಗಳ ಮೇಲೆ ಕೇಂದ್ರೀಕರಿಸುತ್ತದೆ ಎಂದು ಮರಿನ್ಮಾಯಿ ಹೇಳಿದರು. ಆದ–ರೆ ಹರ್ಯಾಣದ ಸ್ತಬ್ಧಚಿತ್ರ ಕ್ರೀಡೆಗೆ ರಾಜ್ಯದ ಕೊಡುಗೆಯ ಮೇಲೆ ಕೇಂದ್ರೀಕರಿಸುತ್ತದೆ.ಉತ್ತರ ಪ್ರದೇಶದ ಸ್ತಬ್ಧಚಿತ್ರ ಕಾಶಿ ವಿಶ್ವನಾಥ ಧಾಮವನ್ನು ಪ್ರದರ್ಶಿಸುತ್ತದೆ ಮತ್ತು ಗೋವಾ ಪ್ರದೇಶದ ಐತಿಹಾಸಿಕ ಮತ್ತು ನೈಸರ್ಗಿಕ ಆಕರ್ಷಣೆಗಳನ್ನು ಚಿತ್ರಿಸುತ್ತದೆ. ಮಹಾರಾಷ್ಟ್ರದ ಜೀವವೈವಿಧ್ಯವನ್ನು ರಾಜ್ಯದ ಸ್ತಬ್ಧಚಿತ್ರದಲ್ಲಿ ಪ್ರತಿನಿಧಿಸಲಾಗುವುದು. ಪಂಜಾಬ್ ಸ್ವಾತಂತ್ರ್ಯ ಹೋರಾಟಕ್ಕೆ ಪಂಜಾಬ್‌ನ ಕೊಡುಗೆಯನ್ನು ಪ್ರದರ್ಶಿಸಿದರೆ, ಛತ್ತೀಸ್‌ಗಢ ಮತ್ತು ಜಮ್ಮು ಮತ್ತು ಕಾಶ್ಮೀರವೂ ಪರೇಡ್‌ನ ಭಾಗವಾಗಿದೆ.

ತಮ್ಮ ಸ್ತಬ್ಧಚಿತ್ರಗಳನ್ನು ಹೊಂದಿರುವ ಸಚಿವಾಲಯಗಳ ಪೈಕಿ ಸಂಸ್ಕೃತಿ ಸಚಿವಾಲಯ ಶ್ರೀ ಅರಬಿಂದೋ ಅವರ 150 ವರ್ಷಗಳ ಬಗ್ಗೆ ಸ್ತಬ್ಧಚಿತ್ರ ಪ್ರದರ್ಶಿಸುತ್ತದೆ. ಕೇಂದ್ರ ಲೋಕೋಪಯೋಗಿ ಇಲಾಖೆಯು ಸುಭಾಸ್ ಚಂದ್ರ ಬೋಸ್ ಅವರ 125 ನೇ ಜನ್ಮ ವಾರ್ಷಿಕೋತ್ಸವದ ಕುರಿತು ಒಂದು ಸ್ತಬ್ಧಚಿತ್ರವನ್ನು ಮಾಡಿದೆ. ಶಿಕ್ಷಣ ಸಚಿವಾಲಯವು ರಾಷ್ಟ್ರೀಯ ಶಿಕ್ಷಣ ನೀತಿಯ ಸ್ತಬ್ಧಚಿತ್ರವನ್ನು ಪ್ರದರ್ಶಿಸುತ್ತದೆ. ಕಾನೂನು ಮತ್ತು ನ್ಯಾಯ ಸಚಿವಾಲಯ, ನಾಗರಿಕ ವಿಮಾನಯಾನ ಸಚಿವಾಲಯ, ಜವಳಿ ಸಚಿವಾಲಯ, ಜಲಶಕ್ತಿ ಸಚಿವಾಲಯ, ಸಿಆರ್‌ಪಿಎಫ್ ಮತ್ತು ಅಂಚೆ ಇಲಾಖೆಗಳ ಸ್ತಬ್ಧಚಿತ್ರಗಳು ಸಹ ಪರೇಡ್‌ನ ಭಾಗವಾಗಲಿವೆ.

# ಅಡಿಕೆ ಸಸಿಗಳಿಗೆ ವಕ್ಕರಿಸಿಕೊಂಡ ಕಾಡುಹಂದಿಗಳು

## ರಕ್ಷಣೆ ಮಾಡಿಕೊಳ್ಳಲಾಗದೆ ಹೆಣಗಾಡುತ್ತಿರುವ ಸನವಳ್ಳಿ ಭಾಗದ ರೈತರು

**ಕೊಂಕಣವಾಹಿನಿ ನ್ಯೂಸ್**
**ಮುಂಡಗೋಡ:** ತಾಲೂಕಿನ ಸನವಳ್ಳಿ ಭಾಗದಲ್ಲಿ ಕಾಡುಹಂದಿಗಳು ಅಡಿಕೆ ಸಸಿಗಳನ್ನು ತಿಂದು ಕಿತ್ತು ಹಾಕುವ ಮೂಲಕ ರೈತರಿಗೆ ಅಪಾರ ಪ್ರಮಾಣದ ಹಾನಿ ಮಾಡುತ್ತಿರುವುದು ಕಂಡುಬಂದಿದೆ.

ಕಳೆದ ಹದಿನೈದು ದಿನಗಳಿಂದ ಸನವಳ್ಳಿ ಭಾಗದಲ್ಲಿ ಕಾಡುಹಂದಿಗಳು ಹೆಚ್ಚಾಗಿ ಸಂಚರಿಸುತ್ತಿವೆ. ರಾತ್ರಿ ವೇಳೆ ಗದ್ದೆಗಳಿಗೆ ದಾಳಿ ನಡೆಸುವ ಕಾಡು ಹಂದಿಗಳು ಅಡಿಕೆ ಸಸಿಗಳನ್ನು ಕಿತ್ತು ಹಾಕುತ್ತಿವೆ. ಎರಡು– ಮೂರು ರೈತರಿಗೆ ಸೇರಿದ ನೂರಾರು ಅಡಿಕೆ ಸಸಿಗಳನ್ನು ಕಿತ್ತು ಹಾಕಿವೆ.

ವರ್ಷವಿಡೀ ಕಷ್ಟಪಟ್ಟು ಬೆಳೆಸಿದ ಅಡಿಕೆ ಸಸಿಗಳನ್ನು ಈಗ ಕಾಡುಹಂದಿಗಳು ನಾಶಪಡಿಸುವುದರಿಂದ ರೈತರಿಗೆ ದಿಕ್ಕುತೋಚದಂತಾಗಿದೆ.



ಲಕ್ಷಾಂತರ ರೂ. ಸಾಲ ಮಾಡಿ ಖರ್ಚು ಮಾಡಿ ರೈತರು ಹಚ್ಚಿದ ಸಸಿಗಳನ್ನು ರಕ್ಷಣೆ ಮಾಡಿಕೊಳ್ಳಲಾಗದೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸೋಮವಾರ ಬೆಳೆ ಹಾನಿಯಾದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಜರುಗಿಸುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# ಸುಭಾಷಚಂದ್ರ ಬೋಸ್ ಜನ್ಮ ದಿನಾಚರಣೆ



**ಕೊಂಕಣವಾಹಿನಿ ನ್ಯೂಸ್**
**ಅಂಕೋಲಾ:** ಕೆನರಾ ವೆಲ್‌ಫೇರ್ ಟ್ರಸ್ಟ್‌ನ ಪಿ.ಎಂ.ಹೈಸ್ಕೂಲ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ ಚಂದ್ರ ಭೋಸ್ ಅವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮುಖ್ಯಾಧ್ಯಾಪಕ ಎಂ.ಎ.ನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಎನ್‌ಸಿಸಿ ಕಮಾಂಡರ್ ಜಿ.ಆರ್.ತಾಂಡೇಲ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕರಾದ ವಿ.ಎಂ.ನಾಯ್ಕ, ಪ್ರವೀಣ ಆಗೇರ, ಆನಂದ ನಾಯ್ಕ, ಹೀನಾ ಶೇಖ್, ನಿವೃತ್ತ ಶಿಕ್ಷಕ ಪ್ರಕಾಶ ಕುಂಜಿ, ಶಿಕ್ಷಕ ಸಿಬ್ಬಂದಿ ಹಾಗೂ ಎನ್‌ಸಿಸಿ ಕೆಡೆಟ್‌ಗಳು ಭಾಗವಹಿಸಿದ್ದರು.

# ಅಪಘಾತ ಪರಿಹಾರ ನಿಧಿ ವಿತರಣೆ



**ಕೊಂಕಣವಾಹಿನಿ ನ್ಯೂಸ್**
**ಕುಮಟಾ:** ಬೈಕ್ ಅಪಘಾತದಲ್ಲಿ ತೀವ್ರ ಗಾಯಗೊಂಡು ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ತಾಲೂಕಿನ ಹಣ್ಣೇಮಠದ ನಿವಾಸಿ ಗಣಪತಿ ಮಾಸ್ತಿ ಪಟಗಾರ ಅವರಿಗೆ ಗ್ರಾಮ ಒಕ್ಕಲು ಯುವ ಬಳಗದವರು ಆರ್ಥಿಕ ನೆರವು ನೀಡಿದ್ದಾರೆ.

ಗಣಪತಿ ಪಟಗಾರ ಅವರ ಹಣ್ಣೇಮಠದ ನಿವಾಸಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದ ಯುವ ಬಳಗದವರು, 7500 ರೂ. ನೆರವು ನೀಡಿ, ಗಣಪತಿಯವರು ಬೇಗ ಗುಣಮುಖರಾಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ರಾಮ ಒಕ್ಕಲು ಯುವ ಬಳಗದ ಸದಸ್ಯರು ಹಾಗೂ ಹಣ್ಣೇಮಠದ ಸ್ಥಳೀಯ ಯುವ ಬಳಗದ ಸದಸ್ಯರು ಹಾಜರಿದ್ದರು. ಗಣಪತಿ ಕುಟುಂಬವರ್ಗದವರು ಪರಿಹಾರ ನಿಧಿಯನ್ನು ನೀಡಿದ ಯುವ ಬಳಗದವರಿಗೆ ಕೃತಜ್ಞತೆ ಸಲ್ಲಿಸಿದರು.

# ನಂದಿಕಟ್ಟಾ ರಸ್ತೆಯಲ್ಲಿ ಗುಂಡಿ ಗಂಡಾಂತರ

**ಕೊಂಕಣವಾಹಿನಿ ನ್ಯೂಸ್**
**ಮುಂಡಗೋಡ:** ತಾಲೂಕಿನ ನಂದಿಕಟ್ಟಾ ರಸ್ತೆಯಲ್ಲಿ ಎಲ್ಲೆಂದರಲ್ಲಿ ಗುಂಡಿಗಳು ಬಿದ್ದು ಜನರ ಜೀವ ಹಿಂಡುತ್ತಿದೆ.

ಟಿಬೇಟಿಯನ್ ಕಾಲನಿ ನಂ. 6 ರಿಂದ ಹಿಡಿದು ನಂದಿಕಟ್ಟಾವರೆಗೆ ರಸ್ತೆಯಲ್ಲಿ ವಾಹನಗಳಿರಲಿ, ಜನ ನಡೆದಾಡಲೂ ಆಗದ ಸ್ಥಿತಿ ಉಂಟಾಗಿದೆ. ನಿತ್ಯ ಕೂಲಿ ಕೆಲಸಕ್ಕಾಗಿ ಕಾರ್ಮಿಕರು ಇದೇ ರಸ್ತೆಯಲ್ಲಿ ತಿರುಗಾಡುತ್ತಾ–ರೆ. ಹಲವಾರು ಬಾರಿ ಇದೇ ರಸ್ತೆಯಲ್ಲಿ ಬೈಕ್ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ.

ರಸ್ತೆಯಲ್ಲಿ ಸಂಚರಿಸುವ ವಾಹನಗಳು ಸಂಪೂರ್ಣ ಹಾಳಾಗಿ ಹೋಗುತ್ತಿವೆ.



ಈ ರೀತಿ ಆದರೆ ಜನರ ಸಮಸ್ಯೆಗಳನ್ನು ಕೇಳುವವರು ಯಾರು ಸಂಬಂಧಪಟ್ಟ ಇಲಾಖೆಯವರು ಅಧಿಕಾರಿಗಳು ಸ್ಥಳದ ಪರಿಶೀಲನೆ ಮಾಡಿ ಮುಂದಿನ ದಿನಗಳಲ್ಲಿ ಆಗುವ ಅನಾಹುತ ಗಳನ್ನು ತಪ್ಪಿಸಬೇಕು. ಹಾಳಾದ ರಸ್ತೆಗಳನ್ನು ಸಂಪೂರ್ಣ ಸರಿಪಡಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸವಾರಿಗೆ ಅನುಕೂಲ ವಾಗುವಂತೆ ರಸ್ತೆಗಳು ನಿರ್ಮಾಣ ವಾಗಬೇಕೆಂದು ಸಂಚಾರಿಗಳು, ಸ್ಥಳೀಯರು ಆಗ್ರಹಿಸಿದ್ದಾರೆ.

# ನೌಕರರ ವೈದ್ಯಕೀಯ ವೆಚ್ಚ ಮರುಪಾವತಿ ಅನುದಾನ ಬಿಡುಗಡೆ

**ಕೊಂಕಣವಾಹಿನಿ ನ್ಯೂಸ್**
**ಭಟ್ಕಳ:** ತಾಲೂಕಿನಲ್ಲಿ ಹಲವು ತಿಂಗಳಿನಿಂದ ಬಾಕಿ ಉಳಿಸಿದ್ದ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿ ಅನುದಾನವನ್ನು ತಾಲೂಕು ನೌಕರರ ಸಂಘ ಶಾಸಕರ ನೆರವಿನಿಂದ ಶೀಘ್ರದಲ್ಲಿ ಮಂಜೂರಿ ಮಾಡಿಸಿ ತರುವಲ್ಲಿ ಯಶಸ್ವಿಯಾಗಿದೆ.

ತಾಲೂಕಿನಲ್ಲಿ ನೌಕರರ ಅನುದಾನದ ಕೊರತೆಯು ತೀವ್ರವಾಗಿತ್ತು. ಇದನ್ನರಿತ ಭಟ್ಕಳ ತಾಲೂಕು ನೌಕರರ ಸಂಘ ಭಟ್ಕಳ ತಾಲೂಕಿಗೆ ಅತಿ ಹೆಚ್ಚು ಅನುದಾನ ಪಡೆದಿದೆ. ವೈದ್ಯಕೀಯ ವೆಚ್ಚ



ಮರುಪಾವತಿಗಾಗಿ ಸಂಘದ ಪ್ರಯತ್ನದ ಫಲವಾಗಿ ತಾಲೂಕಿಗೆ 30.2ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ ಎಂದು ತಾಲೂಕು ನೌಕರರ ಸಂಘದ ಅಧ್ಯಕ್ಷ ಮೋಹನ ನಾಯ್ಕ ತಿಳಿಸಿದರು.

ಕಳೆದ ತಿಂಗಳು ಈ ವಿಷಯದ ಕುರಿತು ಶಾಸಕರ ಮೂಲಕ ಸರಕಾರ–ಕ್ಕೆ ಮನವಿ ಸಲ್ಲಿಸಲಾಗಿತ್ತು. ಇದಕ್ಕೆ ಶಾಸಕರು ಸ್ಪಂದಿಸಿ ಕೂಡಲೇ ಈ ಬಗ್ಗೆ ಶಿಕ್ಷಣ ಸಚಿವ ನಾಗೇಶ್ ಅವರನ್ನು ಸಂಪರ್ಕಿಸಿ, ಅನುದಾನದ ಬಿಡುಗಡೆಗೆ ಸಹಕರಿಸಿದ್ದಾರೆ ಎಂದರು.

# ವಿರೋಧದ ನಡುವೆ ಬಂದರು ಯೋಜನೆ ಅನುಷ್ಠಾನ ಖಂಡನೀಯ

**ಕೊಂಕಣ ವಾಹಿನಿ ನ್ಯೂಸ್**
**ಹೊನ್ನಾವರ:** ವಾಣಿಜ್ಯ ಬಂದರು ಬೇಡವೇ ಬೇಡ ಎಂದು ಮೀನುಗಾರರು ಒಕ್ಕೊರಲಿನಿಂದ ಹೇಳಿದರೂ, ಖಾಸಗಿ ಕಂಪನಿ ಪರವಾಗಿ ಸರಕಾರದ ಅಧಿಕಾರಿಗಳು ಮಾತನಾಡಿ, ಕಾಸರಕೋಡ್‌ನಲ್ಲಿ ವಾಣಿಜ್ಯ ಬಂದರು ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವುದು ತೀವ್ರ ಖಂಡನೀಯ ಎಂದು ರಾಷ್ಟ್ರೀಯ ಮೀನುಗಾರ ಸಂಘಟನೆಯ ರಾಜ್ಯಾಧ್ಯಕ್ಷ ಬಾಬು ಮೋಗೇರ ಹೇಳಿದರು.

ವಾಣಿಜ್ಯ ಬಂದರು ವಿಚಾರ–ಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಮೀನುಗಾರ ಮುಖಂಡ ರೊಂದಿಗೆ ಸಭೆ ನಡೆಸಿದ ನಂತರ ಮಾಧ್ಯಮದ ವರೊಂದಿಗೆ ಅವರು ಮಾತನಾಡಿದರು. ಜಿಲ್ಲಾಧಿ ಕಾರಿಗಳು ಯೋಜನೆಯ ಕಾಮಗಾರಿ ನಡೆಸುವ ಬಗ್ಗೆಯೆ ಹೇಳುತ್ತಾರೆ ವಿನಃ ಮೀನುಗಾರರ ಅವಹಾಲು ಸರಿಯಾಗಿ ಕೇಳಲಿಲ್ಲ. ಜನಜೀವನಕ್ಕೆ, ಪರಿಸರಕ್ಕೆ, ಜೀವ ಸಂಕುಲಕ್ಕೆ ಮಾರಕವಾಗುವ ಯೋಜನೆ ಇದಾಗಿದೆ. ಪರಿಸರಕ್ಕೆ ಸಂಬಂಧಿಸಿದ ಯಾವುದೇ ಸೂಕ್ತ ದಾಖಲಾತಿ ಇಲ್ಲದೆ ಕಾರ್ಯನಿರ್ವಹಿಸಲು ಸರಕಾರ ಮುಂದಾಗಿದೆ. ಇದರ ವಿರುದ್ಧ ಮೀನುಗಾರರುಜಿಲ್ಲೆಯಾದ್ಯಂತ ಸೆಟೆದು ನಿಂತರೆ ಅತಿರೇಕಕ್ಕೆ ತಿರುಗಲಿದೆ. ಮೀನುಗಾರರಿಗೆ ಏನೇ ತೊಂದರೆಯಾದರೂ ಜಿಲ್ಲಾಡಳಿತ, ಸರಕಾರ ನೇರ ಹೊಣೆಯಾಗುತ್ತದೆ ಎಂದರು.

ರಾಷ್ಟ್ರೀಯ ಮೀನುಗಾರ ಸಂಘಟನೆಯ ರಾಜ್ಯ ಕಾರ್ಯದರ್ಶಿ ಚಂದ್ರಕಾಂತ ಕೊಚರೆಕರ ಮಾತನಾಡಿ, ಮುಂದಿನ ದಿನಗಳಲ್ಲೂ ಮೀನುಗಾರರ ಬದುಕಿಗೆ ಮಾರಕ ವಾಗಬಲ್ಲ ಯೋಜನೆ ಯನ್ನು ವಿರೋಧಿಸ ಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಮೀನುಗಾರ ಮುಖಂಡರು ಉಪಸ್ಥಿತರಿದ್ದರು.

## ಸಂಧಾನ ಸಭೆ ವಿಫಲ, ಕಾಮಗಾರಿಗೆ ಹೆಚ್ಚಿದ ವಿರೋಧ

ವಾಣಿಜ್ಯ ಬಂದರು ವಿಚಾರ–ಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿ ಕಾರಿಗಳು ಮೀನುಗಾರ ಮುಖಂಡರೊಂದಿಗೆ ಸಭೆ ನಡೆಸಿ ರುವುದು ವಿಫಲವಾಗಿದೆ. ಸೋಮವಾರ ಕಂಪನಿ ಕಾಮಗಾರಿ ಆರಂಭವಾಗಲಿದ್ದು, ಜಿಲ್ಲಾಡಳಿತ 144 ಸೆಕ್ಷನ್ ಜಾರಿಗೊಳಿಸಿ ಕಾರ್ಯಾಚರಣೆಗೆ



ಮುಂದಾಗಿತ್ತು. ಸೆಕ್ಷನ್ ಹಿಂಪಡೆಯಲಾಗಿದೆ. ಮಾಹಿತಿಗಳ ಪ್ರಕಾರ 500–600 ಪೊಲೀಸ್ ಸಿಬ್ಬಂದಿಗಳ ನಿಯೋಜನೆಯಾಗಿದೆ ಎನ್ನಲಾಗಿದೆ.

# ಕೋವಿಡ್‌ನಿಂದ ಆಟೋಟಗಳಿಗೂ ಅಡ್ಡಿ: ಸಚಿವ ನಾಗೇಶ್

**ಕೊಂಕಣವಾಹಿನಿ ನ್ಯೂಸ್**
**ಕೋಲಾರ:** ಕೋವಿಡ್ ಮಹಾಮಾರಿ ರಾಜ್ಯದಲ್ಲಿ ಮಕ್ಕಳ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿದ್ದು, ಅದು ದೈಹಿಕ ಶಿಕ್ಷಣದ ಮೇಲೂ ಪರಿಣಾಮ ಬೀರಿದೆ, ಮಕ್ಕಳ ಆಟೋಟಗಳಿಗೂ ಅಡ್ಡಿಯಾಗಿದೆ ಎಂದು ರಾಜ್ಯ ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಬೆಂಗಳೂರಿನ ತಮ್ಮ ಕಚೇರಿಯಲ್ಲಿ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದ ಅವರು, ಕೋವಿಡ್ ಶೀಘ್ರ ಮರೆಯಾಗಿ ಮತ್ತೆ ಶಾಲೆಗಳಲ್ಲಿ ಮಕ್ಕಳ ಕ್ರೀಡಾಚಟುವಟಿಕೆಗಳು ಹೆಚ್ಚಲಿ ಎಂದು ಆಶಿಸಿದರು.

ಶಾಲೆಗಳಲ್ಲಿ ನಡೆಸುವ ವ್ಯಾಯಾಮ,ಕ್ರೀಡೆಗಳು ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹೆಚ್ಚು ಪೂರಕವಾಗಿದೆ ಆದರೆ ಈಗ ಕೋವಿಡ್ ಮಾರಿ ಇದಕ್ಕೆ ಅಡ್ಡಿಯುಂಟು ಮಾಡಿದೆ ಎಂದ ಅವರು, ಸಾಮಾಜಿಕ ಅಂತರ ಕಾಪಾಡಿಕೊಂಡು ನಡೆಸಬಹುದಾದ ಕ್ರೀಡೆಗಳನ್ನು ಮಾತ್ರ ನಡೆಸಿ ಮಕ್ಕಳಲ್ಲಿ ಚೇತನ ತುಂಬಿ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ, ಸಂಘದ ಗೌರವ ಸಲಹೆಗಾರರಾದ ಡಾ.ವೈ.ಎ.ನಾರಾಯಣಸ್ವಾಮಿ, ಗೌರವಾಧ್ಯಕ್ಷ ಅರುಣ ಶಹಪುರ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೈಹಿಕ ಶಿಕ್ಷಕರಿಗೆ ಶುಭ ಕೋರಿದರು.

ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷರೂ ಹಾಗೂ ಜಿಲ್ಲೆಯವರಾದ ಎಸ್. ಚೌಡಪ್ಪ, ದೈಹಿಕ ಶಿಕ್ಷಕರ ಅನೇಕ ಸಮಸ್ಯೆಗಳ ನಿವಾರಣೆಗೆ ಸಚಿವರು, ಸಭಾಪತಿಗಳು,



ವಿಧಾನಪರಿಷತ್ ಸದಸ್ಯರು ಸ್ಪಂದಿಸುವ ಮೂಲಕ ಶೀಘ್ರ ನಮ್ಮ ಬೇಡಿಕೆ ಇತ್ಯರ್ಥಗೊಳಿಸಲು ಮನವಿ ಮಾಡಿದರು. ಸಂಘದ ಮನವಿಗೆ ಸ್ಪಂದಿಸಿ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಸಹಕಾರ ನೀಡಿದ ಎಲ್ಲರಿಗೂ ರಾಜ್ಯದ ಸಮಸ್ತ ದೈಹಿಕ ಶಿಕ್ಷಣ ಶಿಕ್ಷಕರ ಪರವಾಗಿ ಅವರು ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ, ಕೆ.ಜೆ. ಚಂದ್ರಶೇಖರ್, ಖಜಾಂಚಿ ಬಾಲರಾಜ್ ಡಿ.ವಿ, ಕಾರ್ಯಾಧ್ಯಕ್ಷ ಪಿ.ಡಿ.ಕಾಲವಾಡ, ರಾಜ್ಯ ಉಪಾಧ್ಯಕ್ಷ ಪ್ರಮೋದ್ ರೋಣದ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ನಾಗರಾಜ್, ವಿಭಾಗೀಯ ಕಾರ್ಯಾಧ್ಯಕ್ಷ ವಿಜಯ್ ಕುಮಾರ್, ಶಹೀನಾ ಬೇಗಂ, ರಾಜ್ಯ ಜಂಟಿ ಕಾರ್ಯದರ್ಶಿ ಕೌಸಲ್ಯರಾಣಿ, ಎಸ್.ಬಿ.ಹಿರೇಮಠ ನಿ.ಪೂ. ಖಜಾಂಚಿ ಕೃಷ್ಣಪ್ಪ, ಸಂಘದ ಪದಾಧಿಕಾರಿಗಳಾದ ಕಿರಣ್ ಕುಮಾರ್ ಮುಂಡರಗಿ, ಅಸ್ಲಂ ಪಾಷ, ರಾಮರೆಡ್ಡಿ ನೇಗಲಿ, ರಾಜು, ಗೋಪಾಲ್, ಪ್ರತಿಭಾ, ಅಂಕಲಿ ಮುಂತಾದವರಿದ್ದರು.

# ಹೆದ್ದಾರಿ ದುರ್ಘಟನೆಗಳಿಗೆ ಕಾರಣವಾಗುತ್ತಿರುವ ಗೋವುಗಳು

## ಲಾಭ ನೀಡದ ಜಾನುವಾರುಗಳನ್ನು ಬಿಡಾಡಿಯಾಗಿಸುವ ಕೃತಘ್ನ ಮಾಲೀಕರು

* ವಿ.ಪಿ.ಮೇಸ್ತ

**ಕೊಂಕಣವಾಹಿನಿ ನ್ಯೂಸ್**

**ಹೊನ್ನಾವರ:** ತಾಲೂಕಿನಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಬಿಡಾಡಿ ಜಾನುವಾರುಗಳು ಸಂಚರಿಸುವ ವಾಹನಕ್ಕೆ ಅಡ್ಡವಾಗಿ ಬಲಿಯಾಗುತ್ತಿದ್ದು ಇದರಿಂದ ಪದೇಪದೆ ಹೆದ್ದಾರಿಯಲ್ಲಿ ಸಂಚಾರ ಅನಾನೂಕೂಲತೆ, ಅಪಘಾತಕ್ಕೂ ಕಾರಣವಾಗುತ್ತಿದೆ.

ಇಲ್ಲಿನ ಕರ್ಕಿ, ಸಾಲಿಕೇರಿ, ಹಳದಿಪುರ, ಕಾಸರಕೋಡ, ಅಪ್ಸರಕೊಂಡ, ಗುಣವಂತೆ ಸೇರಿದಂತೆ ಮತ್ತಿತರೆಡೆ ಬಿಡಾಡಿ ದನಗಳು ಹಾಗೂ ಸ್ಥಳೀಯರ ಮನೆಯ ಗೋವುಗಳು ಬೆಳಗ್ಗೆ, ಮಧ್ಯಾಹ್ನ, ಸಂಜೆಯೆನ್ನದೆ ರಾಷ್ಟ್ರೀಯ ಹೆದ್ದಾರಿಯಲ್ಲಿರುತ್ತವೆ. ಹಗಲಿನಲ್ಲಿ ಜಾನುವಾರು ರಸ್ತೆಯಲ್ಲಿರುವುದು ಕಂಡುಬರುವುದರಿಂದ ವಾಹನ ಸವಾರರು ದೂರದಿಂದಲೇ ವಾಹನಗಳ ವೇಗ ಮಿತಿಗೊಳಿಸಿಗೊಂಡು ತೆರಳುತ್ತಾರೆ.

ಆದರೆ, ರಾತ್ರಿ ವೇಳೆಯಲ್ಲಿ ರಸ್ತೆಯಲ್ಲಿ ಜಾನುವಾರು ಇರುವುದು ಗೋಚರಿಸದ ಕಾರಣ ಪದೇಪದೆ ಅಪಘಾತಗಳು ಸಂಭವಿಸುವಂತಾಗಿದೆ.





ಸಣ್ಣ ವಾಹನಗಳು ಜಾನುವಾರುಗಳಿಗೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ವಾಹನ ಸವಾರರಿಗೆ ಗಾಯಗಳಾಗುವುದಲ್ಲದೇ ಗೋವುಗಳು ಸಹ ಮೃತಪಟ್ಟಿವೆ.

ಕೆಲವೊಮ್ಮೆ ಈ ಗೋವುಗಳು ಅತ್ತ ಸಾಯದ, ಇತ್ತ ಬದುಕದ ರೀತಿಯಲ್ಲಿ ಬಿದ್ದುಕೊಂಡಿರುವ ಕರುಣಾಜನಕ ಸ್ಥಿತಿಗಳೂ ಸೃಷ್ಟಿಯಾಗಿರುತ್ತವೆ.

ಕೆಲವೊಮ್ಮೆ ಇಂಥ ಗೋವುಗಳ ಮಾಲೀಕರು ಪತ್ತೆಯಾಗುವುದಿಲ್ಲ. ಇನ್ನು ಕೆಲ ಬಾರಿ ಪತ್ತೆಯಾದರೂ ಸತ್ತ ದನದ ವಿಲೇವಾರಿ ಗೋಜು ತಮಗೇಕೆಂಬ ಅಮಾನವೀಯ ಭಾವನೆಯಿಂದ ಈ ಜಾನುವಾರುಗಳು ಅನಾಥವಾಗಿ ಬಿದ್ದಿರುತ್ತವೆ. ಅನೇಕ ಬಾರಿ ಇಂಥ ಅನಾಥ ಗೋವುಗಳ ಮೃತದೇಹಗಳನ್ನು ಗೋ ಪ್ರೇಮಿಗಳು ಅಥವಾ ಸಾರ್ವಜನಿಕರು ಹೂಳುವ ಸ್ಥಿತಿ ಇದೆ.

### ಗೋವು ಕಳ್ಳರ ಕೈಚಳಕ

ಕೇವಲ ಹಾಲು ಕರೆದು ಗೋವುಗಳನ್ನು ಹೆದ್ದಾರಿಪಾಲು ಮಾಡುವ ಮಾಲೀಕರ ಕೃತಘ್ನ ಮನೋಭಾವದ ಲಾಭವನ್ನು ಗೋವುಕಳ್ಳರು ಪಡೆಯುತ್ತಿದ್ದಾರೆ. ರಾತ್ರಿ ಯಾರೂ ಇಲ್ಲದ ವೇಳೆ ವಾಹನಗಳನ್ನು ತಂದು ಈ ಗೋವುಗಳನ್ನು ಕಳುವು ಮಾಡಿ ಕಸಾಯಿಖಾನೆಗೆ ಸಾಗಿಸುವ ಕೃತ್ಯಗಳೂ ನಡೆಯುತ್ತಿದ್ದು ಹೆದ್ದಾರಿಗೆ ಜಾನುವಾರು ಬಿಡುವವರ ಮೇಲೆ ಸ್ಥಳೀಯ ಆಡಳಿತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ. ಒಂದೊಮ್ಮೆ ಮಾಲೀಕರು ಪತ್ತೆಯಾಗದಿದ್ದಲ್ಲಿ ಗೋವುಗಳ ಸಂರಕ್ಷಣೆಗೆ ಪರ್ಯಾಯ ಕ್ರಮ ವಹಿಸಬೇಕಿದೆ ಎಂಬುದು ಗೋ ಪ್ರೇಮಿಗಳ ಒತ್ತಾಯವಾಗಿದೆ.

ಗೋ ಪ್ರೇಮ ಎನ್ನುವುದು ಗೋವನ್ನು ಕಟುಕರಿಂದ ರಕ್ಷಿಸುವುದು, ಪಾಲನೆ, ಪೋಷಣೆ ಮಾಡುವುದು ಮಾತ್ರವಲ್ಲ. ರಸ್ತೆ ಅಪಘಾತಕ್ಕೆ ತುತ್ತಾಗದಂತೆ ನೋಡಿಕೊಳ್ಳುವುದೂ ಮುಖ್ಯ. ಇತ್ತಿಚೆಗೆ ರಾಷ್ಟ್ರೀಯ ಹೆದ್ದಾರಿ ಮತ್ತಿತರ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಗೋವುಗಳು ನಿಂತಿರುವುದು ಕಂಡುಬರುತ್ತಿದೆ. ಇದಕ್ಕೆ ಜಾನುವಾರು ಮಾಲೀಕರ ಅಸಡ್ಡೆ ಕಾರಣವಾಗಿದೆ. ತಮ್ಮ ಮಕ್ಕಳ ಮೇಲಿರುವ ಕಾಳಜಿ ಜಾನುವಾರುಗಳ ಮೇಲಿಲ್ಲದಿರುವುದು ವಿಪರ್ಯಾಸ. ವಾಹನಗಳಿಗೆ ಜಾನುವಾರು ಅಡ್ಡಲಾಗಿ ಅಪಘಾತ ನಡೆದ ಸಂದರ್ಭದಲ್ಲಿ ಜಾನುವಾರು ಸಾವು–ನೋವಿಗೀಡಾಗುವುದು ಮಾತ್ರವಲ್ಲ, ವಾಹನ ಸವಾರರ ಜೀವಕ್ಕೂ ಕುತ್ತು ಬರುತ್ತದೆ. ಗೋವುಗಳನ್ನು ರಸ್ತೆಗೆ ಬಿಡುವ ಚಾಳಿ ನಿಲ್ಲಿಸಬೇಕಿದೆ.
**–ನಾಗರಾಜ ನಾಯ್ಕ, ಗೋ ಪ್ರೇಮಿಗಳು**

# ನೇತಾಜಿ ದೇಶದ ಸೇನೆಗೆ ಬಲ ನೀಡಿದ ಧೀಮಂತ ವ್ಯಕ್ತಿ



**ಕೊಂಕಣವಾಹಿನಿ ನ್ಯೂಸ್**

**ಕುಮಟಾ:** ಸ್ವಾಮಿ ವಿವೇಕಾನಂದರ ತತ್ವಾದರ್ಶಗಳಿಂದ ಪ್ರಭಾ ವಿತರಾಗಿದ್ದ ನೇತಾಜಿ ಸುಭಾಷಚಂದ್ರ ಬೋಸ್ ಅವರು ದೇಶದ ಸೇನೆಗೆ ಹೆಚ್ಚಿನ ಬಲ ನೀಡಿದ ಧೀಮಂತ ವ್ಯಕ್ತಿ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೆಂಕಟೇಶ ನಾಯಕ ಹೇಳಿದರು.

ಅವರು ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನೇತಾಜಿ ಸುಭಾಷಚಂದ್ರ ಬೋಸ್ ಅವರ ಜನ್ಮದಿನಾಚರಣೆ ನಿಮಿತ್ತ ನೇತಾಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ನಾಯಕರಲ್ಲಿ ಒಬ್ಬರಾದ ಸುಭಾಷಚಂದ್ರ ಬೋಸ್ ಅವರು ಯುವ ಜನಾಂಗಕ್ಕೆ ಪ್ರೇರಣಾಣಾದಾಯಕರಾಗಿರುವುದರಿಂದ ಅವರ ಜನ್ಮ ದಿನವನ್ನು ಕೇಂದ್ರ ಸರಕಾರ ಪರಾಕ್ರಮ ದಿವಸ್ ಎಂದು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಬಿಜೆಪಿ ಕುಮಟಾ ಮಂಡಳ ಅಧ್ಯಕ್ಷ ಹೇಮಂತಕುಮಾರ ಮಾತನಾಡಿ, ನೇತಾಜಿ ಸುಭಾಷಚಂದ್ರ ಬೋಸರ ಜನ್ಮದಿನವನ್ನು ಪರಾಕ್ರಮ ದಿನವಾಗಿ ಆಚರಿಸುತ್ತಿರುವ ಈ ಶುಭ ಅವಸರದಲ್ಲಿ ಅವರೊಂದಿಗೆ ನೇರ ಸಂಪರ್ಕ ಹೊಂದಿದ್ದ ನಮ್ಮದೇ ಪರಿಸರದ ಸ್ವಾತಂತ್ರ್ಯ ಯೋಧರನ್ನು ನೆನಪಿಸುವುದೂ ಸಮಯೋಚಿತ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲ ನಡೆದು ದೇಶ ಸೇವೆಗೆ ಮುಂದಾಗಬೇಕಿದೆ ಎಂದರು.

ಯುವಮೋರ್ಚಾ ಜಿಲ್ಲಾ ಪ್ರಭಾರಿ ಎಂ.ಜಿ. ಭಟ್ಟ ಮಾತನಾಡಿ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸುಭಾಷ ಚಂದ್ರ ಬೋಸ್ ಅವರು ಅಗ್ರಗಣ್ಯರು. ಸ್ವಾತಂತ್ರ್ಯ ಕ್ಕಾಗಿ ದಣಿವರಿಯದ ಹೋರಾಟ, ಸೋಲೇ ಇಲ್ಲದ ವ್ಯಕ್ತಿತ್ವ ಹಾಗೂ ಮಾತೃಭೂಮಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಮಹಾನ್ ನೇತಾರರನ್ನು ಇಂದು ನಾವೆಲ್ಲ ನೆನೆದು ಅವರ ಆದರ್ಶಗಳನ್ನು ಪಾಲಿಸುವ ಆಗತ್ಯವಿದೆ ಎಂದರು.

ಬಿಜೆಪಿ ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕ ನವೀನಕುಮಾರ್ ಅಯೋಧ್ಯ, ಜಿಲ್ಲಾ ಯುವ ಮೋರ್ಚಾ ಸದಸ್ಯ ಪವನ ಶೆಟ್ಟಿ, ಆದಿತ್ಯ ಶೇಟ್, ಯುವ ಮೋರ್ಚಾ ಮಂಡಲ ಪ್ರಧಾನ ಕಾರ್ಯದರ್ಶಿ ಚಿನ್ಮಯ ಕಾಮತ, ಪ್ರಸನ್ನ ಭಟ್, ಅಲೋಕ ಗಾಂವಕಾರ ಮತ್ತಿತರರು ಉಪಸ್ಥಿತರಿದ್ದರು.

# ರಾಜ್ಯ ಮಟ್ಟದ ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿಗೆ ಅಭಿಷೇಕ ಕಳಸ ಆಯ್ಕೆ



**ಕೊಂಕಣವಾಹಿನಿ ನ್ಯೂಸ್**

**ಕಾರವಾರ:** ಕರ್ನಾಟಕ ರಾಜ್ಯ ಯುವ ಸಂಘ ಒಕ್ಕೂಟ ಇವರು ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿಯನ್ನು ಉತ್ತರ ಕನ್ನಡ ಜಿಲ್ಲೆಯ ಕಾರವಾರ ನಗರದ ಕಳಸವಾಡಾ ನಿವಾಸಿಯಾಗಿರುವ ಕುಮಾರ್ ಅಭಿಷೇಕ ಜಿ ಕಳಸ ಅವರು ಯುವಜನ ಸೇವೆಯಲ್ಲಿ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಅಭಿಷೇಕ ಅವರು ತಮ್ಮ ಬಾಲ್ಯದಿಂದಲೇ ಭಾಷಣ, ಏಕಾಂಗಿ ನಾಟಕ ಮತ್ತು ಕ್ರೀಡೆ ಮುಂತಾದ ಸ್ಪರ್ಧೆಗಳಲ್ಲಿ ತಾಲೂಕು, ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟದ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು ಬಾಲ್ಯದಿಂದಲೇ ಗುರುತಿಸಿಕೊಂಡ ಯುವ ಪ್ರತಿಭೆ.

ಸ್ನಾತಕೋತ್ತರ ಪದವಿಯನ್ನು ಧಾರವಾಡದಲ್ಲಿ ಭೌತಶಾಸ್ತ್ರದಲ್ಲಿ ಮುಗಿಸಿ, ತಮ್ಮನ್ನು ತಾವು ಹಲವಾರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಅಪಾರ ಕೊಡುಗೆಯನ್ನು ಕೊಡುವ ಮೂಲಕ ಅವರ ಈ ಸಾಧನೆಗೆ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ನಗರದ ಎ.ಬಿ.ಸಿ ಪ್ರೌಢಶಾಲೆ ಮೈದಾನದಲ್ಲಿ ನಡೆಯುವ ಸ್ವಾಮಿ ವಿವೇಕಾನಂದ ಜಯಂತ್ಯೋತ್ಸವ , ರಾಜ ಯುವ ಸಮ್ಮೇಳನ , ಸಾಂಸ್ಕೃತಿಕ ಯುವ ವೈಭವ , ಯುವ ಮೇಳ ಹಾಗೂ ಸದ್ಭಾವನಾ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಅಭಿಷೇಕ ಕಳಸ ಅವರಿಗೆ ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷರಾದ ಡಾ.ಬಾಲಾಜಿ ಅವರು ತಿಳಿಸಿದ್ದಾರೆ. ಇವರ ಸಾಧನೆಗೆ ಸಿಕ್ಕ ಪ್ರಶಸ್ತಿಯ ಬಗ್ಗೆ ಎಲ್ಲರೂ ಅಭಿನಂದಿಸಿದ್ದಾರೆ.

# ರಾಜ್ಯದಲ್ಲಿ ಕೊರೊನಾ ಮಹಾಸ್ಫೋಟ: 50 ಸಾವಿರ ಗಡಿ ದಾಟಿದ ಸೋಂಕು

**ಕೊಂಕಣವಾಹಿನಿ ನ್ಯೂಸ್**

**ಬೆಂಗಳೂರು:** ರಾಜ್ಯದಲ್ಲಿ ಕೊರೊನಾ ಸೋಂಕು ಸಂಖ್ಯೆ ಆರ್ಭಟಿಸಿದ್ದು ಇಂದು 50 ಸಾವಿರಕ್ಕೂ ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು ಬೆಚ್ಚಿ ಬೀಳಿಸಿದೆ.. ರಾಜ್ಯದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 50,210 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಕೊಂಡಿದ್ದು ಸಕ್ರಿಯ ಪ್ರಕರಣಗಳ ಸಂಖ್ಯೆ ಶೇ.22.77 ಕ್ಕೆ ಏರಿಕೆ–ಯಾಗಿದೆ. ಸೋಂಕಿನಿಂದ ಸಾವನ್ನಪ್ಪಿದವರ ಪ್ರತಿಶತ ಸಂಖ್ಯೆ ಶೇ.0.03 ರಷ್ಟು ಇದೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 3,57,796 ಕ್ಕೆ ಏರಿಕೆಯಾಗಿದೆ. ಇಂದು 19 ಮಂದಿ ಸಾವನ್ನಪ್ಪಿದ್ದಾರೆ ಅವಧಿಯಲ್ಲಿ 22,842 ಮಂದಿ ಚೇತರಿಸಿಕೊಂಡು ಬಿಡುಗಡೆಯಾಗಿದ್ದಾರೆ.

# ಶೌಚಾಲಯ ಸಮುಚ್ಚಯ ನಿರ್ಮಾಣಕ್ಕೆ ಶಿಲಾನ್ಯಾಸ

**ಕೊಂಕಣವಾಹಿನಿ ನ್ಯೂಸ್**

**ಕುಮಟಾ:** ಡಾ. ಎ.ವಿ. ಬಾಳಿಗಾ ಮಹಾವಿದ್ಯಾಲಯಕ್ಕೆ ಪುಣೆ–ಯ ಕೆಟಿಆರ್ ಕಪ್ಲಿಂಗ್ (ಇಂಡಿಯಾ) ಪ್ರೈ. ಲಿಮಿಟೆಡ್ ಸಿಎಸ್ಆರ್‌ಯೋಜನೆಯ ಅಡಿ ನಿರ್ಮಿಸಿಕೊಟ್ಟಿರುವ 25 ಲಕ್ಷ ರೂ. ವೆಚ್ಚದ ಆಧುನಿಕ ಸುಸಜ್ಜಿತ ಶೌಚಾಲಯ ಸಮುಚ್ಚಯದ ಶಿಲಾನ್ಯಾಸ ಕಾರ್ಯಕ್ರಮ ನಡೆಯಿತು.




ಕೆನರಾ ಕಾಲೇಜು ಸೊಸೈಟಿಯ ಉಪಾಧ್ಯಕ್ಷ ಪುರುಷೋತ್ತಮ ಮುಕುಂದ ಶಾನಭಾಗ ಹೆಗಡೇಕರ ನೇತೃತ್ವದಲ್ಲಿ ಸಕಲ ಧಾರ್ಮಿಕ ವಿಧಿ, ವಿಧಾನಗಳೊಂದಿಗೆ ಶಿಲಾನ್ಯಾಸ ನೆರವೇರಿಸಲಾಯಿತು.

ಕೆಟಿಆರ್ ಕಪ್ಲಿಂಗ್ ಇಂಡಿಯಾದ ವ್ಯವಸ್ಥಾಪನ ನಿರ್ದೇಶಕ ಶಿವಶಂಕರ ಕೃಷ್ಣ ಪಿಕಳೆಯವರ ವಿಶೇಷ ಪ್ರಯತ್ನದಿಂದ ಈ ಕೊಡುಗೆ ಸಂಸ್ಥೆಗೆ ಲಭ್ಯವಾಗಿದೆ. ಸೊಸೈಟಿ ಕಾರ್ಯದರ್ಶಿ ಸುಧಾಕರ ನಾಯಕ ಅವರು ಸಂಸ್ಥೆಗಳ ಸರ್ವಾಂಗೀಣ ವಿಕಾಸಕ್ಕಾಗಿ ಶಿವಶಂಕರ ಪಿಕಳೆ ಯವರ ಸಹಕಾರ ಪ್ರಶಂಸಿಸಿದರಲ್ಲದೆ, ಸಂಸ್ಥೆಯ ಬೆಳವಣಿಗೆಗೆ ಇದೇ ರೀತಿ ಎಲ್ಲರ ಸಹಕಾರ ಕೋರಿದರು.

ತರಂಗ ಎಲೆಕ್ಟ್ರಾನಿಕ್ ಮಾಲೀಕ ಶ್ರೀಕಾಂತ ಭಟ್ಟರು, ಅಲಮನಿ ಟ್ರಸ್ಟಿನ ಅಧ್ಯಕ್ಷ ವಿಜಯ ಕುಮಾರ, ಕಾರ್ಯದರ್ಶಿ ಜ್ಯೋತಿ ಪೈಯವರ ನಿವೃತ್ತ ಮುಖ್ಯಾಧ್ಯಾಪಕ ಮುರಲಿ ಮಾಸ್ತರ್, ಸಂಸ್ಥೆಯ ಪ್ರಾಚಾರ್ಯ ಡಾ. ಪಿ.ಕೆ.ಭಟ್ಟ, ಕಾರ್ಯಾಧ್ಯಕ್ಷ, ದಿನಕರ ಕಾಮತ ಮತ್ತಿತರರು ಹಾಜರಿದ್ದರು.

# ಡಿ ಗ್ರೂಪ್ ನೌಕರರಿಗೆ ಸಕಾಲದಲ್ಲಿ ಸಿಗದ ಸೌಲಭ್ಯ: ಡಿಸಿಗೆ ದೂರು

**ಕೊಂಕಣವಾಹಿನಿ ನ್ಯೂಸ್**

**ದಾಂಡೇಲಿ:** ಸ್ಥಳೀಯ ಸಂಸ್ಥೆಗಳಲ್ಲಿ ಡಿ ಗ್ರೂಪ್ ನೌಕರರಾಗಿ ದಡಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೈರ್ಮಲ್ಯ ಮತ್ತು ನೀರು ಸರಬರಾಜು ಮಾಡುವ ನೌಕರರು ತಮಗೆ ನೀಡಬೇಕಾದ ಸೌಲಭ್ಯಗಳಿಂದ ವಂಚಿತರಾಗುತ್ತಿರುವ ಬಗ್ಗೆ ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕ ಸಂಘಟನೆಯ ಜಿಲ್ಲಾಧ್ಯಕ್ಷ ಡಿ ಸ್ಯಾಮಸನ್ ಅವರು ಜಿಲ್ಲಾಧಿಕಾರಿಗೆ ದೂರು ನೀಡಿದ್ದಾರೆ.

ತಮ್ಮ ಸಮಸ್ಯೆಗಳ ಕುರಿತು ಜಿಲ್ಲೆಯ ನಗರ ಹಾಗೂ ಸ್ಥಳೀಯ ಸಂಸ್ಥೆಗೆ ಹಾಗೂ ಜಿಲ್ಲಾಡಳಿತಕ್ಕೆ ಈ ಮೊದಲು ಮನವಿ ನೀಡಿದರೂ ಪ್ರಯೋಜನವಾಗದೇ ನಿವೃತ್ತ ಡಿ ಗ್ರೂಪ್ ನೌಕರರು ಸಕಾಲದಲ್ಲಿ ಸೌಲಭ್ಯಗಳನ್ನು ಪಡೆಯವಲ್ಲಿ ವಂಚಿರಾಗುತ್ತಿದ್ದಾರೆ.

ಇದಕ್ಕೆಲ್ಲ ಅಧಿಕಾರಿಗಳ ತಾತ್ಸಾರವೇ ಮುಖ್ಯ ಕಾರಣವೆಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈ ಪ್ರವೃತ್ತಿ ದಾಂಡೇಲಿ ಸೇರಿದಂತೆ ಇನ್ನಿತರ ನಗರ ಸ್ಥಳಿಯ ಸಂಸ್ಥೆಗಳಲ್ಲಿ ಕಾಣಬಹುದಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಳೆದ 20–30 ವರ್ಷಗಳಿಂದ ನಗರದ ನೈರ್ಮಲ್ಯ ನಿವಾರಣೆಗೆ ಈ ನೌಕರರು ಶ್ರಮಿಸಿದ್ದು ನಿವೃತ್ತಿ ಸೌಲಭ್ಯ ಪಡೆದುಕೊಳ್ಳಲು ಪ್ರತಿನಿತ್ಯ ಕಚೇರಿಗೆ ಅಲೆದಾಡುವುದಷ್ಟೇ ಅಲ್ಲದೇ ಎರಡೆರಡು ವರ್ಷಗಳ ಕಾಲ ಕಾಯುವಂತಾಗಿದೆ. ಇವರಲ್ಲಿ ಇನ್ನೂ ಕೆಲವರು ನೈರ್ಮಲ್ಯದ ಕೆಲಸ ನಿರ್ವಹಿಸುತ್ತಿರುವುದರಿಂದ ವಿವಿಧ ಕಾಯಿಲೆಗಳಿಗೆ ತುತ್ತಾಗಿದ್ದಾರೆ. ಕೆಲವರು ಮೃತಪಟ್ಟಿದ್ದಾರೆ.



ಡಿ ಗ್ರೂಪ್ ನೌಕರರಿಗೆ ಅವರ ಹಕ್ಕಿನ ಸೌಲಭ್ಯ ಸಕಾಲದಲ್ಲಿ ನೀಡದೆ ಪ್ರತಿನಿತ್ಯ ಕಚೇರಿಗೆ ಅಲೆದಾಡಿಸುವುದು ಸಾಮಾನ್ಯವಾಗಿದೆ ಅಂತೆ–ಯೇ ಡಿ ದರ್ಜೆಯ ಪೌರಕಾರ್ಮಿಕರು ಮತ್ತು ನೀರು ಸರಬರಾಜು ನೌಕರರಿಗೆ ಕಳೆದ 15 ವರ್ಷಗಳಿಂದ ಬಡ್ತಿ ಸೌಲಭ್ಯ ಮಾಡಿಕೊಡದೇ ಬಡ್ತಿಗೆ ಸಂಬಂಧಿಸಿದ ಯಾದಿಯ ಕಡತಗಳು ಜಿಲ್ಲೆಯ ನಗರಾಭಿವೃದ್ಧಿ ಕೋಶದ ಕಚೇರಿಯಲ್ಲಿ ನೆನೆಗುದಿಗೆ ಬಿದ್ದಿದೆ.

ಇದಕ್ಕೆಲ್ಲ ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಸ್ಪಷ್ಟ ನಿರ್ಧಾರಕ್ಕೆ ಬರದೇ ಇರುವುದೇ ಕಾರಣವಾಗಿದೆ. ಹೀಗೆ ಡಿ ಗ್ರೂಪ್ ನೌಕರರಿಗೆ ಸಕಾಲದಲ್ಲಿ ಸೌಲಭ್ಯಗಳನ್ನು ನೀಡದ ಅಧಿಕಾರಿಗಳ ವರ್ತನೆ ಖಂಡನೀಯ ಡಿ. ಸ್ಯಾಮಸನ್ ತಿಳಿಸಿದ್ದಾರೆ.

# ಬ್ಲಡ್ ಬ್ಯಾಂಕ್ ಆರಂಭಕ್ಕೆ ಜಯ ಕರ್ನಾಟಕ ಸಂಘಟನೆ ಒತ್ತಾಯ



**ಕೊಂಕಣವಾಹಿನಿ ನ್ಯೂಸ್**

**ಯಲ್ಲಾಪುರ:** ಪಟ್ಟಣದ ಸರಕಾರಿ ತಾಲೂಕು ಆಸ್ಪತ್ರೆಯಲ್ಲಿ ರಕ್ತ ಶೇಖರಣ ಕೇಂದ್ರ (ಬ್ಲಡ್ ಬ್ಯಾಂಕ್) ಪ್ರಾರಂಭಿಸುವಂತೆ ಆಗ್ರಹಿಸಿ ಜಯ ಕರ್ನಾಟಕ ನಗರ ಘಟಕದ ವತಿಯಿಂದ ರಾಜ್ಯದ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಅವರಿಗೆ ಮನವಿ ನೀಡಿದರು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ತಾಲೂಕು ಗೌರಾವಧ್ಯಕ್ಷ ಜಿ.ಎನ್. ತಾಂಡುರಾಯನ್ ಮತ್ತು ಯಲ್ಲಾಪುರ ಘಟಕದ ಅಧ್ಯಕ್ಷ ಕೆ.ಎಸ್. ಕಂಬಳನ್ನವರ, ಉಪಾಧ್ಯಕ್ಷ ಸಮೀರ್ ಖು–ರೇಷಿ, ಪದಾಧಿಕಾರಿಗಳಾದ ಪರುಶರಾಮ ಹರಿಜನ, ಅಲಿ ಖುರೇಷಿ, ಕರೀಂ ಖಾನ್, ಮಂಜುನಾಥ ರಾಯಕರ, ಹನೀಫ್ ಖಾನ್, ಸೋಮು ವಡ್ಡರ, ರಝಾಕ್ ಖಾನ್, ಮುಷ್ತಾಕ್ ಶೇಖ, ಹನುಮಂತ ಬೋವಿವಡ್ಡರ ಇನ್ನಿತರರು ಉಪಸ್ಥಿತರಿದ್ದರು.

# ಚಿಪ್ಪು ಗಣಿಗಾರಿಕೆಗೆ ಅವಕಾಶ ನೀಡದಿರಲು ಆಗ್ರಹ

**ಕೊಂಕಣವಾಹಿನಿ ನ್ಯೂಸ್**

**ಕುಮಟಾ:** ಕೇಂದ್ರ ಸರಕಾರದ ಕಾಯಿದೆಯಂತೆಯೇ ಈಗಿನ ರಾಜ್ಯ ಸರಕಾರ ಚಿಪ್ಪುಗಣಿಗಾರಿಕೆಗೆ ಅನುಮತಿ ನವೀಕರಿಸಲು ಹೊರಟಿರುವುದು ದುರದೃಷ್ಟಕರ ಎಂದು ಮಾಜಿ ಶಾಸಕಿ ಶಾರದಾ ಮೋಹನ ಶೆಟ್ಟಿ ತಿಳಿಸಿದ್ದಾರೆ.



ಚಿಪ್ಪಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸುತ್ತಿರುವ ಮೀನುಗಾರರಿಗೆ ಬೆಂಬಲ ಸೂಚಿಸಿ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಚಿಪ್ಪಿ ಗಣಿಗಾರಿಕೆ ವಿರುದ್ಧ ತಾವು ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸುತ್ತ ಬಂದಿದ್ದು, ಕಳೆದ ಬಾರಿ ತಾವು ಶಾಸಕರಾಗಿದ್ದ ಸಂದರ್ಭದಲ್ಲಿಯೇ ಇದನ್ನು ಮೀನುಗಾರರ ಆಶಯದಂತೆ ನಿಲ್ಲಿದ್ದಾಗಿ ತಿಳಿಸಿದ್ದಾರೆ.

ಆದರೆ ರಾಜ್ಯ ಸರಕಾರ ಈಗ ಚಿಪ್ಪು ಗಣಿಗಾರಿಕೆ ಪರವಾನಗಿ ನವೀಕರಿಸಲು ಹೊರಟಿರುವುದು ಸರಿಯಲ್ಲ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಜೀವ ವೈವಿಧ್ಯತೆಗಳನ್ನೊಳಗೊಂಡ ಕೆಲವೇ ಕೆಲವು ನದಿಗಳಲ್ಲಿ ಅಘನಾಶಿನಿ ನದಿಯೂ ಒಂದಾಗಿದ್ದು, ಅಘನಾಶಿನಿಯಲ್ಲಿ ಸಿಗುತ್ತಿದ್ದ ಚಿಪ್ಪಿ(ಬಳಚು) ನಿಂದಲೇ ಸಾವಿರಾರು ಜನರ ಜೀವನ ನಡೆಸಿಕೊಂಡಿದ್ದಾರೆ.

ಕೆಲವು ವರ್ಷಗಳಿಂದ ಚಿಪ್ಪು ಸಿಗದೇ ಆ ಭಾಗದ ಜನರ ಜೀವನ ನಿರ್ವಹಣೆ ಕಷ್ಟಕರವಾಗಿದೆ.

ಈಗ ಗಾಯದ ಮೇಲೆ ಬರೆ ಎಳೆದಂತೆ ಹಲವು ವರ್ಷಗಳಿಂದ ಸ್ಥಗಿತವಾಗಿದ್ದ ಚಿಪ್ಪಿ ಗಣಿಗಾರಿಕೆಗೆ ಅವಕಾಶ ನೀಡಿದರೆ ಹಲವಾರು ಮೀನಿನ ಸಂತತಿಗಳು ನಾಶವಾಗಿ, ಮೀನುಗಾರರ ಜೀವನ ಬೀದಿಗೆ ಬೀಳುತ್ತವೆ. ಆದ್ದರಿಂದ ಯಾವುದೇ ಕಾರಣ–ಕ್ಕೂ ಸರಕಾರ ಚಿಪ್ಪಿಕಲ್ಲು ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಶಾರದಾ ಶೆಟ್ಟಿ ಒತ್ತಾಯಿಸಿದ್ದಾರೆ.

# ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ

**ಕೊಂಕಣವಾಹಿನಿ ನ್ಯೂಸ್**

**ಯಲ್ಲಾಪುರ:** ಬಿ.ಇಡಿ ಎರಡನೇ ವರ್ಷದ 3ನೇ ಸೆಮಿಸ್ಟರ್ ಹಾಗೂ ಪ್ರಥಮ ವರ್ಷದ ಮೊದಲನೇ ಸೆಮಿಸ್ಟರ್ ಪರೀ–ಕ್ಷೆ ಫಲಿತಾಂಶ ಪ್ರಕಟವಾಗಿದ್ದು, ವಿಶ್ವದರ್ಶನ ಶಿಕ್ಷಣ ಸಂಸ್ಥೆ ಶೇ.100ರಷ್ಟು ಸಾಧನೆ ಮಾಡಿದೆ.

ಎರಡನೇ ವರ್ಷದ 3ನೇ ಸೆಮಿಸ್ಟರ್ ಪರೀಕ್ಷೆಗೆ 94 ವಿದ್ಯಾರ್ಥಿಗಳು ಹಾಜರಾಗಿದ್ದರು. ಪ್ರಥಮ ವರ್ಷದ ಮೊದಲನೇ ಸೆಮಿಸ್ಟರ್ ಗೆ 100 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆದು ಉತ್ತೀರ್ಣರಾಗಿದ್ದಾರೆ.

ಇದರಲ್ಲಿ ಮಹೇಶ ಭಟ್ಟ (ಶೇ.87.33), ಹಫಿಜಾಬಿ ಶೇಖ್ (ಶೇ. 87.16), ಸ್ನೇಹಾ ಮರಾಠೆ (ಶೇ. 86.66) ಅಂಕ ಪಡೆದಿದ್ದಾರೆ.

ಬಿ.ಇಡಿ ಪ್ರಥಮ ವರ್ಷದ 1ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ವೀಣಾ ಹೆಗಡೆ (ಶೇ.87.16), ಬೇಬಿ ಆಯಿಷಾ ಶೇಖ್ (ಶೇ. 86.83), ನೇತ್ರಾವತಿ ಗೌಡ (ಶೇ. 86.16) ಅಂಕ ಪಡೆದು ಸಾಧನೆಗೈದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಪ್ರಾಚಾರ್ಯ ಎಸ್.ಎಲ್ ಭಟ್ಟ, ಶಿಕ್ಷಕರಾದ ಸೀತಾರಾಮ ಗೌಡ, ಬಾಲಚಂದ್ರ ಭಟ್ಟ, ಪೂರ್ಣಿಮಾ ಉಪಾಧ್ಯಾಯ, ವೀಣಾ ಭಾಗ್ವತ್, ರವೀಂದ್ರ ಶರ್ಮ ಈ ವಿದ್ಯಾರ್ಥಿಗಳಿಗೆ ಬೋಧಿಸಿದ್ದರು.

# ಮನಸ್ಸು, ದೇಹದ ಉಲ್ಲಾಸಕ್ಕೆ ಯೋಗ ಪೂರಕ

**ಕೊಂಕಣವಾಹಿನಿ ನ್ಯೂಸ್**

**ಕಾರವಾರ:** ರೋಟರಿ ಕ್ಲಬ್ ಕಾರವಾರ ಸೀ ಸೈಡ್ ಹಾಗೂ ಜಿಲ್ಲಾ ಆಯುಷ್ ವಿಭಾಗದಿಂದ ಜಿಲ್ಲಾ ಕಾರಾಗೃಹದಲ್ಲಿರುವ ಕೈದಿಗಳಿಗೆ ಒಂದು ವಾರ ಯೋಗ ಶಿಬಿರ ಆಯೋಜಿಸಲಾಯಿತು.

ಯೋಗ ತರಬೇತಿ ಗುರು ಡಾ. ಪ್ರಕಾಶ ಎ.ಜೆ. ಅವರಿಗೆ ರೋಟರಿ ಕ್ಲಬ್ ವತಿಯಿಂದ ಶಾಲ ಹೊದಿಸಿ ಹೂ ಹಣ್ಣು ನೀಡಿ ಸನ್ಮಾನಿಸಲಾಯಿತು, ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಡಾ. ಪ್ರಕಾಶ ಯೋಗವನ್ನು ನಿತ್ಯ ನಿರಂತರ ಜೀವನದಲ್ಲಿ ಅಳವಡಿಸಿಕೊಂಡರೆ, ಮನಸ್ಸು, ಹಾಗೂ ದೇಹ ಸದಾ ಉಲ್ಲಾಸಕರವಾಗಿರುತ್ತದೆ ಎಂದರು.



ಜೈಲ ಶಿಕ್ಷಕರು ಶ್ರೀ ರಾಘವೇಂದ್ರ ಶಾನಭಾಗ ನಿರೂಪಿಸಿದರು. ಬಿ.ಎಸ್. ಪೈ ವಂದಿಸಿದರು, ರೋಟರಿ ಅಧ್ಯಕ್ಷೆ ದೀಪಾ ಪೈ, ಗಣೇಶ ಆಚಾರ, ಕೃಷ್ಣಾನಂದ ಕೊಲ್ವೇಕರ, ಜೈಲು ಉಪಾಧೀಕ್ಷಕ ವಸಂತ ಹಾಗೂ ಜೈಲಿನ ಸಿಬ್ಬಂದಿ ಹಾಜರಿದ್ದರು.

# ಹದಗೆಟ್ಟ ರಸ್ತೆಗಳಲ್ಲಿ ಸಂಚಾರದ ಗಂಡಾಗುಂಡಿ

**ಕೊಂಕಣವಾಹಿನಿ ನ್ಯೂಸ್**


**ಮುಂಡಗೋಡ:** ತಾಲೂಕಿನ ರಸ್ತೆಗಳು ಹದಗೆಟ್ಟಿದ್ದು ವಾಹನ ಸವಾರರಿಗೆ ಕಿರಿಕಿರಿಯಾಗಿ ಪರಿಣಮಿಸುತ್ತಿವೆ.



ರಸ್ತೆಯಲ್ಲಿ ಭಾರಿ ಗಾತ್ರದ ವಾಹನಗಳು ತಿರುಗಾಡಿ ದೊಡ್ಡ ಗಾತ್ರದ ಗುಂಡಿಗಳು ಬಿದ್ದಿವೆ ಬೈಕ್ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ಮಾತ್ರ ಕೈಕಟ್ಟಿ ಕುಳಿತಿದ್ದಾರೆ. ಸಣ್ಣಪುಟ್ಟ ಗುಂಡಿಗಳನ್ನು ಮುಚ್ಚುವ ಕಾರ್ಯ ಆಮೆಗತಿಯಲ್ಲಿ ಸಾಗುತ್ತಿದೆ ಎಂದು ವಾಹನ ಸವಾರರು ಆರೋಪಿಸುತ್ತಿದ್ದಾರೆ.

ಮುಂಡಗೋಡ ಪಟ್ಟಣದಿಂದ ಯಲ್ಲಾಪುರಕ್ಕೆ ಹೋಗುವ ರಸ್ತೆಯ ಪರಿಸ್ಥಿತಿ ಚಿಂತಾಜನಕವಾಗಿದೆ. ಇದೇ ಮಾರ್ಗದಲ್ಲಿ ಕಾರ್ಮಿಕ ಸಚಿವರಾದ ಶಿವರಾಮ ಹೆಬ್ಬಾರ ಅವರು ನಿತ್ಯ ಸಂಚರಿಸುತ್ತಿದ್ದರೂ ತೇಪೆ ಹಚ್ಚುವ ಕೆಲಸ ಬಿಟ್ಟು ಸಮರ್ಪಕವಾಗಿ ರಸ್ತೆ ನಿರ್ಮಾಣ ಮಾಡಬೇಕೆನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

# ಒಂದೇ ದಿನ ಶತಕ ದಾಟಿದ ಕೊರೊನಾ



**ಕೊಂಕಣವಾಹಿನಿ ನ್ಯೂಸ್**

**ಅಂಕೋಲಾ:** ತಾಲೂಕಿನಲ್ಲಿ ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಏರಿಕೆ–ಯಾಗುತ್ತಿದೆ. ಭಾನುವಾರ ಒಂದೇ ದಿನ 114 ಪಾಸಿಟಿವ್ ಪ್ರಕರಣಗಳ ಸಂಖ್ಯೆ ದಾಖಲಾಗಿದೆ. ಒಂದೆರಡು ದಿನ ಸ್ವಲ್ಪ ಇಳಿಕೆಯಾದಂತೆ ಕಂಡುಬಂದ ಕೋವಿಡ್ ಒಂದೇ ದಿನ ಶತಕದ ಗಡಿ ದಾಟಿರುವುದು ಆತಂಕಕ್ಕೀಡು ಮಾಡಿದೆ.

ಪಟ್ಟಣದ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ 34 ಕೋವಿಡ್ ಪಾಸಿಟಿವ್ ಪ್ರಕರಣಗಳು ದಾಖಲಾಗಿವೆ.

ಕಾಲೇಜಿನ ಕೆಲವು ಉಪನ್ಯಾಸಕರು, ಸಿಬ್ಬಂದಿ ಹಾಗೂ ಪದವಿ ವಿದ್ಯಾರ್ಥಿಗಳಲ್ಲಿ ಪಾಸಿಟಿವ್ ವರದಿಯಾಗಿದೆ. ಇತ್ತೀಚೆಗಷ್ಟೇ ಪಿಯುಸಿ ವಿಭಾಗದಲ್ಲಿ ಪಾಸಿಟಿವ್ ವರದಿಯಾಗಿ ಕಾಲೇಜನ್ನು ಸೀಲ್ ಡೌನ್ ಮಾಡಲಾಗಿತ್ತು.

# ಸರಳತೆಯ ಸಂತೃಪ್ತಿ ಜೀವನ ನಮ್ಮದಾಗಲಿ

ನಾವೇ ದೊಡ್ಡವರು, ಅಧಿಕಾರಸ್ಥರು, ಹಣವಂತರು ಅಂತಾ ಎಂದೂ ತೋರಿಸಲು ಅಥವಾ ಹೆಸರು ಪಡೆಯಲು ಕಪಟ ನಾಟಕ ಖಂಡಿತಾ ಮಾಡಬೇಡಿ.ಯಾಕೆಂದರೆ ಅದು ನಿಮ್ಮ ನೆಮ್ಮದಿಯ ಜೀವನ ಸಂಪೂರ್ಣ ನಕರಾತ್ಮಕವಾಗಿ ಮಾಡುತ್ತದೆ ಜೊತೆಗೆ ಮಾನಸಿಕವಾಗಿ ಬದುಕು ಹಾಳು ಮಾಡುವದಂತು ದಿಟ್ಟ. ಮಾನವರು ಸಾಮಾನ್ಯವಾಗಿ ಯಾರನ್ನಾದರೂ ಆಗಲು ಅಥವಾ ಬೇರೆಯವರಂತೆ ಪ್ರಸಿದ್ಧಿ ಪಡೆಯಲು ಅವರಂತೆ ನಕಲು ಮಾಡಲು ಪ್ರಯತ್ನಿಸಿದಾಗ ಮಾತ್ರ ನೆಮ್ಮದಿಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಾರೆ. ಅಂ-ದರೆ ಸರಳತೆಯನ್ನು ಕಳೆದುಕೊಳ್ಳುತ್ತಾರೆ ಎಂಬುದು ನೆನಪಿಡಿ.

ಹಾಗಾಗಿ ಅವರ ನಡವಳಿಕೆ ನಕಲಿಯಾಗುತ್ತದೆ ಎನ್ನುವುದು ನಾವ್ಯಾರು ಮರೆಯಬಾರದು. ಇನ್ನು ಯಾರಿಗೋ ಸಹಾಯ ಮಾಡಲು ಹೋಗಿ ನಾವೇ ತೊಂದರೆಗೆ ಸಿಲುಕುತ್ತೇವೆ.ಯಾರನ್ನೋ ಎಷ್ಟೇ ಪ್ರೀತಿ – ಗೌರವದಿಂದ ಕಂಡರೂ ಸಹ ಅವರಿಂದ ಕನಿಷ್ಟ ಸೌಜನ್ಯವೂ ಇಲ್ಲದೆ ಕಡೆಗಣಿಸಲ್ಪಡುತ್ತೇವೆ ಇದು ಸತ್ಯ.ಹೀಗಾದಾಗ ಮಾತ್ರ ಮನಸ್ಸಿಗೆ ಅತಿ ದುಃಖವಾಗುತ್ತದೆ, ಸಂಕಟವಾಗುತ್ತದೆ. ಯಾರಿಗೂ ಹೇಳದ ವೇದನೆ ಆಗುತ್ತದೆ.ಇಂತಹ ಸಂದರ್ಭದಲ್ಲಿ ಮಾನವನಿಗೆ ಇರಬೇಕಾಗಿದ್ದು ತಾಳ್ಮೆ ಮತ್ತು ಸಹನೆ, ಇವೆರಡೂ ಜೊತೆ ಇದರೆ ಸಾಕು, ಎಂತಹ ಭಯಾನಕ ನೋವನ್ನು ತಾಳಿಕೊಳ್ಳುವ ಶಕ್ತಿ, ಮನೋಭಾವ ಉಂಟುಮಾಡುತ್ತದೆ ಎಂಬುದು ನಾವ್ಯಾರು ಮರೆಯುವಂತಿಲ್ಲ.

ಮಾನವನಿಗೆ ಏಕೆ ಇಂತಹ ಸವಾಲುಗಳು ಬರುತ್ತವೆ ಎಂದು ಮುಗ್ಧ ಮನಸ್ಸುಗಳು ಬೇಸರಿಸುತ್ತವೆ. ಇದೆಲ್ಲಾ ಸರಳತೆ ಮೆರೆಯುವ ಜನರ ನಿಜವಾದ ದೈನಂದಿನ ಜೀವನದ ಸಂಕಷ್ಟಗಳು ಅಂದರೆ ತಪ್ಪಾಗಲಾರದು.ಆದರೂ ಅವುಗಳೊಂದಿಗೇ ಬದುಕುವುದು ಬಹು ಆನಂದ.ಎಲ್ಲಾ ಸಮಸ್ಯೆಗಳ ನಡುವೆಯೂ ನಿರಾಳತೆ ಖಂಡಿತಾ ಸಿಕ್ಕೆ ಸೀಗುತ್ತದೆ.

ಸರಳತೆಯ ಜೀವನ ಎಂದರೆ ಅದರ ಪರಿಪಾಲನೆ ಮಾಡುವುದು ಬಹಳ ಕಠಿಣ.ನಮ್ಮ ಸರಳತೆಗೆ ಯಾರೂ ನಯಾಪೈಸೆ ಗೌರವ ಕೊಡದಿರಬಹುದು.ನಮ್ಮನ್ನು ಸಂಪೂರ್ಣ ಅಲಕ್ಷಿಸಬಹುದು.ಕನಿಷ್ಠ ಮಟ್ಟದ ಬೆಲೆಯನ್ನೂ ನೀಡದೆ ಉದಾಸೀನ ಮಾಡಬಹುದು.ನಾವು ಮಾಡಬೇಕಿರುವುದು ಇಷ್ಟೇ, ಇದನ್ನೆಲ್ಲಾ ಅರಗಿಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಂಡರೆ ಸಾಕು ಅದೇ ಮಾನವನ ಸರಳತೆಗೆ ಸೂರ್ತಿಯಾಗಿ ನಿಲ್ಲುತ್ತದೆ ಜೊತೆ ಕೆಲಸ ಮಾಡುತ್ತದೆ.ಇದುವೇ ಸರಳ,ಸೌಜನ್ಯ, ಸ್ನೇಹಮಯ ಜೀವನ ಮಾನವರದಾಗುತ್ತದೆ ಬಂಧುಗಳೇ.

**ಸಂಪೂರ್ಣ ಸರಳರಾದರೆ :**

ಸಂಪೂರ್ಣ ಸರಳರಾದರೆ ಕಡೆಗಣೆಯ ಬದುಕು ಖಂಡಿತಾ ಮಾನವರದು ಆಗುವುದಿಲ್ಲ ! ಯಾಕೆಂದರೆ ಬೇರೆ ಬೇರೆ ದೇಶದ ಪ್ರತಿಷ್ಠಿತ ವ್ಯಕ್ತಿಗಳು ದೊಡ್ಡ ಜವಾಬ್ದಾರಿ ಹೊತ್ತುಕೊಂಡು ಜನಸಾಮಾನ್ಯರಂತೆ ಜೀವನ ನಡೆಸುತ್ತಾರೆ. ಆದರೆ ನಾವೇಕೆ ಇವರಂತೆ ಬದುಕಲು ಸಾಧ್ಯವಿಲ್ಲ ಎನ್ನುವುದು ಒಮ್ಮೆ ಹೃದಯದ ಮೇಲೆ ಕೈ ಇಟ್ಟು, ಯೋಚಿಸಿ ನೋಡಿ, (ನೋಡಿದಾಗ ಬಹುಶಃ ಸತ್ಯಾಂಶ ಗೊತ್ತಾಗಬಹುದು) ನೋಡುವುದು ಅವಶ್ಯಕತೆ ಇದೆ.

ಆದರೆ ನಮ್ಮ ದೇಶದಲ್ಲಿ ಒಬ್ಬ ಸಣ್ಣ ಮಟ್ಟದ ರಾಜಕಾರಣಿ ಕೂಡಾ ಮಹಾರಾಜನಂತೆ ಮೆರೆಯುತ್ತಾನೆ. ಮೆರೆಯಲು ಸದಾ ಪ್ರಯತ್ನ ಮಾಡುತ್ತಾನೆ. ಎನ್ನುವುದು

ಮಾತಂತು ಸುಳ್ಳಲ್ಲ, ಅಲ್ಲವೇ? ಹೀಗಿದ ಮೇಲೆ ಈ ವಿಚಾರ ನಾವೆಲ್ಲರೂ ತುಂಬಾ ಗಂಭೀರವಾಗಿ, ಶಾಂತತೆಯಿಂದ ಯೋಚನೆ ಮಾಡುವುದು ಅಗತ್ಯವಿದೆ ಜೊತೆಗೆ ನೆಮ್ಮದಿಯ ಜೀವನದ ಬಗೆ-ಯೂ ಚಿಂತನೆ ಮಾಡುವುದು ಸಹ ಇಂದಿನ ದಿನಗಳಲ್ಲಿ ಬಹಳ ಪ್ರಯೋಜನ, ಪ್ರಾಮುಖ್ಯತೆ ಇದ್ದೆ ಇದೆ. ಹೀಗಿರುವಾಗ ಸರಳವಾಗಿ ಇದ್ದು ಬಿಟ್ಟಾಗ ನಾವೆಂದಿಗೂ ಸಮಾಜದಿಂದ ಕಡೆಗಣೆಯಂತು ಹಾಗೂ ವಿಮುಖರಾಗುವುದಿಲ್ಲ ಅಲ್ಲವೇ.ಒಂದು ವೇಳೆ ಕಡೆಗಣೆ ಮಾಡಿದರು ಸಹ ನಮ್ಮ ಸುಖದ ಜೀವನಕ್ಕೆ ಯಾವುದೇ ರೀತಿಯ



ಕಾರಣಕ್ಕೂ ಕಷ್ಟವೇನು ಅನ್ನಿಸುವುದಿಲ್ಲ. ಆದಕಾರಣ ವ್ಯಕ್ತಿಯೋರ್ವರ ಸರಳತನವೇ ಅವರ ಯಶಸ್ಸಿಗೆ ಮುನ್ನುಡಿಯಾಗಿರುತ್ತದೆ ಎಂಬುದು ಮರೆಯದಿರಿ. ಇದು ಎಷ್ಟೋ ಜನರಿಗೆ ಸ್ಫೂರ್ತಿಯಾಗಬಲ್ಲದು. ಎನ್ನುವುದು ಅರಿತು ಹೆಜ್ಜೆ ಹಾಕುವುದು ಸೂಕ್ತ ಮತ್ತು ಸಮಂಜಸ ಇದುವೇ ಸಂಪೂರ್ಣ ಸರಳತೆಯ ಸಂತೃಪ್ತಿಯ ಜೀವನ.

**ತಾಳ್ಮೆ, ಸಹನೆ:** ತಾಳ್ಮೆ, ಸಹನೆ ಒಂದೇ ದಿನದಲ್ಲಿ ಮಾನವನ ಕೈ ವಶವಾಗುವುದಿಲ್ಲ, ಖಂಡಿತಾ ಸಾಧ್ಯವು ಇಲ್ಲ. ಇದಕ್ಕೆ ಸಮಯ ಬೇಕು, ಸಿಕ್ಕ ಅವಕಾಶವನ್ನು ಸದುಪಯೋಗ ಮಾಡಿಕೊಂಡರೆ ಸಾಕು ಉತ್ತಮ ಮನುಷ್ಯನಾಗುತ್ತಾನೆ ಅಂದರೆ ಸ್ವಾರ್ಥ ದೌರ್ಬಲ್ಯಗಳನ್ನು ಮಾನವ ಮೆಟ್ಟಿ ನಿಂತು, ನಿಲ್ಲುವ ಮೂಲಕ ತಾಳ್ಮೆ, ಸಹನೆ ತನ್ನಿಂದ ತಾನೇ ಪಡೆಯುತ್ತಾನೆ ಎಂದರ್ಥ. ಜೀವನದಲ್ಲಿ ಅವಳವಡಿಸಿಕೊಳ್ಳುತ್ತಾನೆ ಅತ್ಯುತ್ತಮ ನಿಸ್ವಾರ್ಥಿ, ಸ್ನೇಹಮಯ ಮಾನವನಾಗುತ್ತಾನೆ ಎಂಬ ನಂಬಿಕೆ ನಮ್ಮದಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರ ಮಾನವರ ಜೀವನದಲ್ಲಿ ಭೂತಕಾಲದ ಘಟನೆ, ಕ್ಷಣಗಳು ಅನುಭವವಾಗಿ ಬದುಕಿನುದ್ದಕ್ಕೂ ಸದಾ ಸ್ಮರಣೀಯ ಹಾಗೂ ಅನುಭವವಾಗಿರುತ್ತವೆ. ನಮ್ಮ ತಪ್ಪು-ಒಪ್ಪುಗಳು ನಾಳಿನ ಜೀವನದಲ್ಲಿ ಪಾಠಗಳಾಗಿ ಜೀವನ ಪಾವನವಾಗುತ್ತದೆ.

ಅನುಭವಗಳೆಂಬ ಜೀವರಸವೂ ಮಲ್ಲಿಗೆಯ ಅರಳಿದ ಹೂಗಳಿಂದಲೂ ಕೂಡಿರಬಹುದು ಅಥವಾ ಬಾಡಿದ ಹೂಮಾಲೆಯೂ ಆಗಿರಬಹುದು. ಸಿಹಿ-ಕಹಿಗಳ ಸಂತೆಯಾಗುತ್ತದೆ. ಬೇವು-ಬೆಲ್ಲದ ಹಾಗೆ ಮಾನವರ ಜೀವನವು ಬಹುಶಃ ಸಾಗುತ್ತದೆ. ಸಿಹಿ-ಕಹಿಗಳಿಂದ ಕೂಡಿದ ಸಮಾನ, ಸುಂದರ,ನೆಮ್ಮದಿಯ ಜೀವನ ಸರ್ವರದೂ ಆಗಲಿ ಎಂಬ ಸದಾಶಯ ನಮ್ಮದು.

ಆದಕಾರಣ ಮಾನವ ಸ್ವತಃ ಸಂಘ ಜೀವಿ. ಆತ್ಮೀಯ ಸಂಬಂಧಗಳೊಂದಿಗೆ ಜೊತೆಯಾಗಿರುತ್ತಾನೆ. ಸಂಬಂಧಗಳು ಮಾನವನ ಜೀವನದ ಪ್ರತಿಯೊಂದು ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ ತಾಳ್ಮೆ, ಸಹನೆ,ತ್ಯಾಗ, ಸಮಯ ಮತ್ತು ಸಂಬಂಧಗಳನ್ನು ಮಾನವ ಹೆಚ್ಚು ಅಳವಡಿಸಿಕೊಂಡಿದ್ದೆ ಆದರೆ ಇವನ ಮೌಲ್ಯ ಹೆಚ್ಚುತ್ತದೆ. ಹೀಗಾಗಿ ಇವುಗಳೆಲ್ಲ ಕಣ್ಮುಚ್ಚಿ ಪಾಲಿಸಿಕೊಂಡರೆ ಸಾಕು ಜೀವನದ ಪ್ರತಿಯೊಂದು ಕ್ಷಣಗಳು ಸಂತೋಷ, ಸಡಗರದಿಂದ ಆನಂದಿಸಬಹುದು. ಕಳೆದುಕೊಂಡ ಮತ್ತು ಪಡೆದುಕೊಂಡ ಸಂಗತಿಗಳು ಜೀವನದ ಅನುಭವದ ಸಾಲಿಗೆ ನಿಂತು ಜೀವನದ ಪಾಠವನ್ನು ಕಲಿಸಿಕೊಡುತ್ತವೆ ಎನ್ನುವದಂತು ಸುಳ್ಳಲ್ಲ.

**ನೆಮ್ಮದಿಯ ಜೀವನ:**

ಮಾನವನ ಜೀವನದಲ್ಲಿ ಸಾಕಷ್ಟು ಸಾಧನೆಗಳು, ಕೌಶಲ್ಯಗಳು ಸಂಪತ್ತು ಇದ್ದರೂ ಇವುಗಳನ್ನು ವ್ಯರ್ಥವಾಗಿ ಖಂಡಿತಾ ಬಳಸಬೇಡಿ. ನಮ್ಮ ತಪ್ಪುಗಳನ್ನು ಹಾಗೂ ದೌರ್ಬಲ್ಯವನ್ನು ಮುಕ್ತ ಮನಸ್ಸಿನಿಂದ ಒಪ್ಪಿ, ಸ್ವೀಕರಿಸಿ. ಸರಿಪಡಿಸಿಕೊಳ್ಳಿ, ನಾವೂ ಹೇಳಿದೇ ಸರಿ ಎನ್ನಬೇಡಿ, ಇನ್ನೊಬ್ಬರು ಹೇಳಿದ ಮಾತುಗಳು ಶಾಂತರೀತಿಯಿಂದ ಕೇಳಿ, ಮತ್ತೊಬ್ಬರಿಗೆ ನೋವಾಗುವ ಹಾಗೆ ವರ್ತನೆ ಮಾಡಬೇಡಿ, ದಯೆ, ಮಮತೆ, ಕರುಣೆ, ಪ್ರೀತಿ ಸರ್ವರಲ್ಲಿಯೂ ಕಾಣಿ, ಸರ್ವರಿಗೂ ಹಂಚಿಕೊಳ್ಳಲು ಪ್ರಯತ್ನ ಮಾಡಿ.

ಇನ್ನು ನಾವು ಪರಿಪೂರ್ಣರಲ್ಲ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಿ. ಆದಕಾರಣ ಜೀವನದಲ್ಲಿ ಸರಳತೆಯನ್ನು ಅನುಸರಿಸಲು ಇರುವ ಏಕೈಕ ಮಾರ್ಗವೆಂದರೆ ಸತ್ಯವನ್ನು ನುಡಿಯುವುದು, ಪರಸ್ಪರ ಗೌರವ ಕೊಡುವುದು, ಪ್ರಮಾಣಿಕತೆಯಿಂದ ಬದುಕುವುದು,ಸೇವಾ ಮನೋಧರ್ಮ ಅಳವಡಿಸಿಕೊಳ್ಳುವುದು,ಇನ್ನೊಬ್ಬರಿಗೆ ಒಳ್ಳೆಯದು ಬಯಸುವದರೊಂದಿಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕು, ಸಕಾರಾತ್ಮಕವಾಗಿ ಇನ್ನೊಬ್ಬರ ನೋವಿಗೆ ಸ್ಪಂದಿಸುವ ಔದಾರ್ಯತೆ ನಮ್ಮಲ್ಲಿ ಉಂಟುಮಾಡಬೇಕು.

ಸಕಲರಿಗೂ ಒಳ್ಳೆಯದು ಬಯಸುವ ಮೂಲಕ ಉತ್ತಮ ಜೀವನವನ್ನು ನಡೆಸಲು ಹಾಗೂ ಆದರ್ಶ ನಾಗರಿಕರಾಗಿ ಬಾಳಲು ಸಾಧ್ಯ. ಆದಕಾರಣ ವಿನಮ್ರವಾಗಿರಲು ಸದಾ ಇರಲು ಪ್ರಯತ್ನ ಮಾಡಬೇಕು, ಸಂತೋಷದ ಕ್ಷಣಗಳನ್ನು ಕಳೆಯಬೇಕು ಮತ್ತು ಸದಾ ಹಸನ್ ಮುಖಿಯಾಗಿ ಇರಬೇಕು.ಅಂದಾಗ ಮಾತ್ರ ನಾವು ನೆಮ್ಮದಿಯ ಜೀವನ ನಡೆಸಲು ಸಾಧ್ಯ.

**ಕೊನೆಯ ನುಡಿ:** ಸರಳತೆ, ಸೌಜನ್ಯ, ವಿನಯ, ವಿನಮ್ರತೆ ಹಾಗೂ ಮಾನವೀಯ ಮೌಲ್ಯಗಳು ನಿಜಕ್ಕೂ ಅಷ್ಟೊಂದು ಸರಳವಲ್ಲ.ಇದು ಮಾತ್ರ ಬದುಕಿನ ಬಹು ದೊಡ್ಡ ಸನ್ಮಾರ್ಗಗಳು ಹಾಗೂ ಸಾರ್ವಕಾಲಿಕ ಸತ್ಯ.

ಸಂಗಮೇಶ ಎನ್ ಜವಾದಿ,
ಬೀದರ



# ಪ್ರಯತ್ನಕ್ಕೊಮ್ಮೆ ಬೆಂಬಲ ಬೇಡ್ಡೋಣ




ಬದುಕು ಅಂದ್ರೆ ಒಂದು ದೊಡ್ಡ ಪರೀಕ್ಷೆ ಅಂತ ಎಲ್ಲರಿಗೂ ತಿಳಾದಿರುವ ಸಂಗತಿ. ಜೀವನದ ಈ ಅತೀ ದೊಡ್ಡ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಅಷ್ಟು ಸುಲಭದ ಮಾತಲ್ಲ ಅಂತಲೂ ನಮಗೆ ಗೊತ್ತು. ಈ ಜೀವನ ಎಂಬುದು ತುಂಬಾ ವಿಶಾಲವಾದ ಜಗತ್ತು, ಮನುಷ್ಯನಲ್ಲಿ ತುಂಬಾ ವಿಧವಾದ ಜಗತ್ತುಗಳಿದಾವೆ. ಯೋಚನಾ ಜಗತ್ತು, ಚಿಂತೆಗಳ ಜಗತ್ತು, ಗೊಂದಲ ಜಗತ್ತು ಹೀಗೆ ಹಲವಾರು ವಿಸ್ಮಯ ಕಾರಾಯಾದ ಜಗತ್ತುಗಳನ್ನು ತನ್ನನ್ನು ತಾನು ಸೃಷ್ಟಿಸಿಕೊಂಡಿದ್ದಾನೆ.

ಕೆಲವೊಮ್ಮೆ ಏನೂ ಮಾಡೋಕೆ ಆಗದೇ ಇದ್ದ ಪಕ್ಷದಲ್ಲಿ ಮನುಷ್ಯ ಸ್ತಬ್ದನಾಗಿ ತನ್ನ ಯೋಚನಾ ಜಗತ್ತನ್ನ ಆಯ್ಕೆ ಮಾಡಿಕೊಳ್ಳುತ್ತಾನೆ. ಹಾಗೆಯೇ ಮುಂದುವರೆದು ಚಿಂತೆಗಳ ಜಗತ್ತನ್ನ ಆಯ್ಕೆ ಮಾಡಿಕೊಳ್ಳುತ್ತಾನೆ. ಹೀಗೆ ವಿವಿಧ ರೀತಿಯ ಅಸಂಖ್ಯಾತ ದಾರಿಗಳನ್ನು ಹುಡುಕುವ ಬುದ್ಧಿಜೀವಿಗಳು ನಾವು, ಯೋಚನಾ ಜಗತ್ತು ಮತ್ತು ಚಿಂತೆಗಳ ಜಗತ್ತು ಮನುಷ್ಯನನ್ನು ಒಮ್ಮೆಲೆ ಒಕ್ಕರಿಸಿದರೆ, ಅವರೆಡರೊಡಗೂಡಿ ಗೊಂದಲಗಳ ಜಗತ್ತಿಗೆ ತನಗರಿವಿಲ್ಲದಂತೆಯೇ ಬರುತ್ತಾನೆ. ವ್ಯಕ್ತಿಗೆ ಅತೀ ಕಠಿಣ ಪರಿಸ್ಥಿತಿ ಎದುರಾಗುವುದೇ ಈ ಗೊಂದಲದ ಜಗತ್ತಿನಲ್ಲಿ. ಮನಸ್ಸು ಚಂಚಲತೆಯಿಂದ ತಡವರಿಸುತ್ತಿರುತ್ತದೆ, ಏನು ಮಾಡೋದು ಎಂಬ ಯೋಚನೆಯ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿಯುತ್ತದೆ. ಏನನ್ನೂ ಮಾಡೋದಿಕ್ಕೆ ಆಗಲ್ಲ ಅನ್ನುವಂತಹಾ ಭಯಾನಕ ಪರಿಸ್ಥಿತಿ ನಮಗೆ ಎದುರಾಗುತ್ತದೆ. ಈ ಗೊಂದಲದ ಜಗತ್ತಿನ ಎಲ್ಲಾ ಸಮಸ್ಯೆಗಳು ಪರಿಹಾರ ಕಂಡುಕೊಳ್ಳದೆ ಪ್ರಶ್ನಾರ್ಥಕವಾಗಿಯೇ ಉಳಿಯುತ್ತವೆ ಏನಃ ಉತ್ತರ ಕಂಡುಕೊಳ್ಳುವುದಕ್ಕೂ ವಿಲವಿಲ ಒದ್ದಾಡುವ ಮನಸ್ಥಿತಿಗೆ ಜೀವನ ಇಷ್ಟೆ ಸಾಕು ಇನ್ನುಳಿಯುವುದು ತುಂಬಾ ಕಷ್ಟ ಎಂದೆನಿಸುವುದಂತೂ ಖಂಡಿತ. ಇನ್ನೇನು ಈ ಎಲ್ಲಾ ಜಗತ್ತುಗಳಿಂದ ಹೊರ ಬರಬೇಕೆಂದು ಕದ ತೆಗೆದು ನಿಂತಾಗ ಸಾವು ನಮ್ಮನ್ನ ಕೈ ಬೀಸಿ ಕರಿಯುತ್ತಿದೆ ಎಂಬಂತೆ ಭಾಸವಾಗುತ್ತದೆ.

ಕೆಲವೊಮ್ಮೆ ಕೆಲ ಮನಸ್ಥಿತಿಗಳು ಹೇಳತೀರದ ಕಷ್ಟವನ್ನು ಅನುಭವಿಸುತ್ತಿರುತ್ತವೆ. ನಿಜಕ್ಕು ಈ ಕಷ್ಟ ಅಂದ್ರೆ ಏನು? ಎಂಬುದರ ಆಳವನ್ನು ಅನುಭವಿಸಿದವನೇ ಬಲ್ಲ. ನಿಜಕ್ಕೂ ಕಷ್ಟ ಎಂಬುದು ಬಡತನಕ್ಕೆ ಸಮೀಪದಲ್ಲಿದೆ ಅನ್ನೋದಕ್ಕಿಂತ ಬಡತನವೇ ಕಷ್ಟ ಎಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಒಬ್ಬ ವ್ಯಕ್ತಿ ಅತೀ ಶ್ರೀಮಂತನಾಗಿದ್ದಾನೆ ಸಂತೃಪ್ತನಾಗಿದ್ದಾನೆ ಎಂದರೆ, ಅವನ ಹಿಂದಿನ ಪರಿಶ್ರಮದ ಫಲವೆಂದೇ ಹೇಳಬಹುದು. ಎಂತಹಾ ಭೀಕರ ಕಷ್ಟವಿದ್ದರೂ ಕೆಲವೊಮ್ಮೆ ಪ್ರಯತ್ನವೆಂಬ ಅಸ್ತ್ರಕ್ಕೆ ತಲೆ ತಗ್ಗಿಸುವುದಂತೂ ಕಟು ಸತ್ಯ. ಪ್ರಯತ್ನ ಮನುಷ್ಯನ ಜಯತಾಂಡಕ್ಕೆ ದಾರಿಯಿದ್ದಂತೆ.

ನಮ್ಮ ಜೀವನದ ಸಾಧನೆಗಾಗಿ ಸಂತೃಪ್ತಿಗಾಗಿ ನಾವುಗಳು ಪ್ರಯತ್ನಕ್ಕೆ ಬೆಂಬಲವನ್ನು ಬೇಡಲೇ ಬೇಕು. ಅಂದಗಾ ಮಾತ್ರ ಸುಖಮಯವಾದ ಜೀವನ ಸಾಧ್ಯ. ಕೆಲವೊಬ್ರು ತಮ್ಮ ಜೀವನ ಸುಧಾರಣೆಗಾಗಿ ದೇವರನ್ನು ದೂಷಿಸುತ್ತಾರೆ. *"ಆ ದೇವ್ರು ನಮ್ ಹಣೆ ಬರಹಾನೆ ಸರಿಯಾಗ್ ಬರ್ದಿಲ್ಲ, ದೇವ್ರಿಗ್ ಮಣ್ಣಾಕ್ಲಿ, ಗುಡಿ ಮುಚ್ಲಿ"* ಎಂಬೆಲ್ಲಾ ಬೇಸರದ ಮಾತುಗಳನ್ನಾಡಿ ಮನಸ್ಸಿನ ಭಾರ ಇಳಿಸಿಕೊಳ್ಳಲು ಯತ್ನಿಸುತ್ತಾರೆ.

ಒಂದು ವೇಳೆ ದೇವರು ನಮ್ ಹಣೆ ಬರಹವನ್ನ *"ಪ್ರಯತ್ನ ಮಾಡಿದ್ರೇನೆ ನೀನ್ ಬದುಕು ಸುಧಾರಿಸುತ್ತದೆ"* ಅಂತ ಬರ್ದಿದ್ರೆ......, ಖಂಡಿತ ಪ್ರಯತ್ನ ಮಾಡಲೇ ಬೇಕು, ಈ ಪರಿಸ್ಥಿತಿ ನಮ್ಮನ್ನು *ಮಾಡು ಇಲ್ಲವೇ ಮಡಿ* ಎಂಬ ಎರಡು ಆಯ್ಕೆಗಳನ್ನು ತಂಡೊತ್ತದೆ. ನಮ್ಮ ಜೀವನ ಸುಧಾರಣೆ ನಮ್ಮ ಕೈಯಲ್ಲಿದೆ. ಹೇಗೆ ಕಾನೂನಿಗೆ ಅಂಬೇಡ್ಕರರು ತಿದ್ದುಪಡಿ ಅವಕಾಶ ಕೊಟ್ಟಿದ್ದಾರೋ.. ಅದೇ ರೀತಿ ಬ್ರಹ್ಮನೂ ಕೂಡ ನಮ್ಮ ಹಣೆಬರಹವನ್ನು ತಿದ್ದಿಪಡಿ ಮಾಡಿಕೊಳ್ಳಲು ಅವಕಾಶವನ್ನಿತ್ತಿದ್ದಾನೆ. ಈ ಹಣೆಬರಹದಲ್ಲಿ ಕೆ-ಟ್ಟದೆಂಬ ಭಾವವನ್ನ ಕಿತ್ತೊಗೆದು ಧನಾತ್ಮಕವಾದ ಯೋಚನೆ ಹಾಗೂ ಯೋಜನೆಗಳನ್ನು ನಮ್ಮ ಹಣೆಬರಹಕ್ಕೆ ಲಗತ್ತಿಸೋಣ.

ಚಿಂತೆಗಳನ್ನು ಬಿಟ್ಟು ನಮ್ಮ ಬದುಕಿನ ಸಂತೆಯನ್ನು ನಡೆಸೋಣ. ಅಂದಾಗ ಮಾತ್ರ ನಮ್ಮ ಬದುಕಿನ ಸಂತೆಯಲ್ಲಿ ನಾವು ಇಚ್ಚಿಸುವ ವಸ್ತು ಸಿಗಲು ಸಾಧ್ಯ. ಪ್ರಯತ್ನಿಸೋಣ.. ಸಾವು ನಮ್ಮನ್ನ ಸ್ವಾಗತಿಸುವವರೆಗೂ ಪ್ರಯತ್ನದ ಹಾದಿಯಲ್ಲೇ ಇರೋಣ ಸತ್ತರೂ ಪ್ರಯತ್ನದ ಹಾದಿಯಲ್ಲೇ ಸಾಯೋಣ.. ಪ್ರಯತ್ನ ನಮ್ಮನ್ನ ಅತಿಯಾಗಿ ಬೆಂಬಲಿಸಿದ್ದೇ ಆದ್ರೆ ನಾವು ಖಂಡಿತವಾಗಿಯೂ ಜೀವನವನ್ನು ಸಂಪೂರ್ಣವಾಗಿ ಜಯಿಸಿದ್ದೀವಿ ಎಂದರ್ಥ. ನಮ್ಮ ನಿರ್ಲಕ್ಷ್ಯದಿಂದ ನಾವು ಬಯಸಿದ ವಸ್ತು ಬೇರೊಬ್ಬರ ವಶವಾಗುವುದರೊಳಗೆ ಪ್ರಯತ್ನಿಸಿ ನಾವಂದುಕೊಂಡಿದ್ದನ್ನ ನಮ್ಮದಾಗಿಸಿಕೊಳ್ಳೋಣ. ನಮ್ಮ ಜೀವನದ ಬಗ್ಗೆ ನಾವೇ ಯೋಚಿಸಿಬೇಕು, ಏಕೆಂದರೆ ಜೀವನ ನಮ್ಮದು ಪರರದ್ದಲ್ಲ... ನೆನಪಿರಲಿ.


ಮಾಡು ಇಲ್ಲವೇ ಮಡಿ

ಯಸಾಚಿಂ ಯಾದಗಿರಿ



# ಹೆಮ್ಮೆಯ ಸೈನಿಕರಿಗೊಂದು ಪುಟ್ಟ ಬರಹಗಳ ಸೆಲ್ಯೂಟ್

ತಾಯಿ ಭಾರತಮಾತೆಯ ಸೇವೆಗೆಂದು ಇಷ್ಟಪಟ್ಟು-ವಚನವ ಕೊಟ್ಟು, ಹಗಲು – ರಾತ್ರಿ ಕಷ್ಟಪಟ್ಟು, ಹೆಗಲಮೇಲೆ ಹೊತ್ತಾಡಿಸಿದ ಅಪ್ಪ -ತುತ್ತುತಿನಿಸಿದ ಅಮ್ಮನನ್ನು, ಬೆಳೆದ ಊರು-ತನ್ನವರನ್ನು ಬಿಟ್ಟು, ತಾಯಿಗಿಂತ ತಾಯ್ನಾಡು ಮಿಗಿಲೆಂದು ಹೆತ್ತ-ತಾಯಿ, ಹೊತ್ತ ಭೂ ತಾಯಿಯ ಋಣವ ತೀರಿಸಲು ಈ ದೇಶಸೇವೆಗೆಂದೇ ತನ್ನ ದೇಹವ ಮುಡಿಪಾಗಿಟ್ಟು, ದೇಶದ ಗಡಿಯಲ್ಲಿ ತನ್ನ ಜನರಿಗೋಸ್ಕರ-ಈ ಅಖಂಡ ಭಾರತ ದೇಶಕ್ಕೋಸ್ಕರ



ತನ್ನ ಪ್ರಾಣವನ್ನೇ/ಗಟ್ಟಿ ಗುಂಡಿಗೆಯನ್ನೇ ಪಣವಾಗಿಟ್ಟು, ಜ್ಞಾನ-ತಂತ್ರಜ್ಞಾನದ ಜಾಣ್ಮೆಯ ತಲೆಯೊಳಗಿಟ್ಟು, ಸಮವಸ್ತ್ರ-ಸಶ್ತ್ರಾಸ್ತ್ರ-ಬುಲೆಟ್ ಪ್ರೂಫ್ ಜಾ-ಕೇಟ್ ಗಳ ತೊಟ್ಟು, ಹಗಲು-ರಾತ್ರಿ ಒಂದೇ ಎಂದು ಭರತ ಭೂಮಿಗೆ – ಈ ದೇಶಕ್ಕೆ ನಾವು ಊಹಿಸಲಸಾಧ್ಯವಾದ ಸೇವೆಯ ಸಲ್ಲಿಸುವ ಹೆಮ್ಮೆಯ ಯೋಧರಿಗೆ ಪ್ರತಿಕ್ಷಣ ಸಲ್ಲಿಸಲೇಬೇಕು.

ಗೌರವದ ಸೆಲ್ಯೂಟು.... 'ದೇಶಸೇವೆಯೇ ಈಶಸೇವೆ 'ಯೆಂದು ಗುರಿಯಾಗಿ-ಟ್ಟು, ತನ್ನ ಮಡದಿ-ಮಕ್ಕಳ ಆಸೆ-ಆಕಾಂಕ್ಷೆಗಳ ಪಕ್ಕಕ್ಕಿಟ್ಟು, ದೇಶದ ಜನರು ನೆಮ್ಮದಿಯಿಂದ ಬದುಕಬೇಕು/ನಿದ್ರಿಸಬೇಕೆಂದು ತಾನೇ ನಿದ್ರೆಯ ಬಿಟ್ಟು, ಪ್ರತೀ ಕ್ಷಣ ಸೇವೆ ಸಲ್ಲಿಸುವನು ಇಷ್ಟಪಟ್ಟು-ಕಷ್ಟಪಟ್ಟು, ಸೈನಿಕನ ಆ ಸಿಟ್ಟು-ಎದುರಿನ ಶತ್ರುಗಳೆಲ್ಲ ಭಸ್ಮವಾಗುವರು ಸುಟ್ಟು,

ಓ ಪ್ರಜೆಯೇ ನೀನು ಗಡಿಯ ಒಳಗಿನ ರಾಜ್ಯದ ಬಂಧವನು ಗಟ್ಟಿಯಾಗಿ ಕಟ್ಟು-ಗಡಿಯ ಹೊರಗಿನ ಚಿಂತೆಯ ಬಿಟ್ಟು, ಯೋಧನು ಜನತೆಯ ಪ್ರತೀ ಕೂಗಿಗೂ ಧಾವಿಸಿ ಬರುವನು ಓ ಗೊಟ್ಟು, ಸೈನಿಕರ ತ್ಯಾಗ-ಬಲಿದಾನಗಳು ಲೆಕ್ಕಕ್ಕೆ ನಿಲುಕದಷ್ಟು, ಪ್ರತೀ ಹಂತದಲ್ಲೂ ಸೈನಿಕರನ್ನು ಮೀರಿಸುವವರ್ಯಾರುಂಟು.... ಮುಟ್ಟುವುದಾದರೆ ಸೈನಿಕನಂತೆ ಗುರಿಯನ್ನು ಮುಟ್ಟು, ಆಗ ದೇಶವೇ ಎದ್ದು ನಿಂತು ನೀಡುವುದು ಗೌರವದ ಸೆಲ್ಯೂಟು...

"ಜೈ ಹಿಂದ್" ಸ್ವರ ಕೇಳಿದಾಗ ಸೈನಿಕರ ಶಕ್ತಿಯಾಗುವುದು ದುಪ್ಪಟ್ಟು....

ಜೈಹಿಂದ್

ಶಾಂತಾರಾಮ
ಶಿರಸಿ,

## ಚುಟುಕುಗಳು

### ಬೇಕು ಜಾಗೃತಿ

ಕೊರೊನಾ ರೋಗದ ವೈರಾಣು
ಮಾಡೀತು ಶ್ವಾಸಕೋಶ ಸೇರಲು ಹೈರಾಣು
ಎಚ್ಚರ ವಹಿಸಿ ಬಾರದ ಹಾಗೆ ಈ ಪೀಡೆ
ನಿರಂತರ ಜಾಗೃತಿಯೊಂದೇ ಬೇಕು ಎಲ್ಲೆಡೆ ॥

### ಜಾಗೃತರಲ್ಲಿ

ಸೇವಿಸಿ ಬಿಸಿ ಬಿಸಿ ನೀರನ್ನು ಆಗಾಗ
ಒಣಗಲು ಬಿಡದಿರಿ ಗಂಟಲು ಭಾಗ
ಮುದುಕರು, ಮಕ್ಕಳು ಇರಲು ಎಚ್ಚರದಲ್ಲಿ
ಬಾರದು ಕೊರೊನಾ ಅಂತಹ ಜಾಗೃತರಲ್ಲಿ ॥

### ಮಾನವ ದುರಾಸೆ

ಲಕ್ಷಗಟ್ಟಲೇ ಉರುಳಿದವು ಮರಗಳು ಯೋಜನೆಗೆಲ್ಲಾ
ಏರುಪೇರಾಯ್ತು ನಿಸರ್ಗದ ಸಮತೋಲನವೆಲ್ಲಾ
ಪಾತಾಳ ಸೇರಿತು ಇದ್ದ ಜಲಮೂಲವೆಲ್ಲಾ
ಮಾನವ ದುರಾಸೆ ಇದಕೆ ಕಾರಣವೆಲ್ಲಾ ॥

### ಬರವಣಿಗೆ ಕಾಲ

ಪತ್ರ ಬರವಣಿಗೆ ಆಯ್ತು ಅಂದಿನ ಆ ಕಾಲ
ಹಿಡಿಯುವುದಾಯ್ತು ಈಗ ಕಂಪ್ಯೂಟರ್ ಬಾಲ
ಪತ್ರ ಬರೆಯುವ ಅಂದಿನ ಆ ಒಪ್ಪು
ಒಂದೆರಡು ವಾಕ್ಯದಲ್ಲಿ ಇಂದು ಕಾಣತಿವೆ ತಪ್ಪು ॥

ಜಿ.ಡಿ.ಪಾಲೇಕರ
ಬಿಣಗಾ



## ಸುಭಾಸ ಚಂದ್ರ ಬೋಸ್



ಇವರು ಏಕೆ ಮಹಾತ್ಮ
ಆಗಲಿಲ್ಲ ಮೋಸ ಇದೆ

ಸಡ್ಡು ಹೊಡೆದರು ಪರಕೀಯ
ಆಳ್ವಿಕೆಗೆ ಅವರ ಧೈರ್ಯದ
ಕಾರ್ಯಕ್ಕೆ ಮಹತ್ವವಿದೆ

ಜನರನ್ನು ಎತ್ತಿ ಕಟ್ಟಿದರು
ಅಜಾದ ಹಿಂದ್ ಪೌಜ
ಸೇನೆ ಸ್ಥಾಪಿಸಿದರು

ನಮ್ಮ ನೆಚ್ಚಿನ ಸುಭಾಸ
ಚಂದ್ರ ಬೋಸ್ ನೀವು
ನಮಗೆ ಮಾರ್ಗದರ್ಶಿ
ಆದಿರಿ

ನಿಮ್ಮ ಶೌರ್ಯ ಸಾಹಸ
ನಮಗೆ ಸ್ಫೂರ್ತಿ ದೇಶ
ಭಕ್ತರೆಲ್ಲ ಅವರ ಇಂದು
ಕೊಂಡಾಡಿರಿ

ದತ್ತು ಭಟ್, ಹಳ್ಕಾರ್



## ಚೂರೇ ಚೂರು ನಗುತ್ತಾಳೆ

2022 ನೇ ಜನವರಿ ಒಂದು
ಅವಳ ಜನ್ಮದಿನವಂದು
ಮರುಹುಟ್ಟು ಪಡೆದು ಬಂದಿದ್ದಾಳೆ ಅವಳು
ಸಾವಿನ ಮನೆಯ ಬಾಗಿಲು ತಟ್ಟಿ ವಾಪಸ್ಸಾಗಿದ್ದಾಳೆ
ಸಾವಿತ್ರಿಯಂತೆ ಯಮನೊಂದಿಗೆ ಸೆಣಸಾಡಿದ್ದಾಳೆ ಬಂದಿದ್ದಾಳೆ
ಚಿತ್ರಗುಪ್ತರ ದಫ್ತಾರಗಳಲಿ ಸೇರಿಹೋಗದೆ ನುಸುಳಿಬಂದಿದ್ದಾಳೆ

ಮಸ್ತಿಷ್ಕದೊಳಗೆ ಜಡ್ಡುಗಟ್ಟಿದ ಗಡ್ಡೆಯನ್ನೂ ಕರಗಿಸಿದ್ದಾಳೆ
ಕತ್ತರಿ, ಸೂಜಿಗಳ ಹರಿತ ಬಾಯಿಗೆ ತಲೆಯೊಡ್ಡಿದ್ದಾಳೆ
ಆಪರೇಷನ್ ಥಿಯೇಟರಿನ ಮೂಲೆ ಮೂಲೆಗೂ ಪರಿಚಿತಳಾಗಿದ್ದಾಳೆ
ನೂರಾರು ರೋಗಿಗಳ ನೋವಿಗೆ ಮೂಕವಾಗಿ ಸ್ಪಂದಿಸಿಹ
ಆಸ್ಪತ್ರೆಯ ಬೆಡ್ಡಿನೊಂದಿಗೆ ಮೌನವಾಗಿ ಪಿಸುನುಡಿದಿದ್ದಾಳೆ

ಕಣ್ಣೆದುರಿಗೇ ಮಾರುದ್ದದ ದಟ್ಟ ಕಡುಗಪ್ಪು ಕೂದಲಿನ
ಜಡೆಯನ್ನು ಕತ್ತರಿಸುವಾಗ ಸುರಿಸಿದ ಕಂಬನಿಗೆ
ಲೆಕ್ಕವಿಟ್ಟಿಲ್ಲ ಅವಳು, ಪ್ರತಿಭಟಿಸಿಲ್ಲ ಅವಳು
ಮುಡಿಯೇರಿ ನಗುತ್ತಿದ್ದ ದುಂಡುಮಲ್ಲಿಗೆಯ ಘಮವನ್ನು
ಇಂದಿಗೂ ಮರೆತಿಲ್ಲ ಅವಳು

ಸಾಲು ಸಾಲು ಥೆರಪಿಗಳ ಪ್ರಯೋಗ ಶಾಲೆಯಲಿ
ಪ್ರಯೋಗಕ್ಕೊಳಗಾಗಿದ್ದಾಳೆ ಅವಳು
ಯಂತ್ರಾಗಾರಗಳ ಹೆಬ್ಬಾಯಿಯ ಒಳಹೊಕ್ಕು
ಹೊರ ಬಂದಿದ್ದಾಳೆ ಅವಳು
ಮುಷ್ಟಿಗಟ್ಟಲೆ ಮಾತ್ರೆಗಳ ನುಂಗಿ ಜೀರ್ಣಿಸಿಕೊಂಡಿದ್ದಾಳೆ
ಗ್ಲೂಕೋಸಿನ ಬಾಟಲಿಗಳೊಳಗಿನ ಸಾರವನ್ನು
ರಕ್ತನಾಳಗಳಿಗೆ ರವಾನಿಸಿದ್ದಾಳೆ
ಔಷಧಿಗಳ ಸಂತೆಯಲ್ಲಿ ಕಳೆದುಹೋಗಿದ್ದಾಳೆ

ನೋವಿನ ಗಾಣದಲಿ ಹಿಂಡಿ ಹಿಪ್ಪೆಯಾಗಿದ್ದಾಳೆ
ಪಾದರಸದಂತಹ ಹುಡುಗಿ ರಸವಿಲ್ಲದ ಕಬ್ಬಿನ ಜಲ್ಲೆಯಾಗಿದ್ದಾಳೆ
ಸೇವಂತಿಗೆ ಚೆಂಡಿನಂತಹ ನಗೆ ಮುಗುಳ ಬಾಲೆಯಿಂದು
ದುಃಖದ ಬಿರು ಬಿಸಿಲ ಬೇಗೆಯಲಿ ನೊಂದಿದ್ದಾಳೆ, ಬೆಂದಿದ್ದಾಳೆ

ಮರಳಿ ಗೂಡಿಗೆ ಮರಳಿದ್ದಾಳೆ
ಮತ್ತೆ ತಾಯ ಮಡಿಲಲಿ ಮಗುವಾಗಿ ಹುದುಗಿಸಿಕೊಂಡಿದ್ದಾಳೆ
ಅಪ್ಪನ ಹಣೆಯಲ್ಲಿ ನೆರಿಗೆಗಳು ದಟ್ಟೈಸಿವೆ
ಅಮ್ಮನ ಕಂಗಳ ಬಾವಿಗಳು ಬತ್ತಿಹೋಗಿವೆ
ಅಣ್ಣನ ಮೊಗದಲ್ಲಿನ್ನೂ ಆತಂಕದ ಸೂತಕದ ನೆರಳು

ಅಂಗಳದಂಚಿನ ದುಂಡುಮಲ್ಲಿಗೆ ಬಳ್ಳಿ ಬಾಡಿ ಬಸವಳಿದಿದೆ
ಮಮತೆಯ ರಾಜಕುಮಾರಿಯ ಸ್ಪರ್ಶವಿಲ್ಲದೆ ಸೊರಗಿದೆ
ಚೆಂಗುಲಾಬಿ ಹೂಗಳ ಗೊಂಚಲಲಿ ಕಂಬನಿಯ ಧಾರೆಯುಕ್ಕಿದೆ
ನಗೆ ಮಾಸಿದ ನಯನಗಳಲಿ ಬರೀ ವಿಷಾದದ ಛಾಯೆ

ಯಶಸ್ವಿನಿ ಶ್ರೀಧರ ಮೂರ್ತಿ
ಕಾನಸೂರು



# ಶಿವಮೊಗ್ಗದಲ್ಲಿ ಶರಣ್ಯ ಸಂಸ್ಥೆಯ ಉಚಿತ ಮತ್ತು ವಿಶೇಷ ಸೇವೆ

**ಕೊಂಕಣವಾಹಿನಿ ನ್ಯೂಸ್**

**ಶಿವಮೊಗ್ಗ:** ಸೇವಾ ಸಂಸ್ಥೆಯ ಬಗ್ಗೆ ಮಾಹಿತಿ ಹೆಸರು ಶರಣ್ಯ ಗ್ರಾಮೀಣ ನೋವು ಉಪಶಮನ ಆರೈಕೆ ಮತ್ತು ಸಂಶೋಧನಾ ಕೇಂದ್ರ ಪ್ರಾರಂಭಿಕ ದಿನಾಂಕ ಸೇವೆ ನೀಡುತ್ತಿರುವ ಸ್ಥಳ ಶಿವಮೊಗ್ಗ ಜಿಲ್ಲೆ ಗಾಜನೂರು ಅಗ್ರಹಾರ ಗ್ರಾಮ ಸೇವಾ ವ್ಯಾಪ್ತಿ ಕರ್ನಾಟಕ ರಾಜ್ಯದ ಮತ್ತು ರಾಷ್ಟ್ರದ ಯಾವುದೇ ಯಾವುದೇ ವ್ಯಕ್ತಿಗಳಿಗೆ ಸೇವಾಕ್ಷೇತ್ರ ಮಾನವೀಯ ಸೇವೆ ಯಾವುದೇ ಚಿಕಿತ್ಸೆಯಿಂದ ಗುಣಪಡಿಸಲಾರದ ಉಲ್ಬಣ ಸ್ಥಿತಿಯಲ್ಲಿರುವ ರೋಗಿಗಳಿಗೆ ಒಳ ರೋಗಿಗಳಾಗಿ ಮತ್ತು ಗೃಹ ಶುಶ್ರೂಷಕಿಯಾಗಿ ಸೇವೆ ಪಾಲಕರಿಲ್ಲದ ಮಕ್ಕಳಿಗೆ ಆಶ್ರಯ ಹಿರಿಯ ನಾಗರೀಕರ ಯೋಗಕ್ಷೇಮ ಅಸಹಾಯಕ ಸ್ತ್ರೀಯರಿಗೆ ಆಶ್ರಯ ಸೇವೆಯ ಸೌಲಭ್ಯ ಮೇಲ್ಕಾಣಿಸಿದ ಎಲ್ಲಾ ರೀತಿಯ ಅಸಹಾಯಕ ವ್ಯಕ್ತಿಗಳಿಗೆ ಯಾವುದೇ ಜಾತಿ ಮತ ಭೇದವಿಲ್ಲದೆ ಯಾವುದೇ ಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಕಳೆದ ಹದಿನೇಳು ವರ್ಷಗಳಿಂದ ಆರೈಕೆಯ ಆಶ್ರಯ ಮತ್ತು ಆಧ್ಯಾತ್ಮಿಕತೆ ನೀಡಿ ಧೈರ್ಯ ಮತ್ತು ಆತ್ಮ ಆತ್ಮಸ್ಥೈರ್ಯ ತುಂಬುವ ಮಾನವೀಯ ಸೇವೆಯನ್ನು ನಡೆಸಿಕೊಂಡು ಬರಲಾಗುತ್ತಿದೆ ಈ ಸಂಸ್ಥೆಯು ಡಿಎಲ್ ಟ್ರಸ್ಟ್ ನ ಸೇವಾ ಯೋಜನೆ ಆಗಿದೆ .

ಶರಣ್ಯಾ ಸಂಸ್ಥೆಯ ಮೂಲ ಉದ್ದೇಶ ಮತ್ತು ಗುರಿ ಬಹಳ ವಿಶಾಲ ಮನೋಭಾವ ದ್ದಾಗಿದೆ ಪ್ರತಿಯೊಬ್ಬ ಒಳರೋಗಿಯಾಗಿ ಬಂದವರು ಗೌರವಯುತವಾಗಿ ತಮ್ಮ ಉಳಿದ ಜೀವಿತಾವಧಿಯನ್ನು ಅನುಭವಿಸಬೇಕು ಅಲ್ಲದೆ ಉತ್ತಮ ಸೌಲಭ್ಯ ಸೌಕರ್ಯಗಳನ್ನು ಹೊಂದಿ ತನ್ನ ಅಂತಿಮ ದಿನಗಳಲ್ಲಿ ನೆಮ್ಮದಿಯ ತಾಣಕ್ಕೆ ಸೇರಿರುವುದಕ್ಕೆ ಭಗವಂತನನ್ನು ಸ್ಮರಿಸುವಂತಾಗಬೇಕು ಎಂದು ಸಂಸ್ಥೆಯ ಉದ್ದೇಶ ಒಂಟಿತನವನ್ನು ಹೋಗಲಾಡಿಸಿ ತನ್ನ ಎಲ್ಲ ಸಿಬ್ಬಂದಿಯೊಂದಿಗೆ ಪ್ರೀತಿಯ ವಾತಾವರಣವನ್ನು ಹೊಂದಿ ಒಬ್ಬ ರೋಗಿಗೆ ಅಸಹಾಯಕರಿಗೆ ಹಿಂದೆಂದೂ ದೊರೆಯದಂತಹ ಸಂಬಂಧದ ಅನುಭವವನ್ನು ನೀಡುವುದೇ ಸಂಸ್ಥೆಯ ಮೂಲ ಉದ್ದೇಶ ವಾಗಿದೆ




ಸಂಸ್ಥೆಯ ವತಿಯಿಂದ ಹೆಚ್ಚು ಹೆಚ್ಚು ರೋಗಿಗಳಿಗೆ ಯಾವುದೇ ಫಲಾಪೇಕ್ಷೆಯಿಲ್ಲದೆ ಉಚಿತವಾಗಿ ನೀಡುವುದು ಮುಖ್ಯ ಗುರಿಯಾಗಿದೆ ಈ ಗುರಿಯನ್ನು ಆರೈಕೆ ಕೇಂದ್ರದ ಎಲ್ಲ ಸೇವೆಗಳಲ್ಲಿ ತೊಡಗಿಸಿಕೊಂಡು ನೀಡುವುದಾಗಿದೆ ಪ್ರಾರಂಭಿಕ ಹಂತದಲ್ಲಿ ಎಂಬತ್ತು ಜನರಿಗೆ ಯೋಜನೆ ರೂಪಿಸ ಗೊಂಡಿದ್ದು ಈಗ ಪ್ರಸ್ತುತ ಸುಸಜ್ಜಿತ ಸ್ವಚ್ಛವಾಗಿರುವ 2ವಾರ್ಡ್ ಗಳನ್ನು ನಿರ್ಮಿಸಿ ಇಪ್ಪತ್ತು ಒಳ ರೋಗಿಗಳಿಗೆ ಆಶ್ರಯ ನೀಡಿ ಆರೈಕೆ ಸುಶ್ರೂಷೆ ಸೇವೆ ನೀಡಲಾಗುತ್ತಿದೆ .ಚಿಕಿತ್ಸೆಗೆ ಮಿತಿ ಇದ್ದರೂ ಆರೈಕೆಗೆ ಮಿತಿ ಇಲ್ಲ ಎಂಬ ಮೂಲ ಮಂತ್ರ ನಮ್ಮ ಧ್ಯೇಯವಾಗಿದೆ ಈ ಸೇವೆಯನ್ನು ಪ್ರಾರಂಭಿಸಿದ ದಿನದಿಂದ ಇಂದಿನವರೆಗೆ ಹದಿನೇಳು ವರ್ಷಗಳ ಸುಧೀರ್ಘ ಪಯಣದಲ್ಲಿ ಹಲವಾರು ರೀತಿಯ ಉಲ್ಬಣಿಸಿದ ಮತ್ತು ವಿವಿಧ ಸಾಮಾಜಿಕ ಪರಿಸ್ಥಿತಿಯ ರೋಗಿಗಳಿಗೆ ಆರೈಕೆ ನೀಡಲಾಗಿದೆ ಪ್ರಮುಖವಾಗಿ ರೋಗ ಅತಿ ಉಲ್ಬಣಗೊಂಡು ಕೀವು ರಕ್ತ ಸ್ರಾವ ಆಗುವಂತಹುದು ಆಹಾರವೇ ಸೇರದೇ ಇರುವುದು ಲಿವರ್ ನ ಕ್ಯಾನ್ಸರ್ ನಲ್ಲಿ ಹೊಟ್ಟೆಯಲ್ಲಿ ದ್ರವ ಶೇಖರಣೆಯಾಗಿ ನೋವು ಸಂಕಟ ಅನುಭವಿಸಿರುವುದು ಮತ್ತು ಗುದದ್ವಾರದ ಕ್ಯಾನ್ಸರ್ ನಂತಹ ಉಲ್ಬಣತೆ ಹೀಗೆ ಹತ್ತು ಹಲವಾರು ಸಂದರ್ಭದಲ್ಲಿ ರೋಗಿಯ ಒಂದೊಂದು ದಿನವೂ ಬಹಳ ಸವಾಲಾಗಿರುತ್ತದೆ .

ಮೇಲಿನ ಈ ಸೇವೆಗೆ ಹೊರತಾಗಿ ಶಿವಮೊಗ್ಗ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿರುವ ರೋಗಿಗಳಿಗೆ ಅವರವರ ಮನೆಯಲ್ಲೇ ಆರೈಕೆ ಶುಶ್ರೂಷೆ ನೀಡುವ ಕಾರ್ಯವನ್ನು ಪ್ರತ್ಯೇಕವಾಗಿ ತಂಡ ನಿರ್ವಹಿಸುತ್ತದೆ .ಈ ಆರೈಕೆಯಿಂದ ರೋಗಿಗೆ ಮತ್ತು ಕುಟುಂಬದವರಿಗೆ ದೈಹಿಕ ಮತ್ತು ಮಾನಸಿಕ ಸಾಂತ್ವನ ನೀಡುವುದಲ್ಲದೆ ರೋಗಿಗಳಿಗೆ ನೀಡುವ ಸಂಪೂರ್ಣ ಆರೈಕೆಯಿಂದ ಆತನು ಆ ದಿನಗಳನ್ನು ಶಾಂತಿ ನೆಮ್ಮದಿ ಮತ್ತು ಗೌರವಯುತವಾಗಿ ಕಳೆಯಬಹುದೆಂಬ ಆಶಯದಿಂದ ಈ ಯೋಜನೆ ನಿರೂಪಿತವಾಗಿದೆ ರೋಗಿಗೆ ತನ್ನ ಅಂತಿಮ ದಿನಗಳು ನೋವಿಲ್ಲದ ಮಾನಸಿಕ ಸ್ಥೈರ್ಯದ ದಿನಗಳಾಗಲಿ ಎಂಬ ದಿಕ್ಕಿನಲ್ಲಿ ಇದೊಂದು ಪ್ರಯತ್ನವಾಗಿದೆ .

ಇಡೀ ಪರಿಸರವನ್ನು ಗಿಡಮರಗಳಿಂದ ತುಂಬಿ ತುಳುಕುತ್ತಾ ಪ್ರಕೃತಿಯ ಕೃಪಾಶೀರ್ವಾದದೊಂದಿಗೆ ಆಯುರ್ವೇದ ಮರಗಳ ವನ ರಾಶಿ ನಕ್ಷತ್ರ ಮತ್ತು ಗ್ರಹಗಳ ಲಕ್ಷ್ಮಿ ಪವಿತ್ರ ವನ ಚಂದ್ರ ಸುಚೇತಾ ಉದ್ಯಾನವನ ಹೀಗೆ ಇಡೀ ಪ್ರದೇಶವನ್ನು ಪ್ರಾಕೃತಿಕವಾಗಿ ಬೆಳೆಸಿಕೊಂಡು ಉತ್ತಮ ಆರೊಗ್ಯದಾಯಕ ವಾತಾವರಣದೊಂದಿಗೆ ಅಭಿವೃದ್ಧಿ ಪಡಿಸಲಾಗಿದೆ .

ಇಂತಹ ರೋಗಿಗಳಿಗೆಂದು ನಿರ್ಮಾಣವಾಗಿರುವ ಆರೈಕೆ ಕೇಂದ್ರ ಇಡೀ ರಾಜ್ಯದಲ್ಲೇ ಎರಡನೆಯದೆಂದು ತಿಳಿಸಲು ಹೆಮ್ಮೆಯೆನಿಸುತ್ತದೆ . ಇದರ ಕಲ್ಪನೆಯೇ ವಿಶೇಷ. ಸಾಧಾರಣವಾಗಿ ರೋಗಿಯನ್ನು ಗುಣಪಡಿಸಲು ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳು ಚಿರಪರಿಚಿತ ಆದರೆ ರೋಗ ಗುಣಪಡಿಸಲಾಗದೆ ಉಲ್ಬಣ ಸ್ಥಿತಿಯಲ್ಲಿರುವ ವ್ಯಕ್ತಿಗೆ ಆರೈಕೆ ಆಶ್ರಯ ನೀಡಿ ತನ್ನ ಜೀವಿತದ ಉಳಿದಿರುವಷ್ಟು ಸಮಯವನ್ನು ನೆಮ್ಮದಿಯ ನೋವುರಹಿತ ಪ್ರೀತಿಯ ದಿನ ಗಳನ್ನಾಗಿ ಪರಿವರ್ತಿಸುವ ಈ ಪ್ರಯತ್ನ ನಿಜಕ್ಕೂ 1ಸವಾಲೇ ಸರಿ ಈ ಸಾಧನೆಗೆ ವೈದ್ಯಕೀಯ ತಂಡ ಶುಶ್ರೂಷಾ ತಂಡ ಸ್ವಚ್ಛತಾ ಸಿಬ್ಬಂದಿ ಊಟೋಪಚಾರದ ವ್ಯವಸ್ಥೆ ಆಧ್ಯಾತ್ಮಿಕ ಚಿಂತನೆ ಆಪ್ತಸಮಾಲೋಚನೆ ಧೈರ್ಯ ತುಂಬುವಂತಹ ಪರಿಣಿತಿ ಹೀಗೆ ಹಲವಾರು ವಿಭಾಗಗಳ ಸಮ್ಮಿಳಿತದ ಸೇವೆಯೇ ಶರಣ್ಯ ನೋವು ಉಪಶಮನ ಆರೈಕೆ ಮತ್ತು ಶುಶ್ರೂಷಾ ಕೇಂದ್ರ ವಾಗಿದೆ .

ಸಂಪರ್ಕಕ್ಕಾಗಿ ಮೊಬೈಲ್ ಸಂಖ್ಯೆಗಳು: 9980448485, 9945776583

# ಕೃಷಿ ಕೆಲಸಗಳಿಗಾಗಿ ಡ್ರೋನ್ ಖರೀದಿಸುವವರಿಗೆ ಆರ್ಥಿಕ ನೆರವು: ಕೇಂದ್ರ ಸರ್ಕಾರ

**ಕೊಂಕಣವಾಹಿನಿ ನ್ಯೂಸ್**

**ನವದೆಹಲಿ:** ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆಗೆ ಉತ್ತೇಜನ ನೀಡಲು ಕ್ರಮ ಕೈಗೊಂಡಿರುವ ಕೇಂದ್ರ ಸರ್ಕಾರ ಔಷಧ ಸಿಂಪಡಣೆ, ಸರಕು ಸಾಗಾಣಿಕೆ ಸೇರಿದಂತೆ ಹಲವು ಕೃಷಿ ಕೆಲಸಗಳಿಗೆ ಬಳಕೆಯಾಗುವ ಡ್ರೋನ್‌ಗಳ ಖರೀದಿಗೆ ಆರ್ಥಿಕ ನೆರವು ಘೋಷಣೆ ಮಾಡಿದೆ.

ಭಾರತದಲ್ಲಿ ಕರಾರುವಕ್ಕಾದ ಆಧುನಿಕ ಕೃಷಿ ಪದ್ಧತಿಯ ಉತ್ತೇಜನಕ್ಕೆ ಬಲ ನೀಡುವ ಭಾಗವಾಗಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಕೃಷಿ ವಲಯದ ಪಾಲುದಾರರಿಗೆ ಡ್ರೋನ್ ತಂತ್ರಜ್ಞಾನವನ್ನು ಕೈಗೆಟುಕುವ ಬೆಲೆಗೆ ಸಿಗುವಂತೆ ಮಾಡಲು ಪ್ರಮುಖ ಮಾರ್ಗ ಸೂಚಿಗಳನ್ನು ಪ್ರಕಟಿಸಿದೆ.



ಕೃಷಿ ಯಾಂತ್ರೀಕರಣ ಉಪಮಿಷನ್ (ಎಸ್‌ಎಂಎಎಂ)ನ ಮಾರ್ಗಸೂಚಿಗಳಿಗೆ ತಿದ್ದುಪಡಿ ಮಾಡಲಾಗಿದೆ. ಇದರಿಂದ ಕೃಷಿ ಡ್ರೋನ್ ವೆಚ್ಚದ ಶೇ.100ವರೆಗೆ ಅಥವಾ 10 ಲಕ್ಷ ರೂ. ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಅನುದಾನವಾಗಿ ನೀಡಲು ನಿರ್ಧರಿಸಿದೆ.

ಕೃಷಿ ಯಂತ್ರೋಪಕರಣಗಳ ತರಬೇತಿ ಮತ್ತು ಪರೀಕ್ಷಾ ಸಂಸ್ಥೆಗಳು, ಐಸಿಎಆರ್ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಗೆ ನೀಡಲಾಗುತ್ತದೆ. ಈ ಸಂಸ್ಥೆಗಳು ರೈತರ ಹೊಲಗಳಲ್ಲಿ ಡ್ರೋನ್ ತಂತ್ರಜ್ಞಾನದ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ.

ರೈತ ಉತ್ಪಾದಕ ಸಂಸ್ಥೆಗಳು ಡ್ರೋನ್ ಖರೀದಿಗೆ ಶೇ.75 ವರೆಗೆ ಅನುದಾನ ಪಡೆಯಲು ಅರ್ಹವಾಗಿವೆ. ಡ್ರೋನ್‌ಗಳನ್ನು ಖರೀದಿಸಲು ಬಯಸದ ಕಸ್ಟಮ್ ಹೈರಿಂಗ್ ಕೇಂದ್ರಗಳು, ಹೈಟೆಕ್ ಹಬ್‌ಗಳು ಬಾಡಿಗೆಗೆ ಪಡೆಯಲು ಅವಕಾಶ ನೀಡಲಾಗಿದೆ. ಪ್ರತಿ ಹೆಕ್ಟೇರ್‌ಗೆ ಆರು ಸಾವಿರ ರೂ. ವೆಚ್ಚವನ್ನು ಒದಗಿಸಲಾಗುತ್ತದೆ. ಡ್ರೋನ್ ಹಣಕಾಸಿನ ನೆರವು ಮತ್ತು ಅನುದಾನ ಮುಂದಿನ ವರ್ಷದ ಮಾರ್ಚ್ 31ರವರೆಗೆ ಲಭ್ಯವಿರುತ್ತದೆ.

ಡ್ರೋನ್ ಅಪ್ಲಿಕೇಶನ್ ಮೂಲಕ ಎಲ್ಲ ರೀತಿಯ ಕೃಷಿ ಸೇವೆಗಳನ್ನು ಒದಗಿಸುವ ಸಲುವಾಗಿ ರೈತರ ಸಹಕಾರಿ ಸೊಸೈಟಿಗಳು, ಎಫ್‌ಪಿಒಗಳು ಮತ್ತು ಗ್ರಾಮೀಣ ಉದ್ಯಮಿಗಳು ಈಗಾಗಲೇ ಸ್ಥಾಪಿಸಿರುವ ಗ್ರಾಹಕ ಬಾಡಿಗೆ ಕೇಂದ್ರಗಳು ಡ್ರೋನ್ ಖರೀದಿಸಲು ಮೂಲ ವೆಚ್ಚದ ಶೇ.40ರಷ್ಟು ಅಥವಾ 4 ಲಕ್ಷ ರೂ.ಗಳು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಹಣಕಾಸಿನ ನೆರವು ಲಭ್ಯವಾಗುತ್ತದೆ.

ಗ್ರಾಹಕರ ಬಾಡಿಗೆ ಕೇಂದ್ರಗಳನ್ನು ಸ್ಥಾಪಿಸುವ ಕೃಷಿ ಪದವೀಧರರು ಮೂಲ ವೆಚ್ಚದ ಶೇ.50 ಅಥವಾ ಡ್ರೋನ್ ಖರೀದಿಗೆ 5 ಲಕ್ಷ ರೂ. ವರೆಗೆ ಅನುದಾನ ಪಡೆಯಲು ಅರ್ಹರಾಗಿರುತ್ತಾರೆ.

ಗ್ರಾಮೀಣ ಉದ್ಯಮಶೀಲರು ಮಾನ್ಯತೆ ಪಡೆದ ಪ್ರೌಢಶಿಕ್ಷಣ ಮಂಡಳಿಯಿಂದ 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ ಅಥವಾ ಯಾವುದೇ ಅಕೃತ ರಿಮೋಟ್ ಪೈಲಟ್ ತರಬೇತಿ ಸಂಸ್ಥೆ ನಿರ್ದಿಷ್ಟಪಡಿಸಿದ ಸಂಸ್ಥೆಯಿಂದ ರಿಮೋಟ್ ಪೈಲಟ್ ಪರವಾನಗಿ ಹೊಂದಿರಬೇಕು ಎಂದು ಸೂಚಿಸಲಾಗಿದೆ.

ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ಮತ್ತು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಷರತ್ತು ಬದ್ಧ ವಿನಾಯಿತಿ ಮಾರ್ಗಗಳಲ್ಲಿ ಡ್ರೋನ್ ಕಾರ್ಯಾಚರಣೆಗೆ ಅನುಮತಿ ನೀಡಿವೆ. ಭಾರತದಲ್ಲಿ ಡ್ರೋನ್‌ಗಳ ಬಳಕೆ ಮತ್ತು ಕಾರ್ಯಾಚರಣೆಯನ್ನು ನಿಯಂತ್ರಿಸಲು ನಾಗರಿಕ ವಿಮಾನಯಾನ ಸಚಿವಾಲಯ, 2021 ಆಗಸ್ಟ್ 25ರಂದು ಜಿಎಸ್‌ಆರ್ ಸಂಖ್ಯೆ 589(ಇ) ಮೂಲಕ ಡ್ರೋನ್ ನಿಯಮಾವಳಿ–2021 ಪ್ರಕಟಿಸಿದೆ.

ಕೃಷಿ, ಅರಣ್ಯ ಮತ್ತಿತರ ಪ್ರದೇಶಗಳಲ್ಲಿ ಬೆಳೆ ರಕ್ಷಣೆ, ಕೀಟನಾಶಕ ಸಿಂಪಡಣೆ, ಮಣ್ಣು ಮತ್ತು ಬೆಳೆ ಪೋಷಕಾಂಶಗಳ ಸಿಂಪಡಣೆಗಾಗಿ ಡ್ರೋನ್ ಬಳಕೆ ಮಾಡಬಹುದಾಗಿದೆ. ಡ್ರೋನ್ ಬಳಕೆ ಎಲ್ಲರಿಗೂ ಲಭ್ಯವಾಗುವಂತೆ ಮಾಡಿದರೆ ಕೃಷಿ ಚಟುವಟಿಕೆಗಳು ವೇಗ ಪಡೆದುಕೊಳ್ಳುತ್ತವೆ, ದೇಶಿಯ ಡ್ರೋನ್ ಉತ್ಪಾದನೆಯೂ ಹೆಚ್ಚಾಗಲಿದೆ ಎಂದು ಕೃಷಿ ಮಂತ್ರಾಲಯ ತಿಳಿಸಿದೆ.

# ಜಕ್ಕೂರು ವೈಮಾನಿಕ ಶಾಲೆ ಮತ್ತೆ ಆರಂಭ



**ಕೊಂಕಣವಾಹಿನಿ ನ್ಯೂಸ್**

**ಬೆಂಗಳೂರು:** ನಗರದ ಜಕ್ಕೂರಿನಲ್ಲಿ ನವೀಕರಣಗೊಂಡ ಸರ್ಕಾರಿ ವಿಮಾನ ಹಾರಾಟ ತರಬೇತಿ ಶಾಲೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಲೋಕಾರ್ಪಣೆಗೊಳಿಸಿದರು. ನೇತಾಜಿ ಸುಭಾಷ್ ಚಂದ್ರಬೋಸ್ 125ನೇ ಜನ್ಮದಿನ ಹಿನ್ನೆಲೆಯಲ್ಲಿ 75 ನೇತಾಜಿ ಅಮೃತ ಎನ್‌ಸಿಸಿ ಶಾಲೆಗಳನ್ನೂ ಲೋಕಾರ್ಪಣೆಗೊಳಿಸಲಾಯಿತು.

ಜಕ್ಕೂರಿನ ವೈಮಾನಿಕ ತರಬೇತಿ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯಕ್ರಮದಲ್ಲಿ ಸಚಿವರಾದ ಡಾ.ಅಶ್ವತ್ಥ್ ನಾರಾಯಣ, ನಾರಾಯಣಗೌಡ, ಬಿ.ಸಿ.ನಾಗೇಶ್, ಶಾಸಕ ಕೃಷ್ಣ ಭೈರೇಗೌಡ ಭಾಗವಹಿಸಿದ್ದರು. ವೈಮಾನಿಕ ತರಬೇತಿ ಶಾಲೆಗೆ ಚಾಲನೆ ನೀಡಿ ಮಾತನಾಡಿದ ಬಸವರಾಜ ಬೊಮ್ಮಾಯಿ, ಬೆಂಗಳೂರಿನ ಜಕ್ಕೂರಿನಲ್ಲಿರುವ ವೈಮಾನಿಕ ತರಬೇತಿ ಶಾಲೆಯಲ್ಲಿ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ 75 ಪೈಲಟ್‌ಗಳಿಗೆ ತರಬೇತಿ ನೀಡಲಾಗುತ್ತಿದೆ. ಹೊಸ ಟೆಕ್ನಾಮ್–ಪಿ2006ಟಿ ವಿಮಾನ, ಜಿಎಫ್‌ಟಿಎಸ್ ಲೊಗೊ ಅನಾವರಣಗೊಳಿಸಲಾಯಿತು. ಹೆಲಿ ಟೂರಿಸಂಗೆ ಚಾಲನೆ ನೀಡಲಾಯಿತು. ಸಿದ್ಧಿ ಜನಾಂಗದ ಕ್ರೀಡಾಪಟುಗಳ ತರಬೇತಿ ಹಾಗೂ ಮಹಿಳಾ ಸ್ವ–ರಕ್ಷಣಾ ತರಬೇತಿಗೂ ಈ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಇದೇ ಸಂದರ್ಭ ಹೆಲಿಪ್ಯಾಡ್, ಲೌಂಜ್ ಸೇರಿದಂತೆ 50 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ಕೆ.ಸಿ.ನಾರಾಯಣಗೌಡ, ಬಡ ಮಕ್ಕಳಿಗೆ ವಿಮಾನ ಚಾಲನೆ ಕಲಿಸುವ ಯೋಜನೆ ತಯಾರಾಗುತ್ತಿದೆ. ಜಕ್ಕೂರು ವಿಮಾನ ನಿಲ್ದಾಣದ 10 ಎಕರೆ ಜಮೀನು ಒತ್ತುವರಿಯಾಗಿದ್ದು, ಅದನ್ನು ತೆರವುಗೊಳಿಸುವ ಕಾರ್ಯಕ್ಕೆ ಚಾಲನೆ ನೀಡುತ್ತೇವೆ.

ಇಲ್ಲೇ ಫೋರ್ ಸೀಟರ್ ಹೆಲಿಕಾಪ್ಟರ್ ಒದಗಿಸುತ್ತೇವೆ. ಹಲವು ಕಂಪನಿಗಳು ಇಲ್ಲಿ ಗ್ಯಾರೇಜ್ ಮಾಡಿಕೊಂಡಿದ್ದು, ಅದರಿಂದ ಸರ್ಕಾರಕ್ಕೆ ▯17 ಕೋಟಿ ಆದಾಯ ಬರುತ್ತಿದೆ ಎಂದು ತಿಳಿಸಿದರು.

ನಾನು ಕರ್ನಾಟಕದವರು ಅದೃಷ್ಟವಂತರು. ವಿಮಾನ ಚಾಲನೆ ಕಲಿಯಲು ಬೇರೆ ರಾಜ್ಯ ಅಥವಾ ದೇಶಕ್ಕೆ ಹೋಗಬೇಕಾದ ಅಗತ್ಯವಿಲ್ಲ. ಎಲ್ಲವೂ ಇಲ್ಲಿಯೇ ಸಿಗುತ್ತದೆ. ಒಂದು ಎಂಜಿನ್, ಎರಡು ಎಂಜಿನ್‌ನ ವಿಮಾನಗಳೂ ಇಲ್ಲಿವೆ ಎಂದು ವಿವರಿಸಿದರು.

## 1ನೇ ಪುಟದಿಂದ .........

### ಮುಂಡಗೋಡ ತಾಲೂಕಿನಲ್ಲಿ...

ಹಾಗೂ ಇಂದೂರಿನ ಓರ್ವ ವಿದ್ಯಾರ್ಥಿಗೆ ಕೋವಿಡ್ ಸೋಂಕು ದೃಢಪಟ್ಟಿದೆ ಎಂದು ಮಾಹಿತಿ ಲಭ್ಯವಾಗಿದೆ.

ಪುಟ್ಟ ಮಕ್ಕಳಿಗೂ ಸೋಂಕು:

ಇನ್ನು, ಕಾತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 4 ವರ್ಷದ ಓರ್ವ ಬಾಲಕ, ಚಿಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 6 ವರ್ಷದ ಮತ್ತೋರ್ವ ಬಾಲಕನಿಗೂ ಸೋಂಕು ದೃಢಪಟ್ಟಿದೆ. ಅಲ್ಲದೇ, ಕಲಕೊಪ್ಪ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 7 ವರ್ಷ ವಯಸ್ಸಿನ ಮೂವರು ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿದೆ.

### ಭಾರತದಲ್ಲಿ ಸಮುದಾಯ...

ಹೆಚ್ಚಳವಾಗಲಿದೆ. ಅಪಾಯದ ಪ್ರಮಾಣ ಹೆಚ್ಚಲಿದೆ ಎಂದು ಎಚ್ಚರಿಕೆ ನೀಡಿದೆ. ಇತ್ತೀಚೆಗೆ ಫ್ರಾನ್ಸ್‌ನಲ್ಲಿ ಪತ್ತೆಯಾಗಲಿದೆ ಎಂದು ಹೇಳಲಾದ ಬಿ.1.640.2 ತಳಿ ಇದುವರೆಗೂ ಭಾರತದಲ್ಲಿ ಕಂಡುಬಂದಿಲ್ಲ. ಹಾಗಾಗಿ ಆತಂಕ ಪಡುವ ಅಗತ್ಯವೂ ಸದ್ಯಕ್ಕೆ ಇಲ್ಲ ಎಂದೂ ಈ ಇನ್‌ಸಾಕೋಗ್ ತಿಳಿಸಿದೆ.

ಭಾರತದಲ್ಲಿ ಒಮಿಕ್ರಾನ್ ಸಮುದಾಯ ಪ್ರಸರಣ ಆಗುತ್ತಿದೆ ಎಂಬುದನ್ನು ಈಗಾಗಲೇ ಹಲವು ರಾಜ್ಯಗಳು ಹೇಳಿದ್ದವು. ವಿದೇಶಿ ಪ್ರವಾಸದ ಹಿನ್ನೆಲೆ ಇಲ್ಲದವರು, ವಿದೇಶಕ್ಕೆ ಹೋಗಿಬಂದವರ ಸಂಪರ್ಕಕ್ಕೆ ಹೋಗದೆ ಇರುವವರಿಗೂ ಒಮಿಕ್ರಾನ್ ತಗುಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದವು. ಒಮಿಕ್ರಾನ್ ವೈರಾಣು ಮೊದಲು ಪತ್ತೆಯಾಗಿದ್ದು ದಕ್ಷಿಣ ಆಫ್ರಿಕಾದಲ್ಲಿ. 2021ರ ನವೆಂಬರ್ 24ರಂದು ಆ ದೇಶದಲ್ಲಿ ಪತ್ತೆಯಾದ ಒಮಿಕ್ರಾನ್ ಇದೀಗ ಜಗತ್ತಿನ ಬಹುತೇಕ ದೇಶಗಳಲ್ಲಿ ಮತ್ತೊಮ್ಮೆ ಕೊರೊನಾ ಹೆಚ್ಚಲು ಕಾರಣವಾಗಿದೆ. ಅಷ್ಟೇ ಅಲ್ಲ, ಭಾರತದಲ್ಲಿಯೂ ಮೂರನೇ ಅಲೆ ಉಂಟಾಗಲು ಕಾರಣವಾಗಿದೆ. ದೇಶದಲ್ಲಿ ಮೊಟ್ಟಮೊದಲ ಒಮಿಕ್ರಾನ್ ಪ್ರಕರಣ ಡಿಸೆಂಬರ್‌ನಲ್ಲಿ ಕಾಣಿಸಿಕೊಂಡಿತ್ತು. ಎರಡನೇ ಅಲೆಗೆ ಕಾರಣವಾಗಿದ್ದ ಡೆಲ್ಟಾ ವೈರಾಣುಗಿಂತಲೂ ಅತ್ಯಂತ ವೇಗವಾಗಿ ಒಮಿಕ್ರಾನ್ ಹರಡುತ್ತಿದೆ. ಸದ್ಯ ದೇಶದಲ್ಲಿ 10,050 ಒಮಿಕ್ರಾನ್ ಸೋಂಕಿತರು ಇದ್ದಾರೆ.

### ಎಸ್ ಎಸ್ ಎಲ್ ಸಿ, ....

ಸಾಧ್ಯತೆ ಇದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳೆದ ವರ್ಷದ ರೀತಿ ಬಹು ಆಯ್ಕೆ ಪ್ರಶ್ನೆ ಇರಲ್ಲ. ಪಿಯುಸಿ ವಿದ್ಯಾರ್ಥಿಗಳಿಗೂ ಪರೀಕ್ಷೆಯಿಂದ ವಿನಾಯಿತಿ ಇರಲ್ಲ. ಸೋಂಕು ಹೆಚ್ಚಾದರೂ ಅಗತ್ಯ ಕ್ರಮ ಪಾಲಿಸಿ ಪರೀಕ್ಷೆ ನಡೆಸಲಾಗುತ್ತದೆ. ಒಂದು ವೇಳೆ ತರಗತಿ ಬಂದ್ ಆಗಿದಿದ್ದರೆ ಪಠ್ಯ ಮುಗಿಸಲು ತೊಂದರೆ ಆಗುತ್ತಿತ್ತು. ಆದರೆ ಯಾವುದೇ ತೊಂದರೆಗಳಿಲ್ಲದೆ ಸರಾಗವಾಗಿ ಪಾಠ ಮುಗಿಯುತ್ತಿದೆ. ಹೀಗಾಗಿ ತಾತ್ಕಾಲಿಕ ವೇಳಾಪಟ್ಟಿಯೇ ಬಹುತೇಕ ಅಂತಿಮವಾಗುವ ಸಾಧ್ಯತೆ ಇದೆ ಎಂದು ಶಿಕ್ಷಣ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

### ಪಿಯುಸಿ ಮುಖ್ಯ...

**ತರ್ಕಶಾಸ್ತ್ರ, ಏ.23ರಂದು ಮನಃಶಾಸ್ತ್ರ, ರಸಾಯನಶಾಸ್ತ್ರ, ಏ.25 ಅರ್ಥಶಾಸ್ತ್ರ ಪರೀಕ್ಷೆ ನಡೆಲಿದೆ.**

**ಇನ್ನೂ ಏ.26ರಂದು ಹಿಂದಿ, ಏಪ್ರಿಲ್ 28ಕ್ಕೆ ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಏ.29ಕ್ಕೆ ಕನ್ನಡ, ಏ.30ರಂದು ಸಮಾಜಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಮೇ 2ರಂದು ಭೂಗೋಳ ಶಾಸ್ತ್ರ ಹಾಗೂ ಜೀವಶಾಸ್ತ್ರ ಪರೀಕ್ಷೆ, ಮೇ 4ರಂದು ಇಂಗ್ಲಿಷ್ ವಿಷಯದ ಪರೀಕ್ಷೆ ನಡೆಯಲಿದೆ.**

### ಎಸ್ ಎಸ್ ಎಲ್ ಸಿ...

**ಸಬ್ಜೆಕ್ಟ್, ಏಪ್ರಿಲ್ 4 ಗಣಿತ, ಸಮಾಜಶಾಸ್ತ್ರ, ಏಪ್ರಿಲ್ 6 ಸಮಾಜ ವಿಜ್ಞಾನ, ಏಪ್ರಿಲ್ 6 ತೃತೀಯ ಭಾಷೆ, ಏಪ್ರಿಲ್ 11 ವಿಜ್ಞಾನ, ರಾಜ್ಯಶಾಸ್ತ್ರ, ಕರ್ನಾಟಕ / ಹಿಂದೂಸ್ತಾನಿ ಸಂಗೀತದ ಪರೀಕ್ಷೆಗಳು ನಡೆಯಲಿವೆ.**

**ಬೆಳಗ್ಗೆ 10.30ರಿಂದ ಮಧ್ಯಾಹ್ನ 1.45ರವರೆಗೆ ಪರೀಕ್ಷೆಗಳು ನಡೆಯಲಿವೆ. ಪ್ರತಿ ವಿಷಯಕ್ಕೂ ಪ್ರಶ್ನಪತ್ರಿಕೆ ಓದಲು 15 ನಿಮಿಷ ಕಾಲಾವಕಾಶ ನೀಡಲಾಗುವುದು ಎಂದು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ತಿಳಿಸಿದೆ.**

### ಪೂರ್ವಸಿದ್ಧತಾ ಮತ್ತು...

**ಪತ್ರಿಕೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದ್ದು ಅದರ ವಿವರಗಳನ್ನು ಸಹ ಪರೀಕ್ಷೆ ವೇಳಾಪಟ್ಟಿಯೊಂದಿಗೆ ಇಲಾಖೆಯು ಪ್ರಕಟಿಸಿದೆ. 2021-22ನೇ ಸಾಲಿನ ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ 17-02-2022 ರಿಂದ 25-03-2022 ರವರೆಗೆ ನಡೆಸಲು ದಿನಾಂಕವನ್ನು ನಿಗದಿಪಡಿಸಲಾಗಿದೆ. 2021-22ನೇ ಸಾಲಿನ ದ್ವಿತೀಯ ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ದಿನಾಂಕ 14-03-2022 ರಿಂದ 25-03-2022 ರವರೆಗೆ ನಡೆಸಲು ದಿನಾಂಕ ನಿಗದಿಪಡಿಸಲಾಗಿದೆ. 2021-22ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ದಿನಾಂಕ 16-04-2022 ರಿಂದ 04-05-2022 ರವರೆಗೆ ನಡೆಸಲು ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.**

### ಪರೀಕ್ಷೆಗೆ ಒಳಪಡದ...

ಜ.17ರಂದು ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ಮಾಡಿರುವ ಆರೋಗ್ಯ ಸಿಬ್ಬಂದಿ, ಅದರಲ್ಲಿ ಶಾಲೆಗೆ ಹೋಗದ ಈ ವಿದ್ಯಾರ್ಥಿನಿಯ ಕೋವಿಡ್ ಪರೀಕ್ಷೆ ಮಾಡಿರುವುದಾಗಿ ಹಾಗೂ ವರದಿಯು ಪಾಸಿಟಿವ್ ಅಂತ ಬಂದಿದೆ ಎಂದು ಆಕೆಯ ಪಾಲಕರಿಗೆ ಹೇಳಿದ್ದಲ್ಲದೆ ಪಾಲಕರಿಗೆ ಶಾಲೆಗೆ ಬರಲು ತಿಳಿಸಿದ್ದಾರೆ.

ಒಮ್ಮೆಲೇ ಆತಂಕಗೊಂಡ ವಿದ್ಯಾರ್ಥಿನಿಯ ತಂದೆ ಇದ್ದ ಕೆಲಸ ಬಿಟ್ಟು ಲೊಯೋಲ ಶಾಲೆಗೆ ದೌಡಾಯಿಸಿದ್ದಾರೆ. ಅಲ್ಲಿ ಶಿಕ್ಷಕರು, "ನಿಮ್ಮ ಮಗಳಿಗೆ ಕೋವಿಡ್ ಪಾಸಿಟಿವ್ ಬಂದಿದೆ. ಕೂಡಲೇ ತಾಲೂಕು ಆಸ್ಪತ್ರೆಗೆ ಕರೆದುಕೊಂಡು ಹೋಗಿ" ಎಂದು ತಿಳಿಸಿದ್ದಾರೆ. ಇದರಿಂದ ಆತಂಕಗೊಂಡ ವಿದ್ಯಾರ್ಥಿನಿಯ ತಂದೆ, ತಮ್ಮ ಮಗಳು ಎಂಟು ದಿನಗಳಿಂದ ಶಾಲೆಗೆ ಬಂದಿಲ್ಲ. ಕೋವಿಡ್ ಪರೀಕ್ಷೆ ಯಾವಾಗ ಮಾಡಲಾಗಿದೆ ಎಂದು ಪ್ರಶ್ನಿಸಿದ್ದಾರೆ.

ಏನೋ ಎಡವಟ್ಟು ಆದಂತೆ ಕಂಡುಬಂದ ಶಿಕ್ಷಕರು ತರಗತಿಯ ಹಾಜರಾತಿ ನೋಡಿದಾಗ, ವಿದ್ಯಾರ್ಥಿನಿಯು ಶಾಲೆಗೆ ಬಂದಿಲ್ಲದಿರುವುದು ದೃಢಪಟ್ಟಿದೆ. ಆಗ, ಶಿಕ್ಷಕರು ಆರೋಗ್ಯ ಸಿಬ್ಬಂದಿಗೆ ಕರೆ ಮಾಡಿ, ಆ ವಿದ್ಯಾರ್ಥಿನಿ ಶಾಲೆಗೆ ಬಂದಿಲ್ಲ. ಆಕೆಯು ಕೋವಿಡ್ ಟೆಸ್ಟ್ ವರದಿ ಅದಲ್ಲ. ಯಾರದೋ ಮಿಸ್ ಆಗಿ ಬಂದಿರಬಹುದೆಂದು ತಿಳಿಸಿ ಪುನರ್ ಪರಿಶೀಲನೆ ಮಾಡಲು ತಿಳಿಸಿದ್ದಾರೆ.

ಆರೋಗ್ಯ ಸಿಬ್ಬಂದಿ ವಿದ್ಯಾರ್ಥಿನಿಯ ತಂದೆಗೆ ಕರೆ ಮಾಡಿ, ಬೇರೆಯವರ ವರದಿ ಅದಾಗಿದ್ದು ವಿಷಯವನ್ನು ಯಾರಿಗೂ ತಿಳಿಸದಂತೆ ಹೇಳಿದರೆನ್ನಲಾಗಿದೆ. ಆದರೂ, ಆರೋಗ್ಯ ಸಿಬ್ಬಂದಿಯ ಎಡವಟ್ಟು ಶನಿವಾರ ಸಂಜೆ ಬಹಿರಂಗಗೊಂಡಿದೆ.

### ವರದಿ ಯಾರದ್ದು?...

**ಬೇಜವಾಬ್ದಾರಿಯಿಂದ ವಿದ್ಯಾರ್ಥಿನಿಯ ಭವಿಷ್ಯದ ಜೊತೆ ಚೆಲ್ಲಾಟ ಆಡಿರುವ ಬಗ್ಗೆ ಪೋಷಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

**ಇಷ್ಟೆಲ್ಲ ಆದರೂ ಈ ಪ್ರಕರಣದ ಬಗ್ಗೆ ತಮಗೆ ಮಾಹಿತಿ ಇಲ್ಲ, ಮಾಹಿತಿ ಬಂದ ನಂತರ ಪ್ರತಿಕ್ರಿಯಿಸುವುದಾಗಿ ತಾಲೂಕು ಸರಕಾರಿ ಆರೋಗ್ಯ ಆಸ್ಪತ್ರೆಯ ವೈದ್ಯಾಧಿಕಾರಿ ಡಾ ಎಚ್.ಎಫ್.ಇಂಗಳೆ ತಿಳಿಸಿದ್ದಾರೆ.**

## ಮಿನಿ ನ್ಯೂಸ್

### ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್ ವಿಧಿವಶ

**ಕೊಂಕಣವಾಹಿನಿ ನ್ಯೂಸ್**

**ಬೆಂಗಳೂರು:** ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್ ಶನಿವಾರ ತಡರಾತ್ರಿ ಹೃದಯಾಘಾತದಿಂದ ವಿಧಿವಶರಾಗಿದ್ದಾರೆ. ಬೆಂಗಳೂರಿನ ಕಾಮಾಕ್ಷಿಪಾಳ್ಯದ ನಿವಾಸದಲ್ಲಿ ರವಿವಾರ ಮಧ್ಯಾಹ್ನ 12 ಗಂಟೆವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಧ್ಯಾಹ್ನ 3 ಗಂಟೆಗೆ ನೆಲಮಂಗಲದ ತೋಟದಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ.



ನಿವೃತ್ತ ನ್ಯಾ.ಮಂಜುನಾಥ್ ಗಡಿ ಸಂರಕ್ಷಣಾ ಆಯೋಗದ ಅಧ್ಯಕ್ಷರಾಗಿದ್ದರು. ಇವರು 1974ರಲ್ಲಿ ವಕೀಲರಾಗಿ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಅಭ್ಯಾಸ ಮಾಡಿದ್ದರು. ಬಳಿಕ 2000 ಇಸವಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಾಧೀಶರಾಗಿ ನೇಮಕಗೊಂಡರು. 2001ರಲ್ಲಿ ಖಾಯಂ ನ್ಯಾಯಾಧೀಶರಾಗಿ ನೇಮಕಗೊಂಡಿದ್ದರು. ತಡರಾತ್ರಿ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್ ರಾಜ್ಯ ಗಡಿ ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದ ಸಂಬಂಧ ಸಲಹೆ ನೀಡುವ ಸಲುವಾಗಿ ಸರ್ಕಾರ ಈ ಆಯೋಗವನ್ನು ರಚನೆಮಾಡಿತ್ತು. ಆಯೋಗದ ಹಿಂದಿನ ಅಧ್ಯಕ್ಷ ಎಸ್. ರಾಜೇಂದ್ರ ಬಾಬು 2017ರ ನವೆಂಬರ್‌ನಲ್ಲಿ ರಾಜೀನಾಮೆ ಸಲ್ಲಿಸಿದ್ದರು. ಆ ಸ್ಥಾನಕ್ಕೆ ಮಂಜುನಾಥ್ ಅವರನ್ನು ನೇಮಕ ಮಾಡಿತ್ತು.

ನ್ಯಾಯಮೂರ್ತಿ ಕೆ ಎಲ್. ಮಂಜುನಾಥ್ ನಿಧನಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಸಂತಾಪ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾಗಿದ್ದ ಮಂಜುನಾಥ್ ಅವರು ಅತ್ಯುತ್ತಮ ವಕೀಲರಾಗಿ, ವಕೀಲರ ಸಂಘದ ಅಧ್ಯಕ್ಷರಾಗಿ, ಹೈಕೋರ್ಟ್ ನ್ಯಾಯಾಧೀಶರಾಗಿ, ಕರ್ನಾಟಕ ನದಿ ನೀರು ಮತ್ತು ಗಡಿ ವಿವಾದ ಪ್ರಾಧಿಕಾರದ ಅಧ್ಯಕ್ಷರಾಗಿ, ಆಂಧ್ರ ಪ್ರದೇಶದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ. ಅವರ ಕುಟುಂಬದವರು ಹಾಗೂ ಹಿತೈಷಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಮುಖ್ಯಮಂತ್ರಿಗಳು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

### ಚುನಾವಣೆಗೆ ಮುಂಚಿತವಾಗಿ ನಿಷ್ಠೆಯ ಪ್ರತಿಜ್ಞೆ ಸ್ವೀಕರಿಸಿದ ಗೋವಾ ಕಾಂಗ್ರೆಸ್ ಅಭ್ಯರ್ಥಿಗಳು

**ಪಣಜಿ:** ಚುನಾಯಿತ ಪ್ರತಿನಿಧಿಗಳು ಪಕ್ಷ ಬದಲಾಯಿಸುವ ಪರಿಪಾಠ ಮುಂದುವರಿಸದಂತೆ ಖಚಿತಪಡಿಸಿಕೊಳ್ಳಲು ಗೋವಾದಲ್ಲಿ ಕಾಂಗ್ರೆಸ್ ಪಕ್ಷವು ಎಲ್ಲಾ ರೀತಿಯ ಕಸರತ್ತು ಮಾಡುತ್ತಿದೆ. ಗೋವಾದಲ್ಲಿ ಫೆಬ್ರವರಿ 14 ರ ವಿಧಾನಸಭಾ ಚುನಾವಣೆಗೆ ಕೆಲವೇ ವಾರಗಳ ಮೊದಲು, ಕಾಂಗ್ರೆಸ್ ಅಭ್ಯರ್ಥಿಗಳು ವಿವಿಧ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ, ಜನರು ಮತ್ತು ಪಕ್ಷಕ್ಕೆ "ನಿಷ್ಠರಾಗಿರುವುದಾಗಿ" ಪ್ರತಿಜ್ಞೆ ಮಾಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಳೆದ ಚುನಾವಣೆಯಿಂದ 17 ಶಾಸಕರ ಪೈಕಿ 15 ಶಾಸಕರು ಇತರ ಪಕ್ಷಗಳಿಗೆ ಪಕ್ಷಾಂತರಗೊಂಡಿರುವುದನ್ನು ಕಾಂಗ್ರೆಸ್ ಕಂಡಿದ್ದರಿಂದ ಈ ಕ್ರಮಗಳು ಬಂದಿವೆ. ಸದನದಲ್ಲಿ ಕಾಂಗ್ರೆಸ್‌ನ ಪ್ರಸ್ತುತ ಸಂಖ್ಯಾಬಲ ಎರಡು, ಆದರೆ ಬಿಜೆಪಿಯ 27 ಇದೆ. ಶನಿವಾರ ಪಕ್ಷವು ಟ್ವಿಟರ್‌ನಲ್ಲಿ ಹಂಚಿಕೊಂಡ ಫೋಟೋಗಳು ಮತ್ತು ವಿಡಿಯೊಗಳಲ್ಲಿ, ಗೋವಾದಾದ್ಯಂತ ಕಾಂಗ್ರೆಸ್ ಅಭ್ಯರ್ಥಿಗಳು ಮಹಾಲಕ್ಷ್ಮಿ ದೇವಸ್ಥಾನ, ಬಾಂಬೋಲಿಮ್ ಕ್ರಾಸ್ ಮತ್ತು ಹಮ್ಜಾ ಷಾ ದರ್ಗಾಕ್ಕೆ ಭೇಟಿ ನೀಡುತ್ತಿರುವುದು ಕಂಡುಬಂದಿದೆ. ಪಣಜಿಯ ಮಹಾಲಕ್ಷ್ಮಿ ದೇವಸ್ಥಾನ ಮತ್ತು ಕೊಂಕಣಿಯ ಬಾಂಬೋಲಿಮ್ ಕ್ರಾಸ್‌ನಲ್ಲಿ ಅರ್ಚಕರು ಚುನಾವಣೆಯಲ್ಲಿ ಗೆದ್ದ ನಂತರ ಕನಿಷ್ಠ ಐದು ವರ್ಷಗಳ ಕಾಲ ಕಾಂಗ್ರೆಸ್‌ನಲ್ಲಿ ಇರುವುದಾಗಿ ಪ್ರತಿಜ್ಞೆ ಮಾಡಿದ ಅಭ್ಯರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಅಭ್ಯರ್ಥಿಗಳು ನಂತರ ಬೇಟಿಮ್‌ನ ಮಸೀದಿಯಲ್ಲಿ 'ಚಾದರ್' ಅರ್ಪಿಸಿದರು.

ಕಾಂಗ್ರೆಸ್ ಹಿರಿಯ ನೇತಾರ ಪಿ ಚಿದಂಬರಂ, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಗೋವಾ ಉಸ್ತುವಾರಿ ದಿನೇಶ್ ಗುಂಡೂರಾವ್, ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿಯ ಮುಖ್ಯಸ್ಥ ಗಿರೀಶ್ ಚೋಡಂಕರ್ ಸೇರಿದಂತೆ ಹಿರಿಯ ನಾಯಕರು 34 ಅಭ್ಯರ್ಥಿಗಳೊಂದಿಗೆ ಪೂಜಾ ಸ್ಥಳಗಳಿಗೆ ತೆರಳಿದ್ದರು . ಜನರ ಮನಸ್ಸಿನಲ್ಲಿ ನಂಬಿಕೆಯನ್ನು ಮೂಡಿಸುವ ಸಲುವಾಗಿ, ಅಭ್ಯರ್ಥಿಗಳು ದೇವರ ಮುಂದೆ ಪ್ರಮಾಣ ಮಾಡುವ ಕ್ರಮ ಕೈಗೊಳ್ಳಲಾಯಿತು ಚೋಡಂಕರ್ ಹೇಳಿದರು.

### ಸುಪ್ರೀಂ ಮೆಟ್ಟಿಲೇರಿದ ಹಿಂದೂ ಸಂಘಟನೆ, ಮುಸ್ಲಿಂ ನಾಯಕರ ಬಂಧನಕ್ಕೆ ಆಗ್ರಹ!

**ನವದೆಹಲಿ:** ಮುಸ್ಲಿಂ ನಾಯಕರು ಹಿಂದೂಗಳ ವಿರುದ್ಧ ಅವಹೇಳನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಸಮಾನ ರಕ್ಷಣೆಗೆ ಆಗ್ರಹಿಸಿ ಹಿಂದೂ ಸಂಘಟನೆಯೊಂದು ನ್ಯಾಯಾಲಯದ ಬಾಗಿಲು ತಟ್ಟಿದೆ. ಹಿಂದೂ ಫ್ರಂಟ್ ಫಾರ್ ಜಸ್ಟಿಸ್ ದ್ವೇಷದ ಭಾಷಣಗಳ ಪಟ್ಟಿಯನ್ನು ಸಿದ್ಧಪಡಿಸಿದೆ ಎಂದು ಹೇಳಲಾಗುತ್ತಿದೆ. ನ್ಯಾಯವಾದಿ ವಿಷ್ಣು ಶಂಕರ್ ಜೈನ್ ಅವರು ಸಲ್ಲಿಸಿದ ಅರ್ಜಿಯಲ್ಲಿ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಸಮಾನವಾಗಿ ಕಾನೂನಿನ ರಕ್ಷಣೆಗೆ ಅರ್ಹರಾಗಿದ್ದಾರೆ ಮತ್ತು ಆದ್ದರಿಂದ ದ್ವೇಷ ಭಾಷಣದ ಘಟನೆಗಳನ್ನು ವಿಶ್ಲೇಷಿಸುವಾಗ ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಪರಿಕಲ್ಪನೆಯನ್ನು ಪರಿಚಯಿಸಬಾರದು ಎಂದು ಹೇಳಿದ್ದಾರೆ.

ವಿಷ್ಣು ಶಂಕರ್ ಜೈನ್ ಅವರು, ಆತ್ಮರಕ್ಷಣೆಯ ವಿಷಯದೊಂದಿಗೆ ನಿರ್ದಿಷ್ಟ ಸಮುದಾಯದ ಸದಸ್ಯರನ್ನು ರಕ್ಷಿಸಲು ಉದ್ದೇಶಿಸಿರುವ ಭಾಷಣವು ದ್ವೇಷ ಭಾಷಣದ ವ್ಯಾಪ್ತಿಗೆ ಬರುವುದಿಲ್ಲ. ಸಮಾಜದಲ್ಲಿ ಗಲಭೆ ಸೃಷ್ಟಿಸುವ, ಹಿಂಸಾಚಾರ ಮತ್ತು ಕೋಮು ಉದ್ವಿಗ್ನತೆಯನ್ನು ಪ್ರಚೋದಿಸುವ ಉದ್ದೇಶದಿಂದ ವ್ಯಕ್ತಿಗಳು ದ್ವೇಷಪೂರಿತ ಭಾಷಣಗಳನ್ನು ಮಾಡುತ್ತಾರೆ ಎಂದು ಸಂಸ್ಥೆ ಮತ್ತು ಅದರ ಇಬ್ಬರು ಸದಸ್ಯರು ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಲಾಗಿದೆ.

ಹಿಂದೂ ಫ್ರಂಟ್ ಫಾರ್ ಜಸ್ಟಿಸ್ ತನ್ನ ಅಧ್ಯಕ್ಷ ಮತ್ತು ಇತರರ ಮೂಲಕ ಅರ್ಜಿಯನ್ನು ಸಲ್ಲಿಸಿದೆ. ಪ್ರಸ್ತುತ ಅರ್ಜಿಯ ಮೂಲಕ ಅರ್ಜಿದಾರರು ಹಿಂದೂ ಸಮುದಾಯದ ಸದಸ್ಯರು, ಅವರ ದೇವತೆಗಳ ವಿರುದ್ಧ ಮಾಡಿದ ದ್ವೇಷ ಭಾಷಣಗಳ ತನಿಖೆಗೆ ಎಸ್‌ಐಟಿಗೆ ನಿರ್ದೇಶಿಸುವಂತೆ ಈ ನ್ಯಾಯಾಲಯವನ್ನು ಪ್ರಾರ್ಥಿಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಮುಸ್ಲಿಂ ಸಮುದಾಯದ ಕೆಲವು ಮುಖಂಡರು ಮತ್ತು ಬೋಧಕರು ಹಿಂದೂ ಧರ್ಮದ ವಿರುದ್ಧ ಮತ್ತು ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯ ವಿರುದ್ಧ ಪ್ರಚಾರ ಮಾಡುತ್ತಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.






# ಸಿನಿಮಾ ವಾಹಿನಿ

## ವಾಗೀಶ್ ಆರ್ ಕಟ್ಟಿ ನಿರ್ದೇಶನದಲ್ಲಿ ಕರ್ನಾಟಕದ ಜಲಿಯನ್ ವಾಲಾಬಾಗ್ ಕಿರುಚಿತ್ರ



ಪ್ರತಿಭಾವಂತರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಉತ್ತಮ ವೇದಿಕೆ ಕಿರುಚಿತ್ರ. ಎಷ್ಟೋ ಕಿರುಚಿತ್ರಗಳಲ್ಲಿ ದೊಡ್ಡ ವಿಷಯಗಳನ್ನು ಹೇಳಬಹುದು. ಅಂತಹ ಒಂದು ಪ್ರಯತ್ನ ಮಾಡಿದ್ದಾರೆ ವಾಗೀಶ್ ಆರ್ ಕಟ್ಟಿ.

ನಾನು ಮೂಲತಃ ಸಾಫ್ಟ್‌ವೇರ್ ಇಂಜಿನಿಯರ್. ನನ್ನೂರು ಗೌರಿಬಿದನೂರು. ನಮ್ಮೂರಿನ ಬಳಿ ವಿದುರಾಶ್ವಥ ಎಂಬ ಪುರಾಣ ಪ್ರಸಿದ್ದವಾದ ಹಳ್ಳಿಯಿದೆ. ಇದು ಪುರಾಣ ಪ್ರಸಿದ್ಧವೂ ಹೌದು. ಇತಿಹಾಸ ಪ್ರಸಿದ್ದವೂ ಹೌದು.ಏಕೆಂದರೆ 1938ರಲ್ಲಿ ಈ ಊರಿನಲ್ಲಿ ಸ್ವತಂತ್ರಕ್ಕಾಗಿ ಸುಮಾರು ನಲವತ್ತಕ್ಕೂ ಅಧಿಕ ಮಂದಿ ಪ್ರಾಣ ತ್ಯಾಗ ಮಾಡಿದ್ದಾರೆ. ಇದನ್ನು "ಸೌತ್ ಇಂಡಿಯಾ ಜಲಿಯನ್ ವಾಲಾಬಾಗ್" ಎನ್ನಬಹುದು. ಈ ವಿಷಯದ ಬಗ್ಗೆ ಮೂವತ್ತೈದು ನಿಮಿಷಗಳ ಕಿರುಚಿತ್ರ ಮಾಡಿದ್ದೇನೆ. ನಾನು ಈ ವಿಷಯವನ್ನು ನಮ್ಮೂರಿ ಪುಟ್ಟಸ್ವಾಮಿ ಗೌಡರ ಮುಂದೆ ಹೇಳಿದಾಗ , ಒಳ್ಳೆಯ ಪ್ರಯತ್ನ ಮಾಡು. ಈ ವಿಷಯ ವಿಶ್ವದಾದ್ಯಂತ ತಿಳಿಯಲಿ. ನಾನು ನಿರ್ಮಾಣ ಮಾಡುತ್ತೇನೆ ಎಂದರು.ಹಿರಿಯ ನಟರಾದ ಶ್ರೀನಿವಾಸಮೂರ್ತಿ ಹಾಗೂ ಶೋಭ್ ರಾಜ್ ಅವರನ್ನು ಬಿಟ್ಟು ಬೇರೆ ಎಲ್ಲಾ ಹೊಸಬರೆ. ಸುಮಾರು ನೂರು ಜನ ಹೊಸ ಕಲಾವಿದರು ಇದರಲ್ಲಿ ಅಭಿನಯಿಸಿದ್ದಾರೆ. ಎಲ್ಲರು ತರಭೇತಿ ಪಡೆದು ಆನಂತರ ಅಭಿನಯಿಸಿದ್ದಾರೆ. ಇದೇ ಗಣರಾಜ್ಯೋತ್ಸವದ ದಿನ ಸಂಜೆ 6 ಗಂಟೆಗೆ ನಮ್ಮದೇ ಯೂಟ್ಯೂಬ್ ಚಾನಲ್ ನಲ್ಲಿ ಬಿಡುಗಡೆ ಮಾಡುತ್ತೇವೆ ಎಂದರು ವಾಗೀಶ್ ಆರ್ ಕಟ್ಟಿ.

ನಮ್ಮೂರಿನ ಸ್ವತಂತ್ರ ಸಂಗ್ರಾಮದ ವಿಷಯ ಎಲ್ಲರಿಗೂ ತಿಳಿಸುವ ಪ್ರಯತ್ನಕ್ಕೆ ಬೆಂಬಲ ನೀಡಿದ್ದೀನಿ.ಕಿರುಚಿತ್ರ ಚೆನ್ನಾಗಿ ಮೂಡಿಬಂದಿದೆ. ಬಂದಿರುವ ಎಲ್ಲಾ ಗಣ್ಯರಿಗೆ ಧನ್ಯವಾದ ಎಂದರು ನಿರ್ಮಾಪಕ ಪುಟ್ಟಸ್ವಾಮಿ ಗೌಡ. ಇಂತಹ ಕಿರುಚಿತ್ರದಲ್ಲಿ ಅಭಿನಯಿಸಿದ್ದು ಸಂತಸ ತಂದಿದೆ. ವಾಗೀಶ್ ಚೆನ್ನಾಗಿ ನಿರ್ದೇಶನ ಮಾಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಅಭಿನಯಿಸಿರುವ ಎಲ್ಲಾ ಹೊಸ ಕಲಾವಿದರ ಕನ್ನಡ ಉಚ್ಚಾರಣೆ ಚೆನ್ನಾಗಿದೆ ಎಂದರು ಹಿರಿಯ ನಟ ಶ್ರೀನಿವಾಸಮೂರ್ತಿ.

## ಇನ್‌ಸ್ಟಂಟ್ ಕರ್ಮ ಫಸ್ಟ್ ಲುಕ್ ಪೋಸ್ಟರ್ ಜನವರಿ 28 ಥಿಯೇಟರಿಗೆ!

ಯಶ್ ಶೆಟ್ಟಿ, ಸಲಗ ಖ್ಯಾತಿಯ ಕೆಂಡ ಶ್ರೇಷ್ಠ ಮತ್ತು ಅಂಜನ್ ದೇವ್, ಪ್ರಜ್ವಲ್ ಶೆಟ್ಟಿ, ಹರಿ ಮುಖ್ಯಭೂಮಿಕೆಯಲ್ಲಿರುವ ಇನ್‌ಸ್ಟಂಟ್ ಕರ್ಮ ಸಿನಿಮಾವನ್ನು ಈ ಹಿಂದೆ ಡಿಕೆ ಬೋಸ್ ನಿರ್ದೇಶಿಸಿದ್ದ ಸಂದೀಪ್ ಮಹಾಂತೇಶ್ ನಿರ್ದೇಶಿಸಿದ್ದಾರೆ. ಚಿತ್ರವು ಸಂಪೂರ್ಣವಾಗಿ ಸಿದ್ಧವಾಗಿದೆ ಮತ್ತು ಇದನ್ನು ಒಚಿಡಿಛಿ 2022 ರಲ್ಲಿ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಯೋಜಿಸುತ್ತಿದೆ

ಬ್ರೇಕ್ ಫ್ರೀ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಸಂತೋಷ್ ಮಹಾಂತೇಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ ಈ ಚಲನಚಿತ್ರವು ಗ್ಯಾಂಗ್‌ಸ್ಟರ್ ಕ್ರೈಮ್ ಥ್ರಿಲ್ಲರ್ ಆಗಿದ್ದು, ಪ್ರತಿಯೊಬ್ಬ ಮನುಷ್ಯನು ಸಂಬಂಧಿಸಬಹುದಾದ ಭಾವನೆಯನ್ನು ಹೊಂದಿದೆ. ಭಾಸ್ಕರ್ ರೆಡ್ಡಿ ಛಾಯಾಗ್ರಹಣ, ಸಂಕಲನ ಸುರೇಶ್ ಆರ್ಮುಗಂ, ಸಂಗೀತ ನಿರ್ದೇಶಕ ಸೂರಜ್ ಜೋಯಿಸ್ ಫಸ್ಟ್ ಲುಕ್ ಪೋಸ್ಟರ್ ಜನವರಿ 28 2022 ರಂದು ಬಿಡುಗಡೆಯಾಗಲಿದೆ, ಮುಂದಿನ ದಿನಗಳಲ್ಲಿ ಪ್ರಮೋಷನಲ್ ಹಾಡು, ಪೋಸ್ಟರ್‌ಗಳು, ಟ್ರೈಲರ್ ಬಿಡುಗಡೆ ಮಾಡಲಾಗುತ್ತದೆ. ಒಳ್ಳೆ ಕಥೆ, ಹೊಸ ಶೈಲಿಯ ನಿರೂಪಣೆ, ನಟರ ಅದ್ಬುತ ಅಭಿನಯದಿಂದ ಸಿನಿಮಾದ ಬಗ್ಗೆ ಚಿತ್ರತಂಡ ವಿಶ್ವಾಸ ವ್ಯಕ್ತಪಡಿಸಿದೆ. ಚಲನಚಿತ್ರವನ್ನು ಚಿತ್ರರಂಗದ ಕೆಲವು ಪರಿಚಿತ ವ್ಯಕ್ತಿಗಳಿಗೆ ತೋರಿಸಲಾಗಿದೆ ಮತ್ತು ಅವರ ಸಲಹೆಯಂತೆ ಚಿತ್ರತಂಡವು ನೇರವಾಗಿ ಔಖಿಖಿ ನಲ್ಲಿ ಬಿಡುಗಡೆ ಮಾಡದೆ ಥಿಯೇಟರ್ನಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದೆ.



ಮಾಧ್ಯಮ ಮಿತ್ರರು ಯಾವಾಗಲೂ ಒಳ್ಳೆಯ ಸಿನಿಮಾಗಳನ್ನು ಬೆಂಬಲಿಸಿ ಯಶಸ್ವಿಗೊಳಿಸಿದ್ದಾರೆ, ಸಿನಿಮಾವನ್ನು ಮಾಧ್ಯಮ ಮಿತ್ರರಿಗೆ ತೋರಿಸಲು ಚಿತ್ರತಂಡ ಉತ್ಸುಕವಾಗಿದೆ ಮತ್ತು ಸಿನಿಮಾ ಮಾಡಿದ ಉದ್ದೇಶ ಮತ್ತು ಪ್ರಯತ್ನವನ್ನು ನೀವು ಮೆಚ್ಚುವಿರಿ ಎಂಬ ವಿಶ್ವಾಸವಿದೆ.



ಆಯುಕ್ತ ಚಿತ್ರದಲ್ಲಿ ಅಮೃತಾ

## ನಿಧಿಯ ಹುಡುಕಾಟದ ಸುತ್ತ ತೆರೆದುಕೊಳ್ಳುವ 'ನಾಚಿ'



ಸಚಿತ್ ಫಿಲಂಸ್ ಲಾಂಛನದಲ್ಲಿ ವೆಂಕಟ ಗೌಡ ಮತ್ತು ಮೀನಾ ವೆಂಕಟ್ ಗೌಡ ನಿರ್ಮಾಣ, ಶಶಾಂಕ್ ರಾಜ್ ನಿರ್ದೇಶನದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರ ನಾಚಿ.

ಗೂಳಿಹಟ್ಟಿ, ಹಾಲು ತುಪ್ಪ ಮತ್ತು ಉಡುಂಬಾ ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದವರು ಪವನ್ ಶೌರ್ಯ. ಈಗ ನಾಚಿ ಚಿತ್ರದಲ್ಲಿಯೂ ನಾಯಕನಟನಾಗಿ ನಟಿಸುತ್ತಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಗರಡಿಯಲ್ಲಿ ಕೆಲಸ ಕಲಿತು, ನಂತರ ಯುಗಯುಗಗಳೇ ಸಾಗಲಿ, ಉಡ, ಮಾವಳ್ಳಿ ಮಿಲ್ಟಿ ಹೋಟೆಲ್, ಗೂಳಿಹಟ್ಟಿ, ಹನಿ ಹನಿ ಇಬ್ಬನಿ, ಹಾಲುತುಪ್ಪ ಮುಂತಾದ ಸಿನಿಮಾಗಳನ್ನು ನಿರ್ದೇಶಿಸಿರುವ ಶಶಾಂಕ್ ರಾಜ್ 'ನಾಚಿ' ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.

ಎಲ್ಲ ಅಂದುಕೊಂಡಂತೇ ಆಗಿದ್ದಿದ್ದರೆ ಅಕ್ಟೋಬರ್ 29ರಂದು ಅದ್ದೂರಿ ಮುಹೂರ್ತ ನಡೆಸಿ ಚಿತ್ರೀಕರಣಕ್ಕೆ ತೆರಳುವ ಯೋಜನೆ ಚಿತ್ರತಂಡದ್ದಾಗಿತ್ತು. ಪುನೀತ್ ರಾಜ್ ಕುಮಾರ್ ಅವರ ಅಗಲಿಕೆಯ ಕಾರಣಕ್ಕೆ ಅದು ಸಾಧ್ಯವಾಗಲಿಲ್ಲ. ಸರಳವಾಗಿ ಪೂಜೆ ನೆರವೇರಿಸಿಕೊಂಡು ಚಿತ್ರೀಕರಣ ಆರಂಭಿಸಲಾಗಿತ್ತು. ಸದ್ಯ ನಾಚಿ ಚಿತ್ರ ಸರಿಸುಮಾರು ಮೂವತ್ತೈದು ದಿನಗಳ ಚಿತ್ರೀಕರಣ ನಡೆಸಿದೆ. ಇನ್ನೂ ಇಪ್ಪತ್ತೈದು ದಿನಗಳ ಶೂಟಿಂಗ್ ಬಾಕಿ ಇದೆ. ಈ ಮಧ್ಯೆ ಮಲ್ಲೇಶ್ವರಂನ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಸಾಂಕೇತಿಕ ಮುಹೂರ್ತ ಕಾರ್ಯಕ್ರಮ ನಡೆಸುವ ಮೂಲಕ ಮತ್ತೊಮ್ಮೆ ಚಿತ್ರಕ್ಕೆ ಚಾಲನೆ ನೀಡಲಾಗಿದೆ.

ತಾತ ಮೊಮ್ಮಗಳ ಸುತ್ತ ಪ್ರಧಾನವಾಗಿ ಬೆಸೆದುಕೊಂಡ ಕತೆ 'ನಾಚಿ' ಚಿತ್ರದ್ದು. ನಚಿತಾ ಎನ್ನುವುದು ಆಕೆಯ ಹೆಸರು. ಎಲ್ಲರೂ ಪ್ರೀತಿಯಿಂದ 'ನಾಚಿ' ಎಂದು ಕರೆಯುತ್ತಿರುತ್ತಾರೆ. ಪುರಾತತ್ವ ವಿಭಾಗದ ಅಂತಿಮ ವರ್ಷದಲ್ಲಿ ಓದುತ್ತಿರುತ್ತಾಳೆ. ಅದೊಮ್ಮೆ ಮಲೆನಾಡಿನ ಪ್ರದೇಶವೊಂದರಲ್ಲಿ ಪ್ರಾಚ್ಯವಸ್ತುಗಳ ಸಂಶೋಧನೆಗೆಂದು ಹೋದಾಗ ಅದು ತನ್ನದೇ ಪೂರ್ವಜರ ಮನೆ ಎಂದು ಗೊತ್ತಾಗುತ್ತದೆ. ಇದರ ಜೊತೆ ನಿಧಿಯ ಕತೆ ಕೂಡಾ ತೆರೆದುಕೊಳ್ಳುತ್ತದೆ. ಇತಿಹಾಸ, ವಿಜ್ಞಾನ, ಲವ್, ಕಾಮಿಡಿ, ಥ್ರಿಲ್ಲರ್, ಹಾರರ್ ಅಂಶಗಳೊಂದಿಗೆ ಆಕ್ಷನ್ ಕೂಡಾ ಕತೆಯಲ್ಲಿ ಬೆಸೆದುಕೊಂಡಿದೆ. ಅಂತಿಮವಾಗಿ ಸೈನ್ಸ್ ಬಿಯಾಂಡ್ ಸೆನ್ಸ್‌ಎನ್ನುವ ಸಿದ್ದಾಂತವನ್ನು ಮಂಡಿಸುವ ಉದ್ದೇಶ 'ನಾಚಿ' ಚಿತ್ರದ್ದು.

ಮಲೆನಾಡಿನ ಸುಂದರ ತಾಣಗಳಲ್ಲಿ 'ನಾಚಿ'ಗಾಗಿ ಚಿತ್ರೀಕರಣ ನಡೆಸಲಾಗಿದೆ. ಯಕ್ಷಗಾನ, ಭೂತಕೋಲಾಗಳ ದೃಶ್ಯಗಳನ್ನು ನೈಜವಾಗಿ ಸೆರೆ ಹಿಡಿಯಲಾಗಿದೆ. ನಾಲ್ಕು ಫೈಟ್, ಮೂರು ಹಾಡು, ಒಂದು ಬಿಟ್ ಸಾಂಗ್ ಕೂಡಾ 'ನಾಚಿ' ಚಿತ್ರದಲ್ಲಿರಲಿದೆ.

ತೆಲುಗಿನಲ್ಲಿ ಸುಮಾ ಹದಿನೈದು ಚಿತ್ರಗಳಲ್ಲಿ ನಟಿಸಿರುವ ಕನ್ನಡದ ಹುಡುಗಿ ಮೌರ್ಯಾನಿ. ಕನ್ನಡ ಸಿನಿಮಾದಲ್ಲಿ ನಟಿಸುವ ಬಯಕೆಯಿಂದ ಕಳೆದ ನಾಲ್ಕು ವರ್ಷಗಳಿಂದ ಹಲವಾರು ಕತೆಗಳನ್ನು ಕೇಳಿದ್ದರಂತೆ. ಕಡೆಗೆ ಶಶಾಂಕರ್ ರಾಜ್ ಅವರು ಹೇಳಿದ ಸಬ್ಜೆಕ್ಟ್ ಇಷ್ಟವಾದ ಕಾರಣಕ್ಕೆ ನಟಿಸಲು ಒಪ್ಪಿದ್ದಾಗಿ ಮೌರ್ಯಾನಿ ಹೇಳಿಕೊಂಡರು.

ಪವನ್ ಶೌರ್ಯ ಮತ್ತು ಮಾರ್ಯಾನಿ ಅವರ ಜೊತೆಗೆ ಆರ್ಯಭಟ ಜಾಗ್ವಾರ್, ಕ್ರಿಷ್, ಪ್ರಿಯಾ ಶೆಟ್ಟಿ, ಶ್ರೇಯಾ ಶೆಟ್ಟಿ, ನೀನಾಸಂ ನಂಜಪ್ಪ, ಖಳನಟನಾಗಿ ಪ್ರಶಾಂತ್, ಮನೀಶ್ ಸೇರಿದಂತೆ ಇತರರು 'ನಾಚಿ' ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಹಿಂದೆ ರಂಗಭೂಮಿ, ಕಿರುತೆರೆಗಳಲ್ಲಿ ಸಾಕಷ್ಟು ದುಡಿದಿರುವ ಎಸ್.ಎಲ್. ಎನ್ ಸ್ವಾಮಿ ತಾತನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಸಚಿತ್ ಫಿಲಂಸ್ ಲಾಂಛನದಲ್ಲಿ ವೆಂಕಟ್ ಗೌಡ ನಿರ್ಮಿಸುತ್ತಿರುವ ಐದನೇ ಚಿತ್ರವಿದು.

## ಜನವರಿ 28 ರಂದು "ಒಂಭತ್ತನೇ ದಿಕ್ಕು" ರಾಜ್ಯಾದ್ಯಂತ ಬಿಡುಗಡೆ



ಕನ್ನಡ ಚಿತ್ರರಂಗಕ್ಕೆ ವಿಭಿನ್ನ ಚಿತ್ರಗಳನ್ನು ನೀಡಿರುವ ದಯಾಳ್ ಪದ್ಮನಾಭನ್ ನಿರ್ಮಿಸಿ, ನಿರ್ದೇಶಿಸಿರುವ "ಒಂಭತ್ತನೇ ದಿಕ್ಕು" ಚಿತ್ರ ಜನವರಿ 28ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ಲೂಸ್ ಮಾದ ಯೋಗಿ – ಅದಿತಿ ಪ್ರಭುದೇವ ನಾಯಕ – ನಾಯಕಿಯಾಗಿ ನಟಿಸಿರುವ ಈ ಚಿತ್ರದ ತಾರಾಬಳಗದಲ್ಲಿ ಸಾಯಿಕುಮಾರ್, ಹಿರಿಯನಟ ಅಶೋಕ್, ಸುಂದರ್, ಸಂಪತ್ ಕುಮಾರ್, ರಮೇಶ್ ಭಟ್, ಶೃತಿ ನಾಯಕ್, ಪ್ರಶಾಂತ್ ಸಿದ್ದಿ, ಮುನಿ ಮುಂತಾದವರಿದ್ದಾರೆ. ಅವಿನಾಶ್ ಯು ಶೆಟ್ಟಿ ಈ ಚಿತ್ರದ ಎಕ್ಸಿಕ್ಯುಟಿವ್ ಪ್ರೊಡ್ಯೂಸರ್ ಹಾಗೂ ಗುರು ದೇಶಪಾಂಡೆ "ಒಂಭತ್ತನೇ ದಿಕ್ಕು" ಚಿತ್ರದ ಬ್ಯುಸಿನೆಸ್ ಅಸೋಸಿಯೇಟ್. ಮಣಿಕಾಂತ್ ಕದ್ರಿ ಸಂಗೀತ ನೀಡಿರುವ ಈ ಚಿತ್ರಕ್ಕೆ ರಾಕೇಶ್ ಛಾಯಾಗ್ರಹಣ, ಪ್ರೀತಿ ಮೋಹನ್ ಸಂಕಲನವಿದೆ.

## ಪ್ರಣಯರಾಜನ ಕನಸಿನ ಕೂಸು ಆರ್ಟ್ ಎನ್ ಯು ಚಾಲನೆ



ತಮ್ಮ ಅಮೋಘ ಅಭಿನಯದ ಮೂಲಕ ಜನಮನಸೂರೆಗೊಂಡಿರುವ, ಕಳೆದ 54 ವರ್ಷಗಳಿಂದ ಕನ್ನಡ ಕಲಾದೇವಿಗೆ ಸೇವೆ ಸಲ್ಲಿಸುತ್ತಾ ಬಂದಿರುವ ಪ್ರಣಯರಾಜ ಶ್ರೀನಾಥ್ ಅವರ ಕನಸಿನ ಕೂಸು "ಆರ್ಟ್ ಎನ್ ಯು".

ಈ ಸಂಸ್ಥೆಯ ಉದ್ಘಾಟನಾ ಸಮಾರಂಭ ಇತ್ತೀಚೆಗೆ ನಡೆಯಿತು. ಖ್ಯಾತ ನಟ ಉಪೇಂದ್ರ ಈ ಸಂಸ್ಥೆಯನ್ನು ಉದ್ಘಾಟಿಸಬೇಕಿತ್ತು. ಆದರೆ ಅನಿವಾರ್ಯ ಕಾರಣದಿಂದ ನಾನು ಬರಲಿಕ್ಕೆ ಆಗುತ್ತಿಲ್ಲ. ಶ್ರೀನಾಥ್ ಸರ್ ಅವರ ಈ ಪ್ರಯತ್ನಕ್ಕೆ ಒಳ್ಳೆಯದಾಗಲಿ. ಸದಾ ನಾನು ಅವರೊಂದಿಗಿರುತ್ತೇನೆ ಎಂಬ ಧ್ವನಿ ಸಂದೇಶ ಕಳುಹಿಸಿ ಉಪೇಂದ್ರ ಶುಭ ಕೋರಿದರು. "ಆರ್ಟ್ ಎನ್ ಯು" ಸಂಸ್ಥೆಯಲ್ಲಿ ನಟನೆ, ನಿರ್ದೇಶನ, ಕಥೆ ಹಾಗೂ ಬರವಣಿಗೆ, ಸಿನಿಮಾ ತಯಾರಿಕೆ, ತಂತ್ರಜ್ಞಾನ, ಧ್ವನಿ ತರಭೇತಿ , ಪ್ರಸಾದನ ಹೀಗೆ ಸಿನಿಮಾಗೆ ಸಂಬಂಧಿಸಿದ ಎಲ್ಲಾ ಶಿಕ್ಷಣವನ್ನು ನುರಿತ ತಂತ್ರಜ್ಞರಿಂದ ನೀಡಲಾಗುತ್ತದೆ.

ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಅವರ ಸಂಸ್ಥೆಯಲ್ಲೇ ರಂಗಮೂಲ ತರಭೇತಿ ನೀಡುವ ಯೋಜನೆಯೂ ಇದೆ. ಶ್ರೀನಾಥ್ ಅವರ ಈ ಪ್ರಯತ್ನಕ್ಕೆ ಅವರ ಪತ್ನಿ ಗೀತಾ, ಮಗ ರೋಹಿತ್ ಹಾಗೂ ಸೊಸೆ ಮಂಗಳ ಅವರ ಪ್ರೋತ್ಸಾಹವಿದೆ.

ನಾನು ಚಿತ್ರರಂಗಕ್ಕೆ ಬಂದು 54 ವರ್ಷಗಳಾಯಿತು. ಸುಮಾರು ನಲವತ್ತರಿಂದ, ಐವತ್ತು ನಿರ್ದೇಶಕರ ಜೊತೆ ಕೆಲಸ ಮಾಡಿದ್ದೀನಿ. ನಾನು ಬಂದಾಗಿನ ಚಿತ್ರರಂಗವೇ ಬೇರೆ. ಈಗಲೇ ಬೇರೆ. ಆದರೆ ಕಲಿಕೆ ಮಾತ್ರ ನಿರಂತರ.ನನ್ನ ಗುರುಗಳಾದ ಪುಟ್ಟಣ್ಣ ಕಣಗಾಲ್ ಅವರೇ ಎಂದಿಗೂ ನನ್ನ ಗುರುಗಳು ಅವರಿಂದ ಕಲಿತದ್ದು ಸಾಕಷ್ಟು. ಆಗಿನ ಕಾಲ , ಈಗಿನ ಕಾಲ ಅನ್ನುವುದಕ್ಕಿಂತ ವರ್ತಮಾನಕ್ಕೆ ನಾವು ಹೊಂದಿಕೊಳ್ಳಬೇಕು.

ನಾನು ಈಗಲೂ ಕಲಿಯುತ್ತಿದ್ದೇನೆ. ಈವರೆಗೂ ನಾನು ಕಲಿತಿರುವುದನ್ನು ಮತ್ತೊಬ್ಬರಿಗೆ ಕಲಿಸುವ ಉದ್ದೇಶದಿಂದ ಈ "ಆರ್ಟ್ ಎನ್ ಯ" ಸಂಸ್ಥೆ ಆರಂಭಿಸುತ್ತಿದ್ದೇನೆ. ನಾನು ಕೂಡ ಇಲ್ಲಿ ನಟನಾಸಕ್ತರಿಗೆ ನಟನೆ ಬಗ್ಗೆ ಹೇಳಿ ಕೊಡಲಿದ್ದೇನೆ. ಇದ್ದಲ್ಲದೆ ಸಿನಿಮಾ ನಿರ್ಮಾಣಕ್ಕೆ ಬೇಕಾದ ಬೇರೆ ಬೇರೆ ವಿಷಯಗಳ ಬಗ್ಗೆ ಕೂಡ ತರಭೇತಿ ನೀಡಲಾಗುವುದು. ಈ ಕಾರ್ಯಕ್ಕೆ ನನ್ನ ಕುಟುಂಬ ನೀಡುತ್ತಿರುವ ಬೆಂಬಲ ಅಪಾರ. ನನ್ನ ಮಗ ರೋಹಿತ್ ಹಾಗೂ ಸೊಸೆ ಮಂಗಳ ಈ ಸಂಸ್ಥೆಯ ಉಸ್ತುವಾರಿ ಹೊತ್ತಿಕೊಂಡಿದ್ದಾರೆ. ಈ ಪ್ರಯತ್ನಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು ಪ್ರಣಯರಾಜ ಶ್ರೀನಾಥ್.

ನಟನೆ,ನಿರ್ದೇಶನ, ಸ್ಕ್ರೀನ್ ಪ್ಲೇ, ಫ್ಯಾಷನ್, ನಿರೂಪಣೆ ಸೇರಿದಂತೆ ಒಟ್ಟು ಏಳು ತರಗತಿಗಳು ಫೆಬ್ರವರಿಯಲ್ಲಿ ಆರಂಭವಾಗಲಿದೆ.ಆಯಾ ವಿಭಾಗದಲ್ಲಿ ಪರಿಣಿತಿ ಹೊಂದಿರುವವರನ್ನು ತರಭೇತಿ ನೀಡಲು ನೇಮಿಸಲಾಗಿದೆ. ನಮ್ಮ ಜೊತೆ ಇನ್ನೂ ಎರಡು ಸಂಸ್ಥೆಗಳು ಜೊತೆಗಿರಲಿದೆ.

## "ನಟ ಭಯಂಕರ"ನ ವಿಭಿನ್ನ ಪೋಸ್ಟರ್ ಮುಖ್ಯಮಂತ್ರಿಗಳಿಂದ ಬಿಡುಗಡೆ

ಪ್ರಥಮ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ "ನಟ ಭಯಂಕರ" ಚಿತ್ರದ ವಿಭಿನ್ನ ಪೋಸ್ಟರ್ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದ್ದಾರೆ. ಮುಖ್ಯಮಂತ್ರಿಗಳು "ನಟ ಭಯಂಕರ" ಸಿನಿಮಾ ನೋಡುತ್ತಾರಾ? ಪ್ರಥಮ್ ಹೇಳೋದೇನು..

ಮುಖ್ಯಮಂತ್ರಿಗಳು ಈಗಷ್ಟೇ ಕೊರೋನದಿಂದ ಚೇತರಿಸಿಕೊಂಡಿದ್ದಾರೆ. ಅವರ ಬಳಿ ಪೋಸ್ಟರ್ ಬಿಡುಗಡೆ ಮಾಡಿಸಬೇಕೆಂಬ ಹಂಬಲವಿತ್ತು. ಈ ಪ್ರಸ್ತುತ ಸನ್ನಿವೇಶದಲ್ಲ ಅವರ ಬಳಿ ತುಂಬಾ ಜನ ಹೋಗಲು ಅವಕಾಶವಿರಲಿಲ್ಲ.ಸೀಮಿತ ಜನರೊಂದಿಗೆ ಮಾತ್ರ ಹೋಗಿದ್ದೆವು. ಪೋಸ್ಟರ್ ನೋಡಿದ್ದ ತಕ್ಷಣ ಮುಖ್ಯಮಂತ್ರಿಗಳು ಒಂದು ಕ್ಷಣ ಹಾಗೆ ನಿಂತರು. ಪೋಸ್ಟರ್ ತುಂಬಾ ಚೆನ್ನಾಗಿದೆ. ನೀವು ಪ್ರಚಾರ ಮಾಡುವ ರೀತಿಯು ವಿಭಿನ್ನವಾಗಿದೆ ಎಂದು ಹೇಳಿ ಮನಸಾರೆ ಹಾರೈಸಿದರು.

ಅಲ್ಲಿದ್ದವರ ಬಾಯಲ್ಲೂ ನಮ್ಮ ಚಿತ್ರದ ಪೋಸ್ಟರ್‌ನದೇ ಮಾತು. ಈ ಸಂದರ್ಭ ಒದಗಿಸಿದ್ದಕ್ಕೆ ಶಾಸಕ ಶ್ರೀ ರೇಣುಕಾಚಾರ್ಯ ಅವರಿಗೆ ಧನ್ಯವಾದ. ಏಕೆಂದರೆ ಅವರ ಶ್ರೀಮತಿ ಅವರ ಬಳಿ ನಾನು, ಮುಖ್ಯಮಂತ್ರಿಗಳ ಬಳಿ ಈ ಪೋಸ್ಟರ್ ಬಿಡುಗಡೆ ಮಾಡಿಸಬೇಕೆಂಬ ಆಸೆ ಇದೆ ಎಂದು ಹೇಳಿದ್ದೆ. ಅವರು ಅವರ ಪತಿಗೆ ಹೇಳಿ ಇದನ್ನು ಮಾಡಿಸಿಕೊಟ್ಟರು.


ಈಗ ಕೊರೋನ ಹೆಚ್ಚಾಗುತ್ತಿದೆ. ಮುಖ್ಯಮಂತ್ರಿಗಳು ಬ್ಯುಸಿಯಾಗಿದ್ದಾರೆ. ವಾತಾವರಣ ತಿಳಿಯಾದ ಮೇಲೆ, ಈ ರಾಜಕಾರಣ ದಿನ ಇದ್ದದ್ದೆ.ತಾವು ಮೂರು ಗಂಟೆ ಬಿಡುವು ಮಾಡಿಕೊಂಡು ನಮ್ಮ ಸಿನಿಮಾ ನೋಡಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ ಎನ್ನುತ್ತಾರೆ ಪ್ರಥಮ್.

ಈಗಾಗಲೇ ಬಹು ನಿರೀಕ್ಷಿತ ಈ ಚಿತ್ರಕ್ಕಾಗಿ ಉಪೇಂದ್ರ ಅವರು ಹಾಡಿರುವ ಹಾಡು. ಧ್ರುವ ಸರ್ಜಾ ಅವರು ನೀಡಿರುವ ಧ್ವನಿಗೆ ಸಾಕಷ್ಟು ಪ್ರಶಂಸೆ ಸಿಕ್ಕಿದೆ. ಚಿತ್ರ ಯಾವಾಗ ಬಿಡುಗಡೆಯಾಗುವುದೆಂದು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಸ್ವಾರಸ್ಯ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರ ಸದ್ಯದಲ್ಲೇ ಬಿಡುಗಡೆಯಾಗಲಿದೆ. . ಹೆಚ್ ಪಿ ನಿತೇಶ್ ಈ ಚಿತ್ರದ ಸಹ ನಿರ್ಮಾಪಕರು. ಉದಯ್ ಕೆ ಮೆಹ್ತಾ ಅವರು ಚಿತ್ರಕ್ಕೆ ಕಥೆ ಬರೆದಿದ್ದು, ಚಿತ್ರಕಥೆ, ಸಂಭಾಷಣೆ ಪ್ರಥಮ್ ಬರೆದಿದ್ದಾರೆ. ನಾಲ್ಕು ಹಾಡುಗಳಿರುವ ಈ ಚಿತ್ರಕ್ಕೆ ಪ್ರದ್ಯೋತನ್ ಸಂಗೀತ ನೀಡಿದ್ದಾರೆ. ರಿಯಲ್ ಸ್ಟಾರ್ ಉಪೇಂದ್ರ ಒಂದು ಹಾಡನ್ನು ಹಾಡಿದ್ದಾರೆ. ಧ್ರುವ ಸರ್ಜಾರ ಧ್ವನಿ ಚಿತ್ರದುದ್ದಕ್ಕೂ ಕೇಳಿಸಲಿದೆ. ಡಾ॥ ವಿ.ನಾಗೇಂದ್ರ ಪ್ರಸಾದ್, ನಾಗತಿಹಳ್ಳಿ ಚಂದ್ರಶೇಖರ್, ಬಹದ್ದೂರ್ ಚೇತನ್ ಹಾಗೂ ಅರಸು ಅಂತಾರೆ ಹಾಡುಗಳನ್ನು ರಚಿಸಿದ್ದಾರೆ.

ಪ್ರಥಮ್ ಅವರೊಂದಿಗೆ ಹಿರಿಯ ನಟ ಸಾಯಿಕುಮಾರ್ ಸಹ ನಟಿಸಿದ್ದಾರೆ. ಓಂಪ್ರಕಾಶ್ ರಾವ್, ನಿಹಾರಿಕಾ ಶೆಣೈ, ಸುಶ್ಮಿತ ಜೋಶಿ, ಶೋಭ್ ರಾಜ್, ಕುರಿ ಪ್ರತಾಪ್, ಚಂದನ ರಾಘವೇಂದ್ರ, ಶಂಕರ್ ಅಶ್ವತ್ಥ್, ಮೋಹನ್ ಜುನೇಜ, ರಮ, ಬಿರಾದಾರ್, ಎಂ.ಎಸ್ ಉಮೇಶ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.




## "ವರದ"ನ ಲಿರಿಕಲ್ ಹಾಡು ಬಿಡುಗಡೆ ಮಾಡಿ ಶುಭ ಹಾರೈಸಿದ ಶ್ರೀಮುರಳಿ



ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸಿರುವ "ವರದ" ಚಿತ್ರಕ್ಕಾಗಿ ನಂದೀಶ್ ಅವರು ಬರೆದಿರುವ "ಓಂ ಹರಿ ಹರಿ ಓಂ" ಎಂಬ ಹಾಡನ್ನು "ಸರಿಗಮಪ" ಖ್ಯಾತಿಯ ಅಶ್ವಿನ್ ಶರ್ಮ ಹಾಡಿದ್ದಾರೆ. ಈ ಹಾಡಿನ ಲಿರಿಕಲ್ ವಿಡಿಯೋವನ್ನು ನಟ ಶ್ರೀಮುರಳಿ ಬಿಡುಗಡೆ ಮಾಡಿದ್ದಾರೆ.

ಉದಯಪ್ರಕಾಶ್ ನಿರ್ದೇಶನ ಹಾಗೂ ಪ್ರದೀಪ್ ವರ್ಮ ಸಂಗೀತ ನೀಡಿರುವ ಈ ಹಾಡನ್ನು ಅಶ್ವಿನ್ ಶರ್ಮ ಸೊಗಸಾಗಿ ಹಾಡಿದ್ದಾರೆ. ವಿನೋದ್ ಪ್ರಭಾಕರ್ ಅವರು ತುಂಬಾ ಚೆನ್ನಾಗಿ ಕಾಣುತ್ತಿದ್ದಾರೆ. ಒಟ್ಟಾರೆ ಇಡೀ ತಂಡಕ್ಕೆ ಒಳ್ಳೆಯದಾಗಲಿ ಎಂದು ಶ್ರೀಮುರಳಿ ಹಾರೈಸಿದ್ದಾರೆ. ಜನವರಿ 28 ರಂದು ಚಿತ್ರ ಬಿಡುಗಡೆಯಾಗಬೇಕಿತ್ತು. ಕೊರೋನ ಕಾರಣದಿಂದ ಚಿತ್ರಮಂದಿರಗಳಲ್ಲಿ ಐವತ್ತರಷ್ಟು ಭರ್ತಿಗೆ ಮಾತ್ರ ಸರ್ಕಾರ ಒಪ್ಪಿಗೆ ನೀಡಿದೆ. ಹಾಗಾಗಿ ನೂರರಷ್ಟು ಭರ್ತಿಗೆ ಒಪ್ಪಿಗೆ ಸಿಕ್ಕ ಕೂಡಲೆ ನಮ್ಮ ಚಿತ್ರ ಬಿಡುಗಡೆಯಾಗಲಿದೆ ಎನ್ನುತ್ತಾರೆ ಉದಯಪ್ರಕಾಶ್.

"ರಾಬರ್ಟ್" ಚಿತ್ರದ ನಂತರ ವಿನೋದ್ ಪ್ರಭಾಕರ್ ನಟಿಸಿರುವ ಈ ಚಿತ್ರ ಬಿಡುಗಡೆಗೆ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಉದಯ ಪ್ರಕಾಶ್ ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರದ ಸಹ ನಿರ್ಮಾಪಕರು ಸುನಿತಾ ಪ್ರಕಾಶ್.




ನಿರ್ದೇಶಕ ಆರ್ಯ ಹಾಗೂ ಪ್ರಮುಖ ಪಾತ್ರದಲ್ಲಿ ಇರುವ ನಾಯಿ